# ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

## ಕರ್ನಾಟಕ ಸರ್ಕಾರ

# ವಾರ್ಷಿಕ ವರದಿ
# 2022-’23

# ಪರಿವಿಡಿ


| ಕ್ರ. ಸಂ. | ವಿವರ | ಪುಟ ಸಂಖ್ಯೆ |
|---|---|---|
| 1. | ಪರಿಚಯ | 01 |
| 2. | ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಆರ್ಥಿಕ ವರ್ಷ 2022-'23 ರ ಅನುದಾನ ಬಿಡುಗಡೆ ಮತ್ತು ವೆಚ್ಚಗಳ ವಿವರ | 02 |
| 3. | ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ | 03 |
| 4. | ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ | 12 |
| 5. | ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ | 23 |
| 6. | ಜವಾಹರ್‌ಲಾಲ್ ನೆಹರು ತಾರಾಲಯ | 37 |
| 7. | ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ | 53 |
| 8. | ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ | 62 |
| 9. | ಬಳ್ಳಾರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 70 |
| 10. | ರಾಯಚೂರು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 82 |
| 11. | ಕಾರವಾರ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 93 |
| 12. | ಬೀದರ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 105 |
| 13. | ಡಾ. ಎಚ್. ನರಸಿಂಹಯ್ಯ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ | 108 |
| 14. | ಬಾಗಲಕೋಟೆ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 111 |
| 15. | ದಾವಣಗೆರೆ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 121 |

# ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
## *2022-'23 ನೇ ಸಾಲಿನ ವಾರ್ಷಿಕ ವರದಿ*

**ಪರಿಚಯ**:

ಇಂದಿನ ಜ್ಞಾನಾಧಾರಿತ ಆರ್ಥಿಕತೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವು ಬೆಳವಣಿಗೆ ಮತ್ತು ಅಭಿವೃದ್ಧಿಯ ಬಹು ಶಕ್ತಿಯುತ ಚಾಲನಾಶಕ್ತಿಯಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನವು, ಬಹುತೇಕ ತಂತ್ರಜ್ಞಾನ ಅಭಿವೃದ್ಧಿಯ ಮೂಲಕ ನಾವು ಬದುಕುವ ರೀತಿಯ ಮೇಲೆ ಅಗಾಧ ಪರಿಣಾಮವನ್ನು ಉಂಟು ಮಾಡಿದ್ದು, ನಮ್ಮ ದೈನಂದಿನ ಜನಜೀವನವನ್ನು ಉತ್ತಮ ಹಾಗೂ ಸುಲಭಪಡಿಸುವಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಕೊಡುಗೆ ಅನನ್ಯವಾಗಿದೆ. ಆದುದರಿಂದ, ವಿಜ್ಞಾನ ಮತ್ತು ತಂತ್ರಜ್ಞಾನಗಳ ಅಭಿವೃದ್ಧಿಯು ವಿಶೇಷವಾಗಿ ಜನಜೀವನ ಮಟ್ಟವನ್ನು ಹೆಚ್ಚಿಸಲು, ಮೂಢನಂಬಿಕೆ ಮತ್ತು ಅಂಧಶ್ರದ್ಧೆಯನ್ನು ತೊಲಗಿಸಲು, ಸಂಪತ್ತನ್ನು ವೃದ್ಧಿಸಲು ಹಾಗೂ ನೈಸರ್ಗಿಕ ಸಂಪನ್ಮೂಲಗಳು ಮತ್ತು ಜೀವ ವೈವಿಧ್ಯತೆಯನ್ನು ಕಾಪಾಡಿಕೊಳ್ಳಲು ಬಹಳ ಮುಖ್ಯವಾಗಿದೆ.

ಈ ಹಿನ್ನೆಲೆಯಲ್ಲಿ, ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅಭಿವೃದ್ಧಿಯ ಎಲ್ಲಾ ರಂಗಗಳಲ್ಲೂ ಮುಖ್ಯವಾಹಿನಿಗೆ ತರುವುದು ಅವಶ್ಯವಿದ್ದು, ವೈಜ್ಞಾನಿಕ ಮುನ್ನಡೆ ಮತ್ತು ತಂತ್ರಜ್ಞಾನ ಆವಿಷ್ಕಾರಗಳನ್ನು ಸಮಾಜದ ಒಳಿತಿಗಾಗಿ, ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬಳಸಿಕೊಳ್ಳುವಂತಾಗಬೇಕಾಗಿದೆ.

ಆದುದರಿಂದ, ವೈಜ್ಞಾನಿಕ ಅಭಿವೃದ್ಧಿಯ ಮಾಹಿತಿಯನ್ನು ಪ್ರಸಾರ ಮಾಡುವ ಮೂಲಕ ವೈಜ್ಞಾನಿಕ ಅರಿವನ್ನು ಮೂಢಿಸಿ, ವೈಜ್ಞಾನಿಕ ಮನೋಭಾವನೆಯನ್ನು ಸಮಾಜದ ಎಲ್ಲಾ ಸ್ತರಗಳಲ್ಲೂ ಬೆಳೆಸಿ, ಗ್ರಾಮೀಣ ಜನರ ಜೀವನಮಟ್ಟವನ್ನು ಉತ್ತಮಗೊಳಿಸಬೇಕಾಗಿದೆ. ಅಲ್ಲದೇ, ವೈಜ್ಞಾನಿಕ ಜಾಗೃತಿಯು ಸಂಪೂರ್ಣ ಸಾಮಾಜಿಕ ಚೌಕಟ್ಟಿನ ಬಲವರ್ಧನೆಗೆ ಮತ್ತು ಸಬಲೀಕರಣಕ್ಕೆ ಹಾಗೂ ಹೆಚ್ಚುತ್ತಿರುವ ಇಂದಿನ ಜಾಗತಿಕ ಮಾರುಕಟ್ಟೆಯಲ್ಲಿ ಜನಸಾಮಾನ್ಯರ ಸಮಗ್ರ ಅಭಿವೃದ್ಧಿಯನ್ನು ಸಾಧಿಸಲು ಸಹ ನೆರವಾಗಲಿದೆ.

ಈ ನಿಟ್ಟಿನಲ್ಲಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಈ ಕೆಳಕಂಡ ಅಂಗ ಸಂಸ್ಥೆಗಳು, ವೈಜ್ಞಾನಿಕ ಸಂಸ್ಥೆಗಳು ಮತ್ತು ವಿಜ್ಞಾನ ಕೇಂದ್ರಗಳ ಮುಖಾಂತರ ನಾಗರೀಕರ ಸಬಲೀಕರಣ ಹಾಗೂ ಸರ್ವರನ್ನೊಳಗೊಂಡ ಜಾಗೃತ ಮತ್ತು ಸುಸ್ಥಿರ ಸಮಾಜವು ರಾಜ್ಯಾದ್ಯಂತ ಬೆಳೆಯಲು ಅನುವಾಗುವಂತೆ ಹಲವಾರು ವಿಜ್ಞಾನ ಮತ್ತು ತಂತ್ರಜ್ಞಾನ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಹಮ್ಮಿಕೊಂಡು ಬರುತ್ತಿದೆ:

1. **ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ**
2. **ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ**
3. **ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ**
4. **ಜವಾಹರ್‌ಲಾಲ್ ನೆಹರು ತಾರಾಲಯ**
5. **ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ**
6. **ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**
7. **ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಳ್ಳಾರಿ**
8. **ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ರಾಯಚೂರು**

9. ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ಕಾರವಾರ
10. ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ಬೀದರ
11. ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ಚಿಕ್ಕಬಳ್ಳಾಪುರ
12. ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ
13. ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ದಾವಣಗೆರೆ

## ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ
## ಆರ್ಥಿಕ ವರ್ಷ 2022-'23 ರ ಅನುದಾನ ಬಿಡುಗಡೆ ಮತ್ತು ವೆಚ್ಚಗಳ ವಿವರ

(ರೂ. ಲಕ್ಷಗಳಲ್ಲಿ)

| ಕ್ರ ಸಂ | ಯೋಜನೆಗಳು/ ಕಾರ್ಯಕ್ರಮಗಳು | ಅನುದಾನ ಹಂಚಿಕೆ | ಬಿಡುಗಡೆ | ವೆಚ್ಚ | ಉಳಿಕೆ |
|---|---|---|---|---|---|
| 1 | ವೈಜ್ಞಾನಿಕ ಸಂಸ್ಥೆಗಳಿಗೆ ಸಹಾಯಾನುದಾನ: ಇತರೆ ಖರ್ಚುಗಳು 3425-60-200-0-01 (059) | 1500.00 | 1500.00 | 1241.44 | 258.56 |
| 2 | ವಿಜ್ಞಾನ ಮತ್ತು ತಂತ್ರಜ್ಞಾನ ಯೋಜನೆಗಳು: ಇತರೆ ಖರ್ಚುಗಳು 3425-60-200-0-16 (059) | 100.00 | 100.00 | 97.76 | 2.24 |
| 3 | ನ್ಯಾನೋ ತಂತ್ರಜ್ಞಾನಕ್ಕೆ ಬೆಂಬಲ ಇತರೆ ಖರ್ಚುಗಳು 3425-60-200-0-19(059) | 100.00 | 100.00 | - | 100.00 |
| 4 | ಜಿಲ್ಲಾ ವಿಜ್ಞಾನ ಕೇಂದ್ರಗಳು | | | | |
| | ಇತರೆ ಖರ್ಚುಗಳು: 3425-60-200-0-20 (059) | 100.00 | 100.00 | 3.75 | 96.25 |
| | ಸಹಯಾನುದಾನ - ವೇತನಗಳು: 3425-60-200-0-20 (101) | *158.00 | - | - | - |
| 5 | ವಿಜ್ಞಾನ ಮತ್ತು ತಂತ್ರಜ್ಞಾನ ಆಯೋಗ: ಇತರೆ ಖರ್ಚುಗಳು 3425-60-600-0-02 (059) | 100.00 | 100.00 | - | 100.00 |
| | ಒಟ್ಟು ಮೊತ್ತ | 2058.00 | 1900.00 | 1342.95 | *557.05 |

* ಲೆಕ್ಕಶೀರ್ಷಿಕೆ 3425-60-200-0-20 (101) ಅಡಿಯಲ್ಲಿ ಹಂಚಿಕೆಯಾಗಿರುವ ರೂ. 158.00 ಲಕ್ಷಗಳ ವೇತನದ ಅನುದಾನವು ಇಲಾಖೆಯ DDO ರವರಿಂದ HRMS ಮೂಲಕ ಪಿಲಿಕುಳ ಮತ್ತು ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಖಾಯಂ ಸಿಬ್ಬಂದಿಗಳ ವೇತನವಾಗಿ ಪಾವತಿಸಲಾಗಿರುತ್ತದೆ.
* ಉಳಿಕೆಯಾಗಿರುವ ರೂ.557.05 ಲಕ್ಷಗಳು ಉದ್ದೇಶಿತ ಯೋಜನೆಗಳ ಅನುಷ್ಠಾನಕ್ಕಾಗಿ ಮೀಸಲಿರಿಸಿರುವ ಬದ್ಧವಾದ ಮೊತ್ತವಾಗಿರುತ್ತದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗ ಸಂಸ್ಥೆಗಳ ಪರಿಣತಿಯಾಧಾರದಲ್ಲಿ ಹಲವಾರು ವಿಜ್ಞಾನ ಮತ್ತು ತಂತ್ರಜ್ಞಾನ ಯೋಜನೆಗಳನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲಾಗುತ್ತಿದ್ದು, 2022-23 ನೇ ಸಾಲಿನಲ್ಲಿ ಎಲ್ಲಾ ಅಂಗ ಸಂಸ್ಥೆಗಳ ಮೂಲಕ ಕೈಗೊಳ್ಳಲಾದ ಕಾರ್ಯಕ್ರಮಗಳ ವಿವರ ಮುಂದಿನ ಭಾಗದಲ್ಲಿ ನೀಡಲಾಗಿದೆ.

## ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್)

ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
#24/2, 'ವಿಜ್ಞಾನ ಭವನ', 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560 070

**ಪರಿಚಯ**:

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿಯು (Karnataka Science and Technology Promotion Society - KSTePS) 2013 ಲ್ಲಿ ಕರ್ನಾಟಕ ಸರ್ಕಾರವು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿಯಲ್ಲಿ, ೧೯೬೦ರ ಸೊಸೈಟಿಗಳ ನೋಂದಣಿ ಕಾಯ್ದೆಯಡಿ ಸ್ಥಾಪಿಸಲಾದ ಒಂದು ಸ್ವಾಯತ್ತ ಸಂಸ್ಥೆಯಾಗಿದೆ. ಕೆಸ್ಟೆಪ್ಸ್ನ ಧ್ಯೇಯೋದ್ದೇಶಗಳು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನೀತಿ ನಿರೂಪಣೆ ಮತ್ತು ಉಪಕ್ರಮಗಳ ರಚನೆ ಹಾಗೂ ಅನುಷ್ಠಾನದ ನೆರವಿನ ಒಂದು ವ್ಯವಸ್ಥೆಯಾಗಿ ಕಾರ್ಯನಿರ್ವಹಿಸಿ, ರಾಜ್ಯಾದ್ಯಂತ ಇಲಾಖೆಯ ಕಾರ್ಯಕ್ರಮಗಳ ನಿಧಿಗಳ ಹಂಚಿಕೆಗೆ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುವುದಾಗಿದೆ. ಅಲ್ಲದೆ, ರಾಜ್ಯದ ದೀರ್ಘಾವಧಿ ಅಭಿವೃದ್ಧಿಗೆ ಉಪಯುಕ್ತವಾಗುವಂತಹ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿರುವ ಆದ್ಯತಾ ವಲಯಗಳನ್ನು ಗುರುತಿಸಿ ಅವುಗಳನ್ನು ಅಭಿವೃದ್ಧಿಪಡಿಸುವುದಾಗಿದೆ. ಸೊಸೈಟಿಯು ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಂದ ಸದಸ್ಯರುಗಳನ್ನು ಹೊಂದಿದೆ. ನಿರ್ದೇಶಕರು (ತಾಂತ್ರಿಕ), ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಇವರು ಕೆಸ್ಟೆಪ್ಸ್ ಸಂಸ್ಥೆಯ ಸದಸ್ಯ ಕಾರ್ಯದರ್ಶಿಗಳು ಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿರುತ್ತಾರೆ.

ಕೆಸ್ಟೆಪ್ಸ್ ಸಂಸ್ಥೆಯು ಸಂಯೋಜಿಸಿದ ಪ್ರಮುಖ ಕಾರ್ಯಕ್ರಮಗಳು ಈ ಕೆಳಗಿನಂತಿವೆ:

### 1. ವಿಜ್ಞಾನ ಕೇಂದ್ರಗಳು ಮತ್ತು ತಾರಾಲಯಗಳು

### 1.1. ಪ್ರಾದೇಶಿಕ ವಿಜ್ಞಾನ ಕೇಂದ್ರಗಳು:

ವಿಜ್ಞಾನ ಮತ್ತು ತಂತ್ರಜ್ಞಾನ ಆವಿಷ್ಕಾರಗಳನ್ನು ಜನಸಾಮಾನ್ಯರಿಗೆ ಪರಿಚಯಿಸಲು ಹಾಗೂ ವಿದ್ಯಾರ್ಥಿಗಳಲ್ಲಿ ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಚಿಂತನೆ ಮತ್ತು ವೈಚಾರಿಕತೆಗಳನ್ನು ಬೆಳೆಸಲು ಅನುವಾಗುವಂತೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಆವರಣದಲ್ಲಿ ಹಾಗೂ ಮಂಗಳೂರಿನ ಪಿಲಿಕುಳ ನಿಸರ್ಗಧಾಮದಲ್ಲಿ ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಭಾರತ ಸರ್ಕಾರದ ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಸ್ಥಾಪಿಸಲಾಗಿದ್ದು, ಈ ಎರಡು ಕೇಂದ್ರಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ.





**ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಮಂಗಳೂರು**

**ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ ಧಾರವಾಡ**

1.2. **ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರಗಳು**:

ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರಗಳು ಸಣ್ಣ ಪ್ರಮಾಣದ ಪ್ರಾದೇಶಿಕ ವಿಜ್ಞಾನ ಕೇಂದ್ರಗಳಾಗಿದ್ದು, ವಿಜ್ಞಾನವನ್ನು ಜನ ಸಾಮಾನ್ಯರೆಡೆಗೆ ಕೊಂಡೊಯ್ದು, ಜನರನ್ನು ವಿಜ್ಞಾನದ ಕಡೆಗೆ ಕರೆದೊಯ್ಯುವ ದೂರದೃಷ್ಟಿಯೊಂದಿಗೆ ಹಾಗೂ ರಾಜ್ಯಾದ್ಯಂತ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಗಳನ್ನು ಪ್ರಚುರಪಡಿಸಲು ರಾಜ್ಯ ಸರ್ಕಾರದ ಸಂಪೂರ್ಣ ಅನುದಾನದೊಂದಿಗೆ, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ವಿವಿಧ ಹಂತಗಳಲ್ಲಿ ಸ್ಥಾಪಿಸಲಾಗುತ್ತಿದೆ. ಪ್ರಸ್ತುತ, ಬಳ್ಳಾರಿ, ಬೀದರ್, ಕಾರವಾರ, ಚಿಕ್ಕಬಳ್ಳಾಪುರ, ರಾಯಚೂರು, ಬಾಗಲಕೋಟೆ, ದಾವಣಗೆರೆ ಮತ್ತು ಕೊಪ್ಪಳ, ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಚಿತ್ತಾಪುರ, ಹಾವೇರಿ, ತುಮಕೂರು, ಉಡುಪಿ, ಚಿಕ್ಕಮಗಳೂರು, ಆದಿಚುಂಚನಗಿರಿ, ಹಾಸನ, ಮಡಿಕೇರಿ, ಚಾಮರಾಜನಗರ ಮತ್ತು ಯಾದಗಿರಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಕಾಮಗಾರಿ ಪ್ರಗತಿಯಲ್ಲಿದೆ.

1.3. **ತಾರಾಲಯಗಳು**:

ಖಗೋಳ ಶಾಸ್ತ್ರ ಸಂಬಂಧಿತ ಶಿಕ್ಷಣದ ಪರಿಕಲ್ಪನೆಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ, ನಕ್ಷತ್ರ ಮತ್ತು ಗ್ರಹಗಳನ್ನು ಹೊಂದಿದ ರಾತ್ರಿ ಆಕಾಶದ ನೋಟವನ್ನು ಒಳಾಂಗಣದಲ್ಲಿ ಸೃಷ್ಟಿಸುವಂತಹ ವಿಶೇಷ ಗೋಳ ಹಾಗೂ ಅತ್ಯಾಧುನಿಕ ತಂತ್ರಜ್ಞಾನದ ಪ್ರೊಜೆಕ್ಷನ್ ವ್ಯವಸ್ಥೆಯುಳ್ಳ ತಾರಾಲಯಗಳನ್ನು ರಾಜ್ಯದ ಆಯ್ದ ನಗರಗಳಲ್ಲಿ ಸ್ಥಾಪಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಪ್ರಸ್ತುತ, ಜವಹಾರ್‌ಲಾಲ್ ನೆಹರು ತಾರಾಲಯ, ಬೆಂಗಳೂರು ಮತ್ತು ಸ್ವಾಮಿ ವಿವೇಕಾನಂದ ತಾರಾಲಯ, ಮಂಗಳೂರು ಕಾರ್ಯನಿರ್ವಹಿಸುತ್ತಿವೆ. ಗದಗದಲ್ಲಿ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು, ಉದ್ಘಾಟಿಸಲಾಗಿದೆ. ಅಲ್ಲದೇ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ತಾರಾಲಯ ಸ್ಥಾಪನೆಯು ಪ್ರಗತಿಯಲ್ಲಿದೆ.

1.4. **ವಿಜ್ಞಾನ ಕೇಂದ್ರ ಮತ್ತು ತಾರಾಲಯಗಳ ಉದ್ಘಾಟನೆ:**

ಕೆಸ್ಟೆಪ್ಸ್ ಸಂಸ್ಥೆಯು ಪ್ರಸ್ತುತ ಸಾಲಿನಲ್ಲಿ, ಬಾಗಲಕೋಟೆ, ದಾವಣಗೆರೆ, ಕೊಪ್ಪಳ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ಗದಗ ತಾರಾಲಯವನ್ನು ಆಯಾಯಾ ಜಿಲ್ಲಾಡಳಿತ ಮತ್ತು ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಉದ್ಘಾಟಿಸಲಾಗಿರುತ್ತದೆ.

| ಕ್ರ. ಸಂ. | ಕೇಂದ್ರದ ಹೆಸರು | ಉದ್ಘಾಟನೆಯ | ಚಿತ್ರ |
|---|---|---|---|

| | | ದಿನಾಂಕ | |
|---|---|---|---|
| 1 | ಬಾಗಲಕೋಟೆ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ | 29.12.2022 |  |
| 2 | ದಾವಣಗೆರೆ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ | 04.02.2023 |  |
| 3 | ಗದಗ ತಾರಾಲಯ | 19.03.2023 |  |

| | | | |
|---|---|---|---|
| 4 | ಕೊಪ್ಪಳ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ | 21.03.2023 |  |


**2. ಬೆಂಗಳೂರಿನಲ್ಲಿ ವಿಜ್ಞಾನ ಗ್ಯಾಲರಿ:**

ವಿಜ್ಞಾನ ಗ್ಯಾಲರಿ ಬೆಂಗಳೂರು ರಾಜ್ಯ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಐರ್ಲೆಂಡ್‌ನ ಡಬ್ಲಿನ್‌ನಲ್ಲಿರುವ ಸೈನ್ಸ್ ಗ್ಯಾಲರಿ ಅಂತಾರಾಷ್ಟ್ರೀಯ ಪ್ರತಿಷ್ಠಾನದ ಒಡಂಬಡಿಕೆಯೊಂದಿಗೆ ಬೆಂಗಳೂರಿನಲ್ಲಿರುವ ಭಾರತೀಯ ವಿಜ್ಞಾನ ಸಂಸ್ಥೆ, ರಾಷ್ಟ್ರೀಯ ಜೈವಿಕ ವಿಜ್ಞಾನ ಕೇಂದ್ರ ಹಾಗೂ ಸೃಷ್ಟಿ ಕಲಾವಿನ್ಯಾಸ ಮತ್ತು ತಂತ್ರಜ್ಞಾನ ಸಂಸ್ಥೆಗಳ ಶೈಕ್ಷಣಿಕ ಪಾಲುದಾರಿಕೆಗಳೊಂದಿಗೆ ಅನುಷ್ಠಾನಗೊಳಿಸುತ್ತಿರುವ ಒಂದು ಪ್ರಮುಖ ಯೋಜನೆಯಾಗಿದೆ.

ಈ ವಿಜ್ಞಾನ ಗ್ಯಾಲರಿಯು ಯುವಕರಿಗೆ ವಿಜ್ಞಾನ, ಕಲೆ ಮತ್ತು ಸಂಸ್ಕೃತಿಗಳ ಸಂಗಮಗಳ ಆವಿಷ್ಕಾರಗಳು ಹಾಗೂ ವಿಜ್ಞಾನದಲ್ಲಿನ ನವೀನ ಅವಕಾಶಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ. ಸದರಿ ವಿಜ್ಞಾನ ಗ್ಯಾಲರಿಯನ್ನು ಸ್ಥಾಪಿಸಲು ಸರ್ಕಾರವು ಹೆಬ್ಬಾಳದ ಭಾರತೀಯ ಪಶುಸಂಗೋಪನಾ ಸಂಸ್ಥೆಯ ಆವರಣದಲ್ಲಿ 1 ಎಕರೆ 26 ಗುಂಟೆ ಜಾಗವನ್ನು ನೀಡಿದ್ದು, ಸದರಿ ಕೇಂದ್ರದ ಕಟ್ಟಡವನ್ನು ರೂ. 86.75 ಕೋಟಿಗಳ ಅಂದಾಜು ವೆಚ್ಚದಲ್ಲಿ ಸ್ಥಾಪಿಸಲಾಗುತ್ತಿದೆ. ಪ್ರಸ್ತುತ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದ್ದು, ಕಟ್ಟಡದ ಮೊದಲ ಹಂತವನ್ನು ದಿನಾಂಕ: 18.03.2023 ರಂದು ಉದ್ಘಾಟನೆ ಮಾಡಲಾಗಿದೆ.



ವಿಜ್ಞಾನ ಗ್ಯಾಲರಿಯ ವಾಸ್ತುವಿನ್ಯಾಸ




ಮೊದಲ ಹಂತದ ಕಟ್ಟಡ



ಸನ್ಮಾನ್ಯ ಮುಖ್ಯಮಂತ್ರಿಗಳಿಂದ ವಿಜ್ಞಾನ ಗ್ಯಾಲರಿ ಕಟ್ಟಡದ ಉದ್ಘಾಟನೆ

### 3. ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ:

ಸರ್ಕಾರವು ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹವನ್ನು 2008 ರಲ್ಲಿ ಖ್ಯಾತ ವಿಜ್ಞಾನಿ ಭಾರತರತ್ನ ಪ್ರೊ. ಸಿ. ಎನ್. ಆರ್. ರಾವ್, ಎಫ್.ಆರ್.ಎಸ್., ರಾಷ್ಟ್ರೀಯ ಸಂಶೋಧನಾ ಪ್ರಾಧ್ಯಾಪಕರು ಹಾಗೂ ಗೌರವಾನ್ವಿತ ಅಧ್ಯಕ್ಷರು, ಜೆ.ಎನ್.ಸಿ.ಎಸ್.ಎ.ಆರ್., ರವರ ಅಧ್ಯಕ್ಷತೆಯಲ್ಲಿ ರಚಿಸಿರುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹವು ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ ದಾರ್ಶನಿಕ ಸಮೂಹದ ಯೋಜನೆಗಳ ಸಂಯೋಜನೆ ಹಾಗೂ ಅನುಷ್ಠಾನಕ್ಕೆ ಮಾರ್ಗದರ್ಶನ ನೀಡುವ ಸರ್ವೋನ್ನತ ಮಂಡಳಿಯಾಗಿ ಕಾರ್ಯನಿರ್ವಹಿಸುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದಿಂದ ಕೈಗೊಂಡಿರುವ ಪ್ರಮುಖ ಯೋಜನೆಗಳು ಈ ಕೆಳಕಂಡಂತಿವೆ:

**ಅ) ಸಂಶೋಧನಾ ಶ್ರೇಷ್ಠತೆಗಾಗಿ ಅನುದಾನ (GRE)**

ಈ ಯೋಜನೆಯಡಿಯಲ್ಲಿ, ವಿಜ್ಞಾನ, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಕೈಗೊಳ್ಳಲು ಅನುದಾನವನ್ನು ಒದಗಿಸಲಾಗುವುದು.

**ಆ) ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲ ಸೌಕರ್ಯಾಭಿವೃದ್ಧಿಗೆ ನಿಧಿ (K-FIST L1 & L2)**

ರಾಜ್ಯದಲ್ಲಿನ ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ಸಂಶೋಧನಾ ಕೇಂದ್ರಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಮೂಲ ಸೌಕರ್ಯಗಳನ್ನು ಸೃಜಿಸುವುದು ಹಾಗೂ ಅಸ್ತಿತ್ವದಲ್ಲಿರುವ ಮೂಲಸೌಕರ್ಯ ಸೌಲಭ್ಯಗಳನ್ನು ಉನ್ನತೀಕರಿಸಿ ಶಿಕ್ಷಣ ಮತ್ತು ಸಂಶೋಧನೆಯ ಮಟ್ಟವನ್ನು ಹೆಚ್ಚಿಸುವುದು ಈ ಯೋಜನೆಯ ಉದ್ದೇಶವಾಗಿದೆ.

**ಇ) ಆರಂಭಿಕ ವೃತ್ತಿ ಸಂಶೋಧನಾ ಪ್ರಶಸ್ತಿ (ECRA)**

ಯುವ ಸಂಶೋಧಕರು ತಾವು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಲ್ಲಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿ ಸಂಶೋಧನೆಯನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸಲು ಅನುದಾನವನ್ನು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

**ಈ) ಅತ್ಯುತ್ತಮ ಸಂಶೋಧನಾ ಪ್ರಕಟಣೆಗಾಗಿ ಪ್ರಶಸ್ತಿ (AORP)**

ಸಂಶೋಧನಾ ಲೇಖನಗಳನ್ನು ಪ್ರತಿಷ್ಠಿತ ಮತ್ತು ಪೀರ್-ರಿವ್ಯೂಡ್ ವೈಜ್ಞಾನಿಕ ನಿಯತಕಾಲಿಕೆಗಳಲ್ಲಿ ಪ್ರಕಟಿಸಿದ ಅತ್ಯುತ್ತಮ ಸಂಶೋಧಕರು ಮತ್ತು ಅಧ್ಯಾಪಕರುಗಳನ್ನು ಪ್ರೋತ್ಸಾಹಿಸಿ ಪುರಸ್ಕರಿಸಲು ನಗದು ಪ್ರಶಸ್ತಿಯನ್ನು ನೀಡುವುದು ಈ ಯೋಜನೆಯ ಉದ್ದೇಶವಾಗಿದೆ.

**ಉ) ಬೋಧಕರಿಗೆ ತರಬೇತಿ ಕಾರ್ಯಾಗಾರ (FDP)**

ಈ ಯೋಜನೆಯಡಿ, ವಿಜ್ಞಾನ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಅಧ್ಯಾಪಕರುಗಳಿಗೆ ಕೈಗಾರಿಕೆಗಳಿಗೆ ಅಗತ್ಯವಿರುವ ಇತ್ತೀಚಿನ ತಂತ್ರಜ್ಞಾನಗಳ ಕುರಿತ ಜ್ಞಾನ ಮತ್ತು ಮತ್ತು ಕೌಶಲ್ಯ ವನ್ನು ಹೆಚ್ಚಿಸಲು ಹಾಗೂ ಪ್ರತಿಯಾಗಿ ಇವುಗಳನ್ನು ವಿದ್ಯಾರ್ಥಿಗಳಿಗೆ ಪ್ರಸರಿಸಲು

ಕಾರ್ಯಾಗಾರ ನಡೆಸಲು ಅನುದಾನ ನೀಡಲಾಗುವುದು.

ಪ್ರಸ್ತುತ ವರ್ಷದಲ್ಲಿ, 2021-22ನೇ ಸಾಲಿನ ಒಟ್ಟು 134 ಫಲಾನುಭವಿಗಳನ್ನು ವಿವಿಧ ವಿತಂದಾಸ ಯೋಜನೆಗಳಡಿ ಆಯ್ಕೆ ಮಾಡಿ 122 ಫಲಾನುಭವಿಗಳಿಗೆ ಒಟ್ಟು ರೂ. 6.82 ಕೋಟಿಗಳನ್ನು ಮೊದಲ ಕಂತಿನ ಅನುದಾನವಾಗಿ ಬಿಡುಗಡೆ ಮಾಡಲಾಗಿದೆ. ಅಲ್ಲದೆ, ಹಿಂದಿನ ವರ್ಷಗಳ ಫಲಾನುಭವಿಗಳಿಗೆ ಎರಡು ಮತ್ತು ಮೂರನೇ ಕಂತಿನ ಅನುದಾನವಾಗಿ ರೂ. Rs. 15.71 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಮುಂದುವರಿದು, ವಿತಂದಾಸದ ಪರಿಷ್ಕೃತ ಯೋಜನೆಗಳಡಿ 2022-23ನೇ ಸಾಲಿನ ಫಲಾನುಭವಿಗಳನ್ನು ಆಯ್ಕೆ ಮಾಡಲು ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ.

4. **ಡಿ.ಎಸ್.ಟಿ. ಪಿ.ಹೆಚ್.ಡಿ. ಶಿಷ್ಯವೇತನ**:

ವಿಜ್ಞಾನ ಮತ್ತು ಇಂಜಿನಿಯರಿಂಗ್' ವಿಷಯಗಳಲ್ಲಿ ಸಂಶೋಧನೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಆರ್ಥಿಕ ವರ್ಷ 2018-'19 ರಿಂದ ಹೊಸ ಯೋಜನೆಯಾಗಿ 'ಕರ್ನಾಟಕ ಡಿಎಸ್‌ಟಿ ಪಿಹೆಚ್.ಡಿ. ಶಿಷ್ಯವೇತನವನ್ನು ಪ್ರಾರಂಭಿಸಲಾಗಿದೆ. ವಿಜ್ಞಾನ ಮತ್ತು ಇಂಜಿನಿಯರಿಂಗ್' ವಿಷಯಗಳಲ್ಲಿ ಸಂಶೋಧನಾ ಕಾರ್ಯಕ್ರಮದ ವಿದ್ಯಾರ್ಥಿಗಳು ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿಗಳು. ಪ್ರಸ್ತುತ ಸಾಲಿನಲ್ಲಿ ಒಟ್ಟು 60 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಹಿಂದಿನ ವರ್ಷದ ಅಭ್ಯರ್ಥಿಗಳು ಸೇರಿದಂತೆ ಒಟ್ಟು 199 ವಿದ್ಯಾರ್ಥಿಗಳು ಶಿಷ್ಯವೇತನವನ್ನು ಪಡೆಯುತ್ತಿದ್ದಾರೆ.

5. **ವಿಜ್ಞಾನ ಪ್ರತಿಭಾ ಶೋಧನೆ:**

ರಾಜ್ಯದಲ್ಲಿ ಪ್ರತಿಭಾನ್ವಿತ ಪದವಿ ಪೂರ್ವ ವಿಜ್ಞಾನ ವಿದ್ಯಾರ್ಥಿಗಳನ್ನು ಗುರುತಿಸಿ, ಇವರಲ್ಲಿ ಅನ್ವೇಷಣಾ ಪ್ರವೃತ್ತಿ ಹಾಗೂ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸುವುದರ ಜೊತೆಗೆ ವಿಜ್ಞಾನದೆಡೆಗಿನ ಅವರ ಆಸಕ್ತಿಯನ್ನು ವೃತ್ತಿ ಜೀವನವಾಗಿ ಪರಿವರ್ತಿಸುವ ನಿಟ್ಟಿನಲ್ಲಿ 2020-21ನೇ ಸಾಲಿನಿಂದ ಹೊಸ ಯೋಜನೆಯಾಗಿ ವಿಜ್ಞಾನ ಪ್ರತಿಭಾ ಶೋಧನೆ ಯೊಜನೆಯನ್ನು ಪ್ರಾರಂಭಿಸಲಾಗಿದೆ. ಪ್ರತಿ ಶೈಕ್ಷಣಿಕ ಜಿಲ್ಲೆಗಳಲ್ಲಿ ಟಾಪ್ 10 ವಿದ್ಯಾರ್ಥಿಗಳಂತೆ ಒಟ್ಟು 320 ವಿದ್ಯಾರ್ಥಿಗಳನ್ನು ಅವರು ಪಡೆದ ಎಸ್.ಎಸ್. ಎಲ್.ಸಿ. ಪರೀಕ್ಷೆಯ ಮೆರಿಟ್ ಆಧಾರದ ಮೇಲೆ ಪ್ರಥಮ ವರ್ಷದ ಪಿಯುಸಿ ವಿಜ್ಞಾನ ವಿಭಾಗಕ್ಕೆ ಸರ್ಕಾರಿ ಕಾಲೇಜುಗಳಲ್ಲಿ ದಾಖಲಾದ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ರೂ. 1,000/- ಗಳಂತೆ 2 ವರ್ಷದ ಅವಧಿಯಲ್ಲಿ ಒಟ್ಟು 18 ತಿಂಗಳು ಶಿಷ್ಯವೇತನವನ್ನು ನೀಡಲಾಗುತ್ತಿದೆ. ಪ್ರಸ್ತುತ, ಹಿಂದಿನ ವರ್ಷದ ವಿದ್ಯಾರ್ಥಿಗಳನ್ನೊಳಗೊಂಡಂತೆ ಒಟ್ಟು 968 ವಿದ್ಯಾರ್ಥಿಗಳು ಶಿಷ್ಯವೇತನವನ್ನು ಪಡೆಯುತ್ತಿದ್ದಾರೆ. ಅಲ್ಲದೇ, ಸದರಿ ವಿದ್ಯಾರ್ಥಿಗಳಿಗೆ ಆನ್ ಲೈನ್ ಮೂಲಕ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ವತಿಯಿಂದ ವಿಜ್ಞಾನ ಶಿಕ್ಷಣವನ್ನು ನೀಡಲಾಗುತ್ತಿದೆ.

6. **ವಿಜ್ಞಾನ ಮಾಲಿಕೆ**--೫೦೦:

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಹೊಸ ಸಂಶೋಧನೆಗಳು, ನಮ್ಮ ನಿತ್ಯ ಜೀವನದಲ್ಲಿ ಕಂಡು ಬರುವ, ನಾವು ಬಳಸುವ ಉಪಕರಣಗಳ ಹಿಂದಿರುವ ವೈಜ್ಞಾನಿಕ ಅಂಶಗಳು, ದೇಶದ ವೈಜ್ಞಾನಿಕ ಸಾಧನೆಗಳ ಬಗೆಗಿನ ಅರಿವು ಮತ್ತು ಜನ ಸಾಮಾನ್ಯರಲ್ಲಿ ವೈಜ್ಞಾನಿಕ ಮನೋಭಾವವನ್ನು ಮೂಢಿಸುವ ಉದ್ದೇಶದಿಂದ 2021-22ನೇ ಸಾಲಿನಲ್ಲಿ ಹೊಸ ಯೋಜನೆಯಾಗಿ ವಿಜ್ಞಾನ ಮಾಲಿಕೆ-500ಎಂಬ ಆಕಾಶವಾಣಿ ಕಾರ್ಯಕ್ರಮವನ್ನು

ಪ್ರಾರಂಭಿಸಲಾಗಿದೆ. ಸದರಿ ಕಾರ್ಯಕ್ರಮವನ್ನು ೨೦೨೧ನೇ ಆಗಸ್ಟ 15 ರಿಂದ 'ನಿತ್ಯ ವಿಜ್ಞಾನ' ಎಂಬ ಶೀರ್ಷಿಕೆಯಡಿ ಆಕಾಶವಾಣಿ, ಬೆಂಗಳೂರು ಕೇಂದ್ರದ ಸಹಯೋಗದೊಂದಿಗೆ ಸರಣಿ ಕಾರ್ಯಕ್ರಮವಾಗಿ ಬಿತ್ತರಿಸಲಾಗುತ್ತಿದೆ. ಈ ಕಾರ್ಯಕ್ರಮವು ಆಕಾಶವಾಣಿಯ ಎಲ್ಲಾ ಬಾನುಲಿ ಕೇಂದ್ರಗಳಿಂದ ಮತ್ತು ಎಫ್.ಎಂ.ರೇನ್ ಬೋ (101.3 mhz) ಹಾಗೂ ಬೆಂಗಳೂರು ವಿವಿಧ ಭಾರತಿ (102.6 mhz) ಕೇಂದ್ರಗಳಿಂದ ಪ್ರಸಾರ ಮಾಡುತ್ತಿದ್ದು, ಸದರಿ ಕಾರ್ಯಕ್ರಮದಲ್ಲಿ ನಾಡಿನ ಹಿರಿಯ ವಿಜ್ಞಾನ ಲೇಖಕರು ಭಾಗವಹಿಸುತ್ತಿದ್ದಾರೆ. ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಜನ ಸಾಮಾನ್ಯರು ಈ ಕಾರ್ಯಕ್ರಮದ ಪ್ರಯೋಜನ ಪಡೆಯುತ್ತಿದ್ದು, ಸರಿ ಸುಮಾರು 365 ರೇಡಿಯೋ ಸಂಚಿಕೆಗಳನ್ನು ಯಶಸ್ವಿಯಾಗಿ ಪ್ರಸಾರ ಮಾಡಲಾಗಿದೆ.

7. **ಸಂಚಾರಿ ತಾರಾಲಯ:**
ರಾಜ್ಯದಲ್ಲಿ ಸಂಚಾರಿ ಡಿಜಿಟಲ್ ತಾರಾಲಯ ಯೋಜನೆಯನ್ನು ಪ್ರಸ್ತುತ ಸಾಲಿನಿಂದ ಪುನರ್ ಅನುಷ್ಠಾನಗೊಳಿಸಲಾಯಿತು. ಸಂಚಾರಿ ತಾರಾಲಯವು, ರಾಜ್ಯದಲ್ಲಿನ ಸರ್ಕಾರಿ ಮತ್ತು ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಗಳಿಗೆ ತೆರಳಿ, ಶಾಲೆಯ ಅಂಗಳದಲ್ಲಿಯೇ ತಾರಾಲಯವನ್ನು ಸ್ಥಾಪಿಸಿ, ವಿವಿಧ ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದ ಪ್ರದರ್ಶನಗಳನ್ನು ಏರ್ಪಡಿಸುತ್ತದೆ. ಪ್ರಸ್ತುತ ಹನ್ನೊಂದು (11) ಸಂಚಾರಿ ತಾರಾಲಯಗಳಲ್ಲಿ, ಕಲ್ಯಾಣ ಕರ್ನಾಟಕ ಭಾಗದ ಏಳು (7) ಜಿಲ್ಲೆಗಳಿಗೆ ತಲಾ ಒಂದು ಮತ್ತು ಉಳಿದ ಮೂರು ಕಂದಾಯ ವಿಭಾಗಗಳಿಗೆ ನಾಲ್ಕು (4) ತಾರಾಲಯಗಳನ್ನು ನಿಯೋಜಿಸಲಾಗಿದೆ. ಪ್ರಸ್ತುತ ಸಾಲಿನಲ್ಲಿ ಸುಮಾರು 9900 ಖಗೋಳ ಪ್ರದರ್ಶಗಳನ್ನು ಏರ್ಪಡಿಸಿದ್ದು, 4.00 ಲಕ್ಷ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಇದರ ಫಲಾನುಭವಿಗಳಾಗಿದ್ದಾರೆ.



8. **ಕರ್ನಾಟಕ ಸಂಶೋಧನೆ, ಅಭಿವೃದ್ಧಿ ಮತ್ತು ನಾವೀನ್ಯತೆ ನೀತಿ:**
ಬೆಂಗಳೂರು ಟೆಕ್ ಸಮ್ಮಿಟ್ 2022 ರ ಉದ್ಘಾಟನಾ ಸಮಾರಂಭದಲ್ಲಿ ದಿನಾಂಕ 16.11.2022 ರಂದು ಮಾನ್ಯ ಮುಖ್ಯಮಂತ್ರಿಗಳು ಹುಬ್ಬಳ್ಳಿಯ ಕೆಎಲ್ಇ ತಾಂತ್ರಿಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರೊ. ಅಶೋಕ್ ಶೆಟ್ಟರ್ ಅವರ ಅಧ್ಯಕ್ಷತೆಯಲ್ಲಿ ಸರ್ಕಾರವು ರಚಿಸಿರುವ ಕಾರ್ಯಪಡೆಯು ರೂಪಿಸಿದ ಕರ್ನಾಟಕ ಸಂಶೋಧನೆ, ಅಭಿವೃದ್ಧಿ ಮತ್ತು ನಾವೀನ್ಯತೆ ನೀತಿಯನ್ನು ಬಿಡುಗಡೆಗೊಳಿಸಿರುತ್ತಾರೆ. ಸದರಿ ನೀತಿಯಲ್ಲಿ ನಾವೀನ್ಯತೆಯ ಸಾಮರ್ಥ್ಯವನ್ನು ಬಲಪಡಿಸಲು, ಸಂಶೋಧನೆ ಮತ್ತು ನಾವೀನ್ಯತೆಯನ್ನು ಪ್ರಾದೇಶಿಕ ಮಟ್ಟಕ್ಕೆ ಕೊಂಡೊಯ್ಯಲು, ಸಂಶೋಧನೆ ಮತ್ತು ನಾವೀನ್ಯತೆಯ ಮೂಲಕ ಉದ್ಯಮಿಗಳನ್ನು ಬೆಂಬಲಿಸಲು ಹಾಗೂ ಸಾಮಾಜಿಕ ಪರಿವರ್ತನೆಗಾಗಿ ಆದ್ಯತಾ

ವಲಯಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸಲು ಶಿಫಾರಸು ಮಾಡಿರುತ್ತದೆ.






9. **ಲ್ಯಾಬ್-ಇನ್-ಎ-ಕಿಟ್‌ಗಳ ವಿತರಣೆ:**

ವಿದ್ಯಾರ್ಥಿಗಳಿಗೆ ವೈಜ್ಞಾನಿಕ ತತ್ವಗಳನ್ನು 'ನೋಡಿ ತಿಳಿ ಮಾಡಿ ಕಲಿ' ಪರಿಕಲ್ಪನೆಯ ಮೂಲಕ ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಡಲು, ರಾಜ್ಯದಾದ್ಯಂತ 169 ಸರ್ಕಾರಿ ಬಾಲಕಿಯರ ಪ್ರೌಢಶಾಲೆಗಳಿಗೆ ಪೂರ್ವ ವಿನ್ಯಾಸಗೊಳಿಸಿದ ಪರಿಕಲ್ಪನೆ ಆಧಾರಿತ ಪ್ರಯೋಗ ಮಾಡ್ಯೂಲ್‌ಗಳನ್ನು ಹೊಂದಿರುವ ಲ್ಯಾಬ್-ಇನ್-ಎ-ಕಿಟ್‌ಗಳನ್ನು ವಿತರಿಸಲಾಗಿದೆ.

10. **ವಿಜ್ಞಾನ ಜನಸಮೂಹ ಕಾರ್ಯಕ್ರಮಗಳು:**

ರಾಜ್ಯದಾದ್ಯಂತ DST ಸಂಸ್ಥೆಗಳು, ವಿಜ್ಞಾನ ಕೇಂದ್ರಗಳು ಮತ್ತು ಶಿಕ್ಷಣ ಸಂಸ್ಥೆಗಳ ಸಹಯೋಗದೊಂದಿಗೆ ವಿಜ್ಞಾನ ಚಟುವಟಿಕೆಗಳು, ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಚಾರಕ್ಕಾಗಿ ಹಾಗೂ ಉತ್ತೇಜನಕ್ಕಾಗಿ ಸಮ್ಮೇಳನಗಳು, ಕಾರ್ಯಾಗಾರಗಳು, ವಿಚಾರಗೋಷ್ಠಿಗಳು, ವಿಜ್ಞಾನ ರಸಪ್ರಶ್ನೆ, ಉಪನ್ಯಾಸ ಸರಣಿಗಳು, ಆಕಾಶ ವೀಕ್ಷಣೆಗಳು ಮತ್ತು ವಿಜ್ಞಾನ ಪ್ರದರ್ಶನಗಳಂತಹ ಹೆಚ್ಚಿನ ಸಂಖ್ಯೆಯ ವೈಜ್ಞಾನಿಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

11. **ಪುನೀತ್ ಉಪಗ್ರಹ ಯೋಜನೆ:**

ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಮುಂದುವರಿದ ತಂತ್ರಜ್ಞಾನಗಳ ಬಗ್ಗೆ ಅರಿವು ಮೂಡಿಸಲು 'ಪುನೀತ್ ಉಪಗ್ರಹ' ಯೋಜನೆಯನ್ನು ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್ ಅಸೋಸಿಯೇಷನ್ ಮತ್ತು ಇಸ್ರೋ ಸಂಸ್ಥೆಗಳ ಸಹಯೋಗದಲ್ಲಿ ರೂ. 190.00 ಲಕ್ಷಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ ಬೆಂಗಳೂರು ವಿಭಾಗದ ಪ್ರೌಢಶಾಲಾ ವಿದ್ಯಾರ್ಥಿಗಳ ಮುಖಾಂತರ ಒಂದು ನ್ಯಾನೊ ಉಪಗ್ರಹದ ವಿನ್ಯಾಸ ಮತ್ತು ಅಭಿವೃದ್ಧಿಯನ್ನು ಕೈಗೊಳ್ಳಲಾಗುತ್ತಿದ್ದು, ನ್ಯಾನೊ ಉಪಗ್ರಹವನ್ನು ಮುಂದಿನ ಮೂರು ಮಾಹೆಯೊಳಗೆ ಉಡಾವಣೆ ಮಾಡುವ ನಿರೀಕ್ಷೆಯಿದೆ.

12. **ಮಿನಿ ವಿಜ್ಞಾನ ಸಂಪನ್ಮೂಲ ಕೇಂದ್ರಗಳ ನಿರ್ವಹಣೆ**:

ವಿದ್ಯಾರ್ಥಿಗಳು ವಿಜ್ಞಾನ ವಿಷಯಗಳನ್ನು 'ನೋಡಿ-ಕಲಿ, ಮಾಡಿ ತಿಳಿ' ಪರಿಕಲ್ಪನೆಯಡಿ ಅರ್ಥೈಸಿಕೊಳ್ಳಲು ಅನುವಾಗುವಂತೆ ಇಲಾಖೆಯು ಈ ಹಿಂದಿನ ಆರ್ಥಿಕ ವರ್ಷಗಳಲ್ಲಿ ರಾಜ್ಯದ ಆಯ್ದ ಹಿಂದುಳಿದ ತಾಲ್ಲೂಕುಗಳಾದ ಕನಕಪುರ, ಪಾವಗಡ, ಸಿಂಧಗಿ, ಬಿಳಗಿ, ಮಳವಳ್ಳಿ, ಬಿಳಿಗಿರಿರಂಗನ ಬೆಟ್ಟ, ಮುಧೋಳ್, ಮಧುಗಿರಿ, ಮಾಗಡಿ, ಸಾಲಿಗ್ರಾಮ, ಕೆ.ಆರ್.ನಗರ, ಮಲ್ಲೇಶ್ವರಂ ಮತ್ತು ಯಶವಂತಪುರ ಇಲ್ಲಿನ ಆಯ್ದ ಸರ್ಕಾರಿ ಪ್ರೌಢಶಾಲೆಯಲ್ಲಿ ಮಿನಿ ವಿಜ್ಞಾನ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ

ಕೇಂದ್ರಗಳು ವಿದ್ಯಾರ್ಥಿಗಳು ವಿಜ್ಞಾನದ ಪರಿಕಲ್ಪನೆಗಳನ್ನು ಉತ್ತಮವಾಗಿ ಅರ್ಥೈಸಿಕೊಳ್ಳಲು ಸಹಕಾರಿಯಾಗುತ್ತಿವೆ.


ಕನಕಪುರ


ಮಳವಳ್ಳಿ


ಕಡೂರು


ಹೊಸದುರ್ಗ


ಬಿಳಿಗಿರಿರಂಗನ ಬೆಟ್ಟ


ಸಿಂಧಗಿ


ಪಾವಗಡ


ಕೊಳ್ಳೆಗಾಲ

**13.ವೈ**
**ಸಕ**

ಕೆಸ್ಟೆಪ್ಸ್ ಸಂಸ್ಥೆಯು ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸುವ ಅಂಗ ಸಂಸ್ಥೆಗಳಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ, ಜವಾಹರಲಾಲ್ ನೆಹರು ತಾರಾಲಯ, ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಪಿಲಿಕುಳ ಪ್ರಾದೇಶಿಕ ವಿಜ್ಞಾನ

ಕೇಂದ್ರಗಳೂ ಸೇರಿದಂತೆ ವಿವಿಧ ಸಂಸ್ಥೆ ಹಾಗೂ ವಿಜ್ಞಾನ ಕೇಂದ್ರಗಳಿಗೆ ಅನುದಾನ ಬಿಡುಗಡೆ ಮಾಡುವುದರ ಜೊತೆಯಲ್ಲಿ, ಬಿಡುಗಡೆಗೊಳಿಸಲಾದ ಅನುದಾನದಲ್ಲಿ ಎಲ್ಲಾ ಸಂಸ್ಥೆಗಳು ಅನುಷ್ಠಾನಗೊಳಿಸುವ ಕಾರ್ಯಕ್ರಮಗಳ ಸಂಯೋಜನೆ, ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನೆಯನ್ನು ಸಹ ಕೈಗೊಂಡಿರುತ್ತದೆ. ವಿವಿಧ ಸಂಸ್ಥೆ/ ವಿಜ್ಞಾನ ಕೇಂದ್ರಗಳು ಅನುಷ್ಠಾನಗೊಳಿಸಿರುವ ಕಾರ್ಯಕ್ರಮದ ವಿವರವನ್ನು ಆಯಾಯಾ ಸಂಸ್ಥೆಗಳ ವರದಿಯಲ್ಲಿ ನೀಡಲಾಗಿದೆ.

**ಸಂಪರ್ಕ:**


ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್)
#24/2, 'ವಿಜ್ಞಾನ ಭವನ' 3ನೇ ಮಹಡಿ, 21ನೇ ಮುಖ್ಯರಸ್ತೆ,
ಬನಶಂಕರಿ 2ನೇ ಹಂತ, ಬೆಂಗಳೂರು-560070
ದೂರವಾಣಿ: 080-26711166/77
ಇಮೇಲ್: ksteps.dst@gmail.com


## ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ

ಭಾರತೀಯ ವಿಜ್ಞಾನ ಸಂಸ್ಥೆ ಆವರಣ, ಬೆಂಗಳೂರು- 560 012

---


**ಪರಿಚಯ:**

1975ರಲ್ಲಿ ಸ್ಥಾಪನೆಯಾದ ಕೆಎಸ್‌ಸಿಎಸ್‌ಟಿಯು ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿರುವ ಒಂದು ಸ್ವಾಯತ್ತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯಾಗಿದೆ. ಇದು ದೇಶದಲ್ಲೇ ಪ್ರಪ್ರಥಮ ಬಾರಿಗೆ ಸ್ಥಾಪನೆಯಾದ ಮೊದಲ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳಲ್ಲೊಂದು. ಜಲಸಂಪನ್ಮೂಲ, ಶಿಕ್ಷಣ, ಭೌಗೋಳಿಕ ಮಾಹಿತಿ (ಜಿಯೋಸ್ಪೇಷಿಯಲ್) ತಂತ್ರಜ್ಞಾನ, ಇಂಧನ, ವಸತಿ, ಪಾರಂಪರಿಕ ಸ್ಮಾರಕಗಳ ಡಿಜಿಟಲೀಕರಣ, ತ್ಯಾಜ್ಯವಸ್ತು ನಿರ್ವಹಣೆ, ಮೂಲಸೌಕರ್ಯ ಮೊದಲಾದವುಗಳು ಮಂಡಳಿಯ ಹಲವಾರು ಯಶಸ್ವಿ ಕಾರ್ಯಕ್ರಮಗಳಲ್ಲಿ ಮುಖ್ಯವಾದವು. ನಿರ್ದಿಷ್ಟ ಅಗತ್ಯಗಳು ಮತ್ತು ಸಮಸ್ಯೆಗಳಿಗೆ ಸ್ಥಳೀಯವಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಯಿಂದ ಪರಿಹಾರ ಹಾಗೂ ಯೋಜನೆಗಳನ್ನು ಕ್ರಿಯಾಶೀಲವಾಗಿ ಜಾರಿಗೊಳಿಸುವಲ್ಲಿ ಮಂಡಳಿಯು ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿದೆ. ಸಂಪನ್ಮೂಲಗಳ ನಿರ್ವಹಣೆಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆ, ಪರಿಸರ, ರಾಜ್ಯದ ಜನತೆಯ ಜನರ ಜೀವನದ ಗುಣಮಟ್ಟ, ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯ ಸುಧಾರಣೆಯು ಮಂಡಳಿಯ ಪರಿಕಲ್ಪನೆಯಾಗಿದೆ. ವಿಜ್ಞಾನ ಆಧಾರಿತ ಕಾರ್ಯಗಳಿಗೆ ಸಂಬಂಧಿಸಿದಂತೆ ಅರಿವು ಮೂಡಿಸಲು, ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಸಮನ್ವಯಗೊಳಿಸುವುದು, ಸ್ಥಳೀಯವಾದ ನಿರ್ದಿಷ್ಟ ಸಮಸ್ಯೆಗಳ ನಿವಾರಣೆಗಾಗಿ ಜನಸಮುದಾಯ ಸಹಭಾಗಿತ್ವದ ಸೂಕ್ತ ತಂತ್ರಜ್ಞಾನಗಳನ್ನು ಅಭಿವೃದ್ಧಿಗೊಳಿಸಿ ಅವುಗಳನ್ನು ಜನಪ್ರಿಯಗೊಳಿಸುವುದು, ಹಾಗೆಯೇ ರಾಜ್ಯದ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಮಾನವ ಸಂಪನ್ಮೂಲಗಳನ್ನು ಉತ್ತೇಜಿಸಿ ಅವುಗಳನ್ನು ಸುಧಾರಿಸುವುದು ಮಂಡಳಿಯ ಕಾರ್ಯನೀತಿಯಾಗಿದೆ.

## I. A) ನೈಸರ್ಗಿಕ ಸಂಪನ್ಮೂಲಗಳ ದತ್ತಾಂಶ ನಿರ್ವಹಣಾ ವ್ಯವಸ್ಥೆ (ಎನ್‌ಆರ್‌ಡಿಎಂಎಸ್) –ಕರ್ನಾಟಕ ಯೋಜನೆ

- 2022 ರ ಅಕ್ಟೋಬರ್ 10-14 ರಂದು ಹೈದರಾಬಾದ್ ನ ಇಂಟರ್ನ್ಯಾಷನಲ್ ಕನ್ವೆನ್ಷನ್ ಸೆಂಟರ್ (HICC) ನಲ್ಲಿ ನಡೆದ ಎರಡನೇ ಯುನೈಟೆಡ್ ನೇಷನ್ ವರ್ಲ್ಡ್ ಜಿಯೋಸ್ಪೇಷಿಯಲ್ ಇನ್ಫಾರ್ಮೇಶನ್ ಕಾಂಗ್ರೆಸ್ (UN-WGIC) ಅನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರದ ಸಹಯೋಗದೊಂದಿಗೆ ಆಯೋಜಿಸಲಾಗಿದೆ.
- UN-WGIC ಯ ಭಾಗವಾಗಿ 21 ಮತ್ತು 22 ಏಪ್ರಿಲ್ 2022 ರಂದು ಪೂರ್ವಭಾವಿ ಕಾರ್ಯಕ್ರಮವನ್ನು ವರ್ಚುವಲ್ ಪ್ಲಾಟ್‌ಫಾರ್ಮ್ ಮೂಲಕ ಆಯೋಜಿಸಲಾಗಿದೆ ಮತ್ತು ಸಂಪನ್ಮೂಲ ವ್ಯಕ್ತಿಗಳನ್ನು ಸರ್ಕಾರಿ ವಲಯ, ಸಂಶೋದನೆ ಮತ್ತು ಶೈಕ್ಷಣಿಕ, ಉದ್ಯಮ ಕ್ಷೇತ್ರ, ಸ್ಟಾರ್ಟ್ ಅಪ್ ಗಳು ಹಾಗೂ ಎನ್.ಜಿ.ಒ ಗಳಿಂದ ಆಹ್ವಾನಿಸಲಾಗಿತ್ತು. ಈ ಕಾರ್ಯಕ್ರಮವು Geo enabling the Global village ನ ಪ್ರಾಮುಖ್ಯತೆ, ಪ್ರಗತಿಗಳು ಮತ್ತು ಅಪ್ಲಿಕೇಶನ್‌ಗಳ ಮೇಲೆ ಕೇಂದ್ರೀಕರಿಸಿದೆ. ಕಾರ್ಯಕ್ರಮದಲ್ಲಿ ಅಧ್ಯಾಪಕರು, ವಿದ್ಯಾರ್ಥಿಗಳು, ಸರ್ಕಾರಿ ಮತ್ತು ಸರ್ಕಾರೇತರ ಅಧಿಕಾರಿಗಳು ಭಾಗವಹಿಸಿದ್ದರು.




- ಆರೋಗ್ಯ, ಕೃಷಿ, ಶಿಕ್ಷಣ, ಪಿ.ಆರ್.ಇ.ಡಿ, ಸಣ್ಣ ನೀರಾವರಿ ಇತ್ಯಾದಿ ಇಲಾಖೆಗಳ ಅಭಿವೃದ್ಧಿ ಸೂಚಕಗಳಿಗೆ ಭೌಗೋಳಿಕ ತಂತ್ರಜ್ಞಾನದ ಮೂಲಕ ಕ್ರಿಯಾ ಯೋಜನೆ ರಚನೆ.
- ಕರ್ನಾಟಕದ ಸುಸ್ಥಿರ ಅಭಿವೃದ್ಧಿ ಗುರಿಗಳ ಕುರಿತು ವರದಿ.
- ಗ್ರಾಮ ಪಂಚಾಯತಿ ಭೂಪಟ-2023

- ಜಲ ಸಂಜೀವನಿ, ಜಲ ಜೀವನ ಕಾರ್ಯಕ್ರಮ, ವಿಪತ್ತು ನಿರ್ವಹಣೆ ಮುಂತಾದವುಗಳ ಕುರಿತು ಜಿಲ್ಲಾ ಎನ್.ಆರ್.ಡಿ.ಎಂ.ಎಸ್ ಮೂಲಕ ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಅಧಿಕಾರಿಗಳಿಗೆ ತರಬೇತಿ ನೀಡಲಾಗುತ್ತಿದೆ.
- ಪಂಚಾಯತ್ ರಾಜ್ ಸಂಸ್ಥೆಗಳು, ಚುನಾವಣಾ ವ್ಯಾಪ್ತಿ, ಆಡಳಿತಾತ್ಮಕ ಗಡಿಗಳು ಇತ್ಯಾದಿಗಳನ್ನು ನಿರಂತರವಾಗಿ ನವೀಕರಿಸಲಾಗುತ್ತಿದೆ.






**B) ಕರ್ನಾಟಕ ಜಿಯೋಪೋರ್ಟಲ್**

- ಕರ್ನಾಟಕದಲ್ಲಿ ರಾಷ್ಟ್ರೀಯ ದತ್ತಾಂಶ ನೋಂದಣಿಯ ಉಪ ಪೋರ್ಟಲ್ ಮತ್ತು ರಾಷ್ಟ್ರೀಯ ಪ್ರಾದೇಶಿಕ ದತ್ತಾಂಶಗಳಿಗಾಗಿ ಕ್ಲೌಡ್ ಸೇವೆಗಳನ್ನು ಸ್ಥಾಪಿಸಲಾಗಿದೆ.
- ಮಂಡಳಿಯು IDSF ನ ನೋಡಲ್ ಏಜೆನ್ಸಿಯಾಗಿದೆ. ಇದು ಭೌಗೋಳಿಕ ದತ್ತಾಂಶಗಳ ಪರಿಣಾಮಕಾರಿ ಹಂಚಿಕೆಯ ಒಪ್ಪಂದವಾಗಿದೆ.
- ಮಂಡಳಿಯು NSDI ನ ಕಾರ್ಯನಿರತ ಗುಂಪಿನ ಸದಸ್ಯ ಸಂಸ್ಥೆಯಾಗಿದ್ದು ಡೇಟಾ ಸ್ಟ್ಯಾಂಡರ್ಡ್‌ಗಳು ಮತ್ತು ಹಂಚಿಕೆಯ ಕುರಿತು ಮಾಹಿತಿಯನ್ನು ಒದಗಿಸುತ್ತದೆ.

**II. ಶೈಕ್ಷಣಿಕ ಹಾಗೂ ಉದ್ಯಮ ವಿನಿಮಯ ಕೇಂದ್ರ**

**a) ವಿದ್ಯಾರ್ಥಿ ಯೋಜನಾ ಕಾರ್ಯಕ್ರಮ:**

i. **45ನೇ ಸರಣಿ:** ಈ ಸರಣಿಯಲ್ಲಿ ರಾಜ್ಯದ 192 ಶೈಕ್ಷಣಿಕ ಸಂಸ್ಥೆಗಳಿಂದ ಸುಮಾರು 5191 ಪ್ರಸ್ತಾವನೆಗಳು ಸಲ್ಲಿಕೆಯಾಗಿದ್ದು, 1230 ಪ್ರಸ್ತಾವನೆಗಳನ್ನು ಬೆಂಬಲಿಸಲಾಗಿದೆ. ಈ 1230 ಪ್ರಸ್ತಾವನೆಗಳಿಗೆ ಒಟ್ಟು ರೂ.80,21,800/- ಆರ್ಥಿಕ ಬೆಂಬಲವನ್ನು ನೀಡಲಾಗಿದೆ. ಈ ಕಾರ್ಯಕ್ರಮದಲ್ಲಿ 4515 ವಿದ್ಯಾರ್ಥಿಗಳು ಹಾಗೂ 1506 ಪ್ರಾಧ್ಯಾಪಕರು ಫಲಾನುಭವಿಗಳಾಗಿದ್ದಾರೆ. ಮೇ 2022 ರಲ್ಲಿ ಮಧ್ಯಂತರ ಮೌಲ್ಯಮಾಪನ ನಡೆಸಿ 332 ಯೋಜನೆಗಳನ್ನು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದಲ್ಲಿ ನಡೆದ ರಾಜ್ಯ ಮಟ್ಟದ ಸೆಮಿನಾರ್ ಮತ್ತು ಪ್ರತ್ಯಕ್ಷಿಗೆ ಆಯ್ಕೆ ಮಾಡಲಾಗಿದ್ದು, 75 ಯೋಜನೆಯನ್ನು "ವರ್ಷದ ಅತ್ಯುತ್ತಮ ಯೋಜನೆ" ಯೆಂದು ಮತ್ತು ಶ್ರೀ ಸಾಯಿರಾಂ ತಾಂತ್ರಿಕ ಕಾಲೇಜು, ಆನೇಕಲ್, ಬೆಂಗಳೂರು ಗ್ರಾಮಾಂತರ ರವರಿಗೆ "ವರ್ಷದ ಅತ್ಯುತ್ರಮ ಪ್ರದರ್ಶನ ಕಾಲೇಜು" ಎಂದು ಪುರಸ್ಕರಿಸಲಾಗಿದೆ.


45th Series Seminar and Exhibition at VTU, Belagavi

ii. **46ನೇ ಸರಣಿ**: ಮಂಡಳಿಯು 46ನೇ ಸರಣಿಯಡಿಯಲ್ಲಿ ಅಂತಿಮ ವರ್ಷದ ಇಂಜಿನಿಯರಿಂಗ್ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಂದ ಪ್ರಸ್ತಾವನೆಯನ್ನು ಆಹ್ವಾನಿಸಿದೆ. 24ನೇ ಫೆಬ್ರವರಿ 2023

ಪ್ರಸ್ತಾವನೆಯನ್ನು ಸಲ್ಲಿಸಲು ಕೊನೆಯ ದಿನವಾಗಿದೆ.


**b) ಅಧ್ಯಾಪಕರ ಯೋಜನಾ ಕಾರ್ಯಕ್ರಮ (FPP):**
ವಿದ್ಯಾರ್ಥಿ ಯೋಜನಾ ಕಾರ್ಯಕ್ರಮದ ಯಶಸ್ಸಿನ ನಂತರ ಅಧ್ಯಾಪಕರ ಯೋಜನಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಈ ಕಾರ್ಯಕ್ರಮದಡಿಯಲ್ಲಿ ಸ್ಥಳೀಯ ಸಮಸ್ಯೆಗಳಿಗೆ ಸೂಕ್ತವಾದ ಉತ್ಪನ್ನ ಮತ್ತು ಸೇವೆಯನ್ನು ಅಭಿವೃದ್ಧಿಪಡಿಸಲು ಪ್ರೋತ್ಸಾಹಿಸಲಾಗುವುದು. ವಿದ್ಯಾರ್ಥಿ ಯೋಜನಾ ಕಾರ್ಯಕ್ರಮದಲ್ಲಿ ಪುರಸ್ಕೃತಗೊಂಡ ಯೋಜನೆಗಳನ್ನು ಅಭಿವೃದ್ಧಿ ಪಡಿಸಿ ವಾಣಿಜ್ಯಕರಿಸಲು ಅತ್ಯುತ್ತಮ ಅವಕಾಶವನ್ನು ಕಲ್ಪಿಸಿಕೊಡಲಾಗುವುದು. ಈ ಕಾರ್ಯಕ್ರಮದಡಿ 94 ಯೋಜನಾ ಪ್ರಸ್ತಾವನೆಯನ್ನು ಸ್ವೀಕರಿಸಲಾಗಿದ್ದು 16 ಪ್ರಸ್ತಾವನೆಯನ್ನು ಬೆಂಬಲಿಸಲಾಗಿದೆ.

**ಅಧ್ಯಾಪಕರ ಯೋಜನಾ ಕಾರ್ಯಕ್ರಮ ಮೂಲಕ ರಾಜ್ಯದಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಯ ಅನ್ವಿಕೆ:** ರಾಜ್ಯದ ವಿಜ್ಞಾನ ಮತ್ತು ಇಂಜಿನಿಯರಿಂಗ್ ಪ್ರಾಧ್ಯಾಪಕರಿಂದ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಯ ಅನ್ವಿಕೆಗೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಆಹ್ವಾನಿಸಲಾಗಿದ್ದು, ಸಲ್ಲಿಕೆಯಾದ 627 ಯೋಜನೆಯಲ್ಲಿ 11 ಯೋಜನೆಗಳನ್ನು ಬೆಂಬಲಿಸಲು ಆಯ್ಕೆಮಾಡಲಾಗಿದೆ.

**c) ಪುನೀತ್ ಉಪಗ್ರಹ (KGS3Sat) ಉಡಾವಣೆಯ ವಿದ್ಯಾರ್ಥಿ ಕೇಂದ್ರಿತ ಕಾರ್ಯಕ್ರಮಗಳು**
ಈ 75ನೇ ಸ್ವಾತಂತ್ರ್ಯೋತ್ಸವದ ಸುಸಂದರ್ಭದಲ್ಲಿ, ದೇಶಾದ್ಯಂತ ವಿದ್ಯಾರ್ಥಿಗಳು ತಯಾರಿಸಿರುವ 75 ಉಪಗ್ರಹಗಳನ್ನು ಉಡಾವಣೆ ಮಾಡಲಾಗುವುದು. ನಮ್ಮ ಕರ್ನಾಟಕ ರಾಜ್ಯದ "ಕರ್ನಾಟಕ ಸರ್ಕಾರಿ ಶಾಲಾ ವಿದ್ಯಾರ್ಥಿಗಳ ಉಪಗ್ರಹ-ಕೆಜಿಎಸ್ 3 ಸ್ಯಾಟ್" ಯೋಜನೆಯಲ್ಲಿ ನಿರ್ಮಾಣಗೊಳ್ಳುವ ಉಪಗ್ರಹವನ್ನು ಪುನೀತ್ ಉಪಗ್ರಹ ಎಂದು ಕರೆಯಲಾಗಿದೆ. ವಿದ್ಯಾರ್ಥಿಗಳಲ್ಲಿ ಉಪಗ್ರಹ, ಬಾಹ್ಯಾಕಾಶ ಮತ್ತು ಖಗೋಳಶಾಸ್ತ್ರದ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ವಿದ್ಯಾರ್ಥಿ ಕೇಂದ್ರಿತ ಕಾರ್ಯಕ್ರಮಗಳು. ಕಾರ್ಯಕ್ರಮಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳು, ಶ್ರೀಹರಿಕೋಟಾದಲ್ಲಿ ಉಪಗ್ರಹ ಉಡಾವಣೆಯನ್ನು ವೀಕ್ಷಿಸುವ ಅವಕಾಶವನ್ನು ಕಲ್ಪಿಸಲಾಗುವುದು. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಚಿತ್ರ ಬಿಡಿಸುವ ಸ್ಪರ್ಧೆ ಹಾಗೂ ರಸ ಪ್ರಶ್ನೆ ಸ್ಪರ್ಧೆಯನ್ನು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರಬಂಧ ಮತ್ತು ಪೋಸ್ಟರ್ ಪ್ರಸ್ತೂತಿಯನ್ನು ಆಯೋಜಿಸಲಾಯಿತು. ಈ ಸ್ಪರ್ಧೆಗಳು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಆಯೋಜಿಸಲಾಯಿತು. ರಾಜ್ಯದಿಂದ ಸುಮಾರು 2ಲಕ್ಷ ವಿದ್ಯಾರ್ಥಿಗಳು ಈ ಕಾರ್ಯಕ್ರಗಳಿಗೆ ನೋಂದಾಯಿಸಿಕೊಂಡಿದ್ದು, 300 ವಿದ್ಯಾರ್ಥಿಗಳು ವಿಜೇತರಾಗಿದ್ದಾರೆ.




ಮಾನ್ಯ ಸಚಿವರು ಕಾರ್ಯಕ್ರಮ ಕುರಿತು ಚರ್ಚಿಸುತ್ತಿರುವುದು



ಆನ್ ಲೈನ್ ನಲ್ಲಿ ನಡೆದ ಚಿತ್ರ ಬಿಡಿಸುವ ಸ್ಪರ್ಧೆಯ ತುಣುಕು

**d) ಆಜಾದಿ ಕಾ ಅಮೃತ ಮಹೋತ್ಸವ: ವಿಜ್ಞಾನ ಉತ್ಸವ** - ಆತ್ಮನಿರ್ಭಾರ ಭಾರತಕ್ಕೆ ಪೂರಕವಾಗುವಂತೆ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯು ತಮ್ಮ ರಾಜ್ಯದಲ್ಲಿನ STI ವ್ಯವಸ್ಥೆಯನ್ನು ಪ್ರಸ್ತುತಪಡಿಸಲು ವರ್ಷ ಪೂರ್ತಿ ವಿಜ್ಞಾನ ಉತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಕಾರ್ಯಕ್ರಮವನ್ನು ಆನ್‌ಲೈನ್ ಮೂಲಕ ಆಯೋಜಿಸಲಾಗುತ್ತಿದ್ದು ಭಾರತ ಸರ್ಕಾರದ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಹಯೋಗದೊಂದಿಗೆ ಪ್ರತಿ ತಿಂಗಳ ಶೀರ್ಷಿಕೆಯನ್ನು ಆಯ್ದುಕೊಳ್ಳಲಾಗುವುದು. ಸೆಪ್ಟೆಂಬರ್ 2021 ರಿಂದ ಆಗಸ್ಟ 2022 ರವರೆಗೆ ಪ್ರತೀ ತಿಂಗಳು ನಿರ್ದಿಷ್ಟ ವಿಷಯದ ಬಗ್ಗೆ ವೆಬಿನಾರ್ ಆಯೋಜಿಸಲಾಗಿದ್ದು ಸುಮಾರು 150 ಕ್ಕೂ ಹೆಚ್ಚು ಜನರು ಪ್ರತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ.



ಪ್ರೊ. ಡಿ. ಕೆ. ಸುಬ್ರಮಣ್ಯಯನ್ ರವರು ತಾಂತ್ರಿಕ ಭಾಷಣವನ್ನು ನೀಡುತ್ತಿರುವುದು

**e) ನೈಸರ್ಗಿಕ ಶಿಬಿರ:**

ಕರ್ನಾಟಕದ ಬುಡಕಟ್ಟು ಪ್ರದೇಶಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಬೋಧನೆಯಲ್ಲಿ ನಾವೀನ್ಯತೆ ಅಳವಡಿಸಿಕೊಳ್ಳಲು ಶಿಕ್ಷಕರು/ವಿದ್ಯಾರ್ಥಿಗಳಿಗೆ ಕಾರ್ಯಾಗಾರ/ಶಿಬಿರಗಳ ಆಯೋಜನೆ" ಎಂಬ ಶೀರ್ಷಿಕೆಯಡಿಯಲ್ಲಿ, ಕೇಂದ್ರ ಸರ್ಕಾರದ ವಿಜ್ಞಾನ ಪ್ರಸಾರದ ಬೆಂಬಲದೊಂದಿಗೆ 22-25 ಆಗಸ್ಟ್, 2022 ರಂದು ಬುಡಕಟ್ಟು ಪ್ರದೇಶದ 100 ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನೈಸರ್ಗಿಕ ಶಿಬಿರವನ್ನು ಆಯೋಜಿಸಲಾಯಿತು. ಶಿಬಿರದಲ್ಲಿ ನ್ಯೂಟನ್ರನ ನಿಯಮ, ಮಣ್ಣಿನ ಸಂಸ್ಕೃತಿ, ಮಣ್ಣುರಹಿತ ಸಂಸ್ಕೃತಿ, ಹನಿ

ನೀರಾವರಿ ಮತ್ತು ಪ್ರಾಣಿ ಮತ್ತು ಸಸ್ಯಗಳ ಆವಾಸಸ್ಥಾನದ ಚಟುವಟಿಕೆಗಳ ಮೇಲಿನ ಪ್ರಯೋಗಗಳ ಪ್ರದರ್ಶನವನ್ನು ಪ್ರಸ್ತುತಿ ಪಡಿಸಲಾಯಿತು.





## III. ಪೇಟೆಂಟ್ ಮಾಹಿತಿ ಕೇಂದ್ರ


ಪೇಟೆಂಟ್ ಮಾಹಿತಿ ಕೇಂದ್ರವು ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದ ಪೇಟೆಂಟ್‌ಗಳು, ಟ್ರೇಡ್‌ಮಾರ್ಕ್‌ಗಳು, ಕೈಗಾರಿಕಾ ವಿನ್ಯಾಸಗಳು, ಸಸ್ಯ ವೈವಿಧ್ಯ ರಕ್ಷಣೆ ಮತ್ತು ಭೌಗೋಳಿಕ ಸೂಚ್ಯಂಕಗಳ ಕುರಿತು ವಿಚಾರ ಸಂಕಿರಣಗಳು, ಶಿಬಿರಗಳು ಮತ್ತು ಕಾರ್ಯಾಗಾರಗಳ ರೂಪದಲ್ಲಿ ರಾಜ್ಯದಾದ್ಯಂತ ಸಾಮರ್ಥ್ಯ ವರ್ಧನೆ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ.

ವಿಶ್ವವಿದ್ಯಾನಿಲಯಗಳು, ಎಂಜಿನಿಯರಿಂಗ್, ವಿಜ್ಞಾನ, ಕಾನೂನು ಮತ್ತು ಕೃಷಿ ಕಾಲೇಜುಗಳಲ್ಲಿ 12 ಐಪಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅಧ್ಯಾಪಕರು, ವಿದ್ಯಾರ್ಥಿಗಳು, ಸ್ಟಾರ್ಟ್‌ಅಪ್‌ಗಳಿಗಾಗಿ 51 ಕ್ಕೂ ಹೆಚ್ಚು ಬೌದ್ಧಿಕ ಆಸ್ತಿ ಹಕ್ಕುಗಳ ಕುರಿತು ಕಾರ್ಯಾಗಾರಗಳು/ಜಾಗೃತಿ ಕಾರ್ಯಕ್ರಮ/ಕೋರ್ಸ್‌ಗಳನ್ನು ನಡೆಸಲಾಗಿದೆ. 5 ಟ್ರೇಡ್‌ಮಾರ್ಕ್‌ಗಳು, 5 ಹಕ್ಕುಸ್ವಾಮ್ಯಗಳು, 3 FER ಪ್ರತ್ಯುತ್ತರಗಳು ಮತ್ತು 118 ಪ್ರಿಯರ್ ಆರ್ಟ್ ಸರ್ಚ್ ಕುರಿತು ವರದಿಗಳನ್ನು ರಚಿಸಲಾಗಿದೆ.

ನವದೆಹಲಿಯ ಡಾ ಅಂಬೇಡ್ಕರ್ ಅಂತರಾಷ್ಟ್ರೀಯ ಕೇಂದ್ರದಲ್ಲಿ ನಡೆದ ರಾಷ್ಟ್ರೀಯ ಐಪಿ ಪ್ರಶಸ್ತಿಗಳು 2022 ರಲ್ಲಿ ಮಂಡಳಿಯ ಪೇಟೆಂಟ್ ಮಾಹಿತಿ ಕೇಂದ್ರವು (PIC) "**ವಿಶೇಷ ಉಲ್ಲೇಖ ಪ್ರಶಸ್ತಿ 2022**" ಅನ್ನು ಸ್ವೀಕರಿಸಿದೆ.

ಮೇಕ್ ಇನ್ ಇಂಡಿಯಾ ಅಡಿಯಲ್ಲಿ ಮಂಡಳಿಯು IPR ನ ವಾಣಿಜ್ಯೀಕರಣಕ್ಕಾಗಿ "**IP-ಟ್ರೇಡ್-ಕಾರ್ಟ್**" (IPTK) ಎಂಬ ಅಪ್ಲಿಕೇಶನ್ ಆಧಾರಿತ ನೆಟ್‌ವರ್ಕಿಂಗ್ ಪ್ಲಾಟ್‌ಫಾರ್ಮ್ ಅನ್ನು ಅಭಿವೃದ್ಧಿಪಡಿಸುತ್ತಿದೆ. ಈ ಅಪ್ಲಿಕೇಶನ್ ಪೇಟೆಂಟ್ ಹೊಂದಿರುವವರು ಮತ್ತು ಸ್ಟಾರ್ಟ್‌ಅಪ್‌ಗಳು ತಮ್ಮ ಐಪಿಯನ್ನು ವಾಣಿಜ್ಯೀಕರಿಸುವಲ್ಲಿ ಸಹಾಯ ಮಾಡುತ್ತದೆ.




ಶ್ರೀ ಹೆಚ್. ಹೇಮಂತ್ ಕುಮಾರ್, ಕಾರ್ಯನಿರ್ವಾಹಕ ಕಾರ್ಯದರ್ಶಿ, ಕೆಎಸ್‌ಸಿಎಸ್‌ಟಿ ಅವರು ಗೌರವಾನ್ವಿತ ಕೇಂದ್ರ ಸಚಿವರಾದ ಶ್ರೀ ಪಿಯೂಷ್ ಗೋಯಲ್ ಅವರಿಂದ ವಿಶೇಷ ಉಲ್ಲೇಖ ಪ್ರಶಸ್ತಿ 2022 ಸ್ವೀಕರಿಸುತ್ತಿರುವುದು



ಜೆ ಎಸ್ ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಮೈಸೂರಿನಲ್ಲಿ JSSHER- KSCST IP ಸೆಲ್ ಉದ್ಘಾಟನೆ

## IV. ಇಂಧನ ಕೇಂದ್ರ

- ಕರ್ನಾಟಕ ಸರ್ಕಾರದ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ (STWD) ಬೆಂಬಲದೊಂದಿಗೆ, ಮೈಸೂರು ಮತ್ತು ಕೊಪ್ಪದಲ್ಲಿರುವ ಲ್ಯಾಂಪ್ಸ್ ಸಹಕಾರ ಮಂಡಳಿಯ ನಿಗಮದಲ್ಲಿ ಕಿರು ಅರಣ್ಯ ಉತ್ಪನ್ನ ಸಂಸ್ಕರಣಾ ಘಟಕಗಳ (NTFPCE) ಸ್ಥಾಪನೆಯನ್ನು ಕಾರ್ಯಗತಗೊಳಿಸಲಾಗಿದೆ. NTFPCE ಯು ಜೇನು, ನೆಲ್ಲಿಕಾಯಿ ಮತ್ತು ಸೀಗೇಕಾಯಿ ಸಂಸ್ಕರಣಾ ಘಟಕಗಳನ್ನು ಒಳಗೊಂಡಿದೆ.
- ಬೀದರ್‌ನ ಕೃಷಿ ವಿಜ್ಞಾನ ಕೇಂದ್ರದಲ್ಲಿ 24 ಆಗಸ್ಟ 2022 ರಂದು ವಿಶ್ವ ಜೈವಿಕ ಇಂಧನ ದಿನವನ್ನು ಆಚರಿಸಲಾಯಿತು.
- 45 ನೇ ವಿದ್ಯಾರ್ಥಿ ಯೋಜನೆ ಕಾರ್ಯಕ್ರಮದ ಅಡಿಯಲ್ಲಿ (BE-35, M.Tech-01, MBA-02 & M.Sc-03) ಜೈವಿಕ ಶಕ್ತಿಗೆ ಸಂಬಂಧಿಸಿದ ಯೋಜನೆಗಳು ರೂ.3,80,000/- ಒಟ್ಟು ಅನುದಾನದೊಂದಿಗೆ ಬೆಂಬಲಿಸಲಾಗಿದೆ.
- ಜೈವಿಕ ಇಂಧನ ಸಂಶೋಧನೆ, ಮಾಹಿತಿ ಮತ್ತು ಪ್ರಾತ್ಯಕ್ಷಿಕೆ ಕೇಂದ್ರದ (BRIDC) ಸಂಯೋಜಕರ ಪರಿಶೀಲನಾ ಸಭೆಯನ್ನು 24-25 ಆಗಸ್ಟ 2022ರಂದು ಬೀದರ್ ನಲ್ಲಿ ಹಾಗೂ 6ನೇ ಡಿಸೆಂಬರ್ 2022 ರಂದು ಬೆಂಗಳೂರಿನ ಜಿಕೆವಿಕೆಯಲ್ಲಿ ನಡೆಸಲಾಯಿತು.
- 13 ಪದವಿ ವಿದ್ಯಾರ್ಥಿಗಳು ಜೈವಿಕ ಇಂಧನ ಯೋಜನೆಗಳಲ್ಲಿ ಇಂಟರ್ನ್‌ಶಿಪ್ ಪೂರ್ಣಗೊಳಿಸಿದ್ದಾರೆ.





## V. ವಿಜ್ಞಾನಿ ಮತ್ತು ಇಂಜಿನಿಯರ್‌ಗಳಿಗೆ ರಾಜ್ಯ ಪ್ರಶಸ್ತಿಗಳು


ರಾಜ್ಯದಲ್ಲಿನ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರತಿಭೆಗಳನ್ನು ಗುರುತಿಸಿ ಪುರಸ್ಕರಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ರಾಜ್ಯದ ವಿಜ್ಞಾನಿ ಮತ್ತು ಇಂಜಿನಿಯರ್

ಗಳಲ್ಲಿನ ಶ್ರೇಷ್ಠತೆಯನ್ನು ಗುರುತಿಸಿ ಕರ್ನಾಟಕ ಸರ್ಕಾರದಿಂದ ಪುರಸ್ಕರಿಸಲಾಗುವುದು. 1996 ರಿಂದ ಪ್ರತಿ ವರ್ಷ ವಿಜ್ಞಾನ ಮತ್ತು ತಂತ್ರಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಈ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಸರ್ಕಾರದೊಂದಿಗೆ ಸಮಾಲೋಚಿಸಿ ಆಯ್ಕೆ ಪ್ರಕ್ರಿಯೆ ಮತ್ತು ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಸುಗಮಗೊಳಿಸುವ ಜವಾಬ್ದಾರಿಯನ್ನು ಮಂಡಳಿಗೆ ವಹಿಸಲಾಗಿದೆ. 2020 ಮತ್ತು 2021ನೇ ಸಾಲಿನ ಒಟ್ಟು 28 ವಿಜ್ಞಾನಿ ಮತ್ತು ಇಂಜಿನಿಯರ್‌ಗಳಿಗೆ ಇಂಜಿನಿಯರ್ ಮತ್ತು ವಿಜ್ಞಾನಿ  ಪ್ರಶಸ್ತಿಯನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳಿಂದ ಮಾರ್ಚ್ 23, 2023 ರಂದು ಪ್ರದಾನ ಮಾಡಲಾಗಿರುತ್ತದೆ.

## VI. ಕರ್ನಾಟಕ ಡಿಜಿಟಲ್ ಪಾರಂಪರಿಕತೆ:

ಈ ಕಾರ್ಯಕ್ರಮದಡಿಯಲ್ಲಿ 3ಡಿ ಲೇಸರ್ ಸ್ಕ್ಯಾನಿಂಗ್ ತಂತ್ರಜ್ಞಾನದ ಮೂಲಕ ರಾಜ್ಯದ ಪುರಾತನ ತಾಣಗಳನ್ನು ಡಿಜಿಟಲೀಕರಿಸಲಾಗುವುದು. ತಾಣಗಳ ಪುನರ್ಜ್ಜೀವನ / ಪುನರ್ನಿರ್ಮಾಣ ಹಾಗೂ ವರ್ಚುವಲ್ ಅನುಭವವನ್ನು ಸೃಷ್ಟಿಸಲಾಗುವುದು. ಸ್ಕ್ಯಾನಿಂಗ್ ಮೂಲಕ ಉತ್ಪತ್ತಿಯಾಗುವ 3D point, cloud data, mesh data ಮತ್ತು CAD ಚಿತ್ರಣ 3D ಮಾದರಿ ನಿರ್ಮಾಣಕ್ಕೆ ಉಪಯುಕ್ತವಾಗುವುದು.

ರಾಜ್ಯದಲ್ಲಿ ಗುರುತಿಸಿರುವ 844 ಪುರಾತನ ಸ್ಮಾರಕಗಳಲ್ಲಿ 640 ಸ್ಮಾರಕಗಳ ಸ್ಕ್ಯಾನಿಂಗ್ ಪೂರ್ಣಗೊಂಡಿದ್ದು. ತಾಣಗಳ spatial, Geo Spatial ಮತ್ತು non-spatial ಮಾಹಿತಿಯನ್ನು ಚಿತ್ರಣದ ಜೊತೆ ಜೋಡಿಸುವ ಕ್ರಿಯೆ ಪ್ರಗತಿಯಲ್ಲಿದೆ.



## VII. A) ಮಳೆ ನೀರು ಕೊಯ್ಲು ಕೋಶ:

ಮಂಡಳಿಯಲ್ಲಿನ ಮಳೆನೀರು ಕೊಯ್ಲು ಕೋಶವು ರಾಜ್ಯದ ಸಾರ್ವಜನಿಕ, ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಯ ಕಟ್ಟಡಗಳಲ್ಲಿ ಮಳೆ ನೀರು ಪದ್ಧತಿಯನ್ನು ಅನುಷ್ಠಾನ ಗೊಳಿಸಲು ವಿವರವಾದ ಕರಡು ಯೋಜನಾ ವರದಿಯನ್ನು ನೀಡುವುದು. ಪ್ರಸ್ತುತ ವರ್ಷ ಮೈಸೂರು ವಿಮಾನ ನಿಲ್ದಾಣ, ಗುಲ್ಬರ್ಗ ವಿಶ್ವವಿದ್ಯಾನಿಲಯ, ಕರ್ನಾಟಕ ಸೋಪ್ ಫ್ಯಾಕ್ಟರಿ, ಮಂತ್ರಿ ವಸತಿಗಳು ಸೇರಿದಂತೆ ಸುಮಾರು ಸಂಸ್ಥೆಗಳಲ್ಲಿ ಮಳೆ ನೀರು ಕೊಯ್ಲು ಪದ್ಧತಿಯನ್ನು ಅಳವಡಿಸಲಾಗಿದೆ.




ಮೈಸೂರು ನಿಲ್ದಾಣದಲ್ಲಿ ಮಳೆನೀರು ಅಳವಡಿಕೆ ಕುರಿತು ಸ್ಥಳ ಪರಿಶೀಲನೆ ಮತ್ತು ಬೆಂಗಳೂರಿನ NCDIR, ICMR ನಲ್ಲಿ ಮಳೆ ನೀರು ಕೊಯ್ಲು ಪದ್ಧತಿ ಅಳವಡಿಕೆ

**B) ಮಳೆ ನೀರು ಸಹಾಯವಾಣಿ:**

- BWSSB ರವರ ಸಹಯೋಗದೊಂದಿಗೆ ಸ್ಥಾಪಿಸಿರುವ ಬೆಂಗಳೂರಿನ ಜಯನಗರದ ತುಂತುರು ಕೇಂದ್ರದಲ್ಲಿ ಮಳೆ ನೀರು ಕೊಯ್ಲು ಕುರಿತು ತರಬೇತಿ ಹಾಗೂ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಆಯೋಜಿಲಾಗುವುದು.
- ಗುತ್ತಿಗೆದಾರರು, ಇಂಜಿನಿಯರ್, ಕೊಳಾಯಿಗಾರರಿಗೆ ಸುಮಾರು 87 ತರಬೇತಿ ಕಾರ್ಯಗಾರ ಹಾಗೂ ಜನಸಾಮಾನ್ಯರಿಗೆ 150 ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.
- ಸಹಾಯವಾಣಿ ಅನುಷ್ಠಾನಗೊಂಡಾಗಿನಿಂದ ಸುಮಾರು 70,000 ಸರ್ಕಾರಿ ಅಧಿಕಾರಿಗಳು, ಸಿಬ್ಬಂದಿಗಳು ಸೇರಿದಂತೆ 45,000 ವಿದ್ಯಾರ್ಥಿಗಳು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.
- ಬೆಂಗಳೂರು ನಗರದಲ್ಲಿ ಸುಮಾರು 1,75,000 ವಸತಿಗಳಲ್ಲಿ ಮಳೆ ನೀರು ಕೊಯ್ಲು ಪದ್ಧತಿಯನ್ನು ಅಳವಡಿಸಲಾಗಿದೆ.





ಎ.ಪಿ.ಎಸ್. ಶಾಲೆ ಮಕ್ಕಳಿಗೆ ಅರಿವು ಕಾರ್ಯಕ್ರಮ ಮತ್ತು 87ನೇ ತರಬೇತಿ ಕಾರಗಯಗಾರ

## VIII. ಪ್ರಾದೇಶಿಕ ಕೇಂದ್ರ ಕಲಬುರ್ಗಿ:

ಕಲ್ಯಾಣ ಕರ್ನಾಟಕ ಭಾಗದ ಕಲಬುರ್ಗಿಯಲ್ಲಿ ಸ್ಥಾಪಿಸಿರುವ ಮಂಡಳಿಯ ಪ್ರಾದೇಶಿಕ ಕೇಂದ್ರವು ಪ್ರಾರಂಭದಿಂದಲೂ ವಿಜ್ಞಾನ ಮತ್ತು ತಂತ್ರಜ್ಞಾನ ಆಧಾರಿತ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ಕಲಬುರ್ಗಿ ವಿಭಾಗದಲ್ಲಿನ ಸ್ಮಾರಕಗಳ ಸ್ಕ್ಯಾನಿಂಗ್, ಮಳೆನೀರಿನ ಕೊಯ್ಲು ವಿಶ್ವ ಭೂ ದಿನ ಆಚರಣೆ-2022, ರಾಷ್ಟ್ರೀಯ ತಂತ್ರಜ್ಞಾನ ದಿನ-2022, ವಿಶ್ವ ಪರಿಸರ ದಿನ-2022, ವಿಶ್ವ ಜೈವಿಕ ಇಂಧನ ದಿನ, ಇಂಜಿನಿಯರ್ಸ್ ದಿನ-2022, ಗಾಜಿನ ಅಂತಾರಾಷ್ಟ್ರೀಯ ವರ್ಷ-2022, ಮತ್ತು ರಾಷ್ಟ್ರೀಯ ಗಣಿತ ದಿನ ಮತ್ತು ಇತ್ತೀಚಿನ ತಂತ್ರಜ್ಞಾನವನ್ನು ಬಳಸಿಕೊಂಡು ಕೃಷಿಯಲ್ಲಿ ಆದಾಯದ ಸುಧಾರಣೆ ಕುರಿತು ರೈತರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.







ವಿಶ್ವ ಜೈವಿಕ ಇಂಧನ ದಿನ ಆಚರಣೆ ಮತ್ತು ಕೃಷಿಯಲ್ಲಿ ಆದಾಯದ ಸುಧಾರಣೆ ಕುರಿತು ರೈತರಿಗೆ ತರಬೇತಿ

## IX. ಸೈಬರ್ ಭದ್ರತೆಯ ಉತ್ಕೃಷ್ಟತೆಯ ಕೇಂದ್ರ (CySeck)

ಸೈಬರ್ ಸುರಕ್ಷಿತ ಮತ್ತು ಅನುಕೂಲಗಳ ಬಗ್ಗೆ ಹೆಚ್ಚಿನ ಮಾಹಿತಿ ಮತ್ತು ಅರಿವು ಮೂಡಿಸಲು CySeck ಅನ್ನು ಸ್ಥಾಪಿಸಲಾಗಿದೆ. ಉದ್ಯಮಗಳ ಉದಯೋನ್ಮುಖ ತಂತ್ರಜ್ಞಾನದ ಕ್ಷೇತ್ರವಾದ ಸೈಬರ್ ಭದ್ರತೆಗೆ ಸಂಬಂಧಿಸಿದಂತೆ ಕೌಶಲ್ಯ ಕಾರ್ಯಕ್ರಮಗಳ

ಆಯೋಜನೆ, ಸಂಶೋಧನಾ ಯೋಜನೆಗಳಿಗೆ ಧನಸಹಾಯವನ್ನು ನೀಡಿ ಬೆಂಬಲಿಸಲಾಗುವುದು. ಕೆಳಗಿನ ವರ್ಗಗಳ ಅಡಿಯಲ್ಲಿ ಕೇಂದ್ರುವಯ ಗಣನೀಯ ಪ್ರಗತಿಯನ್ನು ಸಾಧಿಸಿದೆ.

- ಜಾಗೃತಿ: ಟ್ವಿಟರ್, ಮಾಸಿಕ ದ್ವಿಭಾಷಾ ಸುದ್ದಿಪತ್ರಿಕೆಯ ಮೂಲಕ ಸೈಬರ್ ಸುರಕ್ಷತೆ ಬಗ್ಗೆ ಜಾಗೃತಿ
- ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮ: NASSCOM ಗಳಂತಹ ಸಂಸ್ಥೆಗಳ ಸಹಯೋಗದೊಂದಿಗೆ ಅನೇಕ ಕಾರ್ಯಕ್ರಮಗಳ ಆಯೋಜನೆ. ಒಟ್ಟು 827 ವಿದ್ಯಾರ್ಥಿಗಳು ಕೋರ್ಸ್ ಅನ್ನು ಪೂರ್ಣಗೊಳಿಸಿ, 278 ವಿದ್ಯಾರ್ಥಿಗಳು ಗ್ರ್ಯಾಂಡ್ ಚಾಲೆಂಜ್ ಕ್ಯಾಪ್ಚರ್-ದಿ-ಫ್ಲಾಗ್ ಸ್ಪರ್ಧೆಯಲ್ಲಿ ಭಾಗವಹಿಸಿದರು. NCIIPC ನಲ್ಲಿ 10 ಇಂಟರ್ನ್‌ಶಿಪ್ ಸೇರಿದಂತೆ 106 ವಿದ್ಯಾರ್ಥಿಗಳಿಗೆ ಈ ಕಾರ್ಯಕ್ರಮದ ಮೂಲಕ ಇಂಟರ್ನ್‌ಶಿಪ್ ನೀಡಲಾಗಿದೆ.
- ಕೈಗಾರಿಕೆ ಮತ್ತು ಸ್ಟಾರ್ಟ್‌ಅಪ್‌ಗಳು: H.A.C.K ಕಾರ್ಯಕ್ರಮವನ್ನು ಬಲಪಡಿಸುವ ಮೂಲಕ ಸ್ಟಾರ್ಟ್‌ಅಪ್ ಗಳಿಗೆ ಪ್ರೋತ್ಸಾಹ.
- ಸರ್ಕಾರ: ಸೈಬರ್ ಸುರಕ್ಷಿತೆಯಲ್ಲಿನ ಅವಕಾಶಗಳನ್ನು ಅನ್ವೇಷಿಸಲು ಇ-ಆಡಳಿತ ಕೇಂದ್ರುದೊಂದಿಗೆ ಚರ್ಚೆಗಳು ಮತ್ತು ಕಾರ್ಯಾಗಾರವನ್ನು ಆಯೋಜಿಸಲಾಯಿತು.

## X. ಏರೋಸ್ಪೇಸ್ ಮತ್ತು ರಕ್ಷಣಾ ಉತ್ಕೃಷ್ಟತೆಯ ಕೇಂದ್ರ (CEAD)

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (VTU) ಹಾಗೂ KSCST ಯ ಸಹಯೋಗದೊಂದಿಗೆ ಇಂಜಿನಿಯರಿಂಗ್ ಪದವೀಧರರಲ್ಲಿ ಏರೋಸ್ಪೇಸ್ ಮತ್ತು ಡಿಫೆನ್ಸ್ (A&D) ಕ್ಷೇತ್ರದ ಬಗೆಗಿನ ಕೌಶಲ್ಯ ವರ್ಧನೆಯನ್ನು ಹೆಚ್ಚಿಸಲು ಕರ್ನಾಟಕ ಸರ್ಕಾರದ ನೂತನ ಕಾರ್ಯಕ್ರಮವಾಗಿದೆ.

CEAD ನಲ್ಲಿ ನೀಡಲಾಗುವ ಕೋರ್ಸ್‌ಗಳು ವಿದ್ಯಾರ್ಥಿಗಳಿಗೆ ಅತ್ಯಾಧುನಿಕ ಸಾಫ್ಟ್‌ವೇರ್ ಪರಿಕರಗಳು, ಸಿದ್ದಾಂತ ಬಗ್ಗೆ ಪ್ರಯೋಗಿಕ ಚಿತ್ರಣವನ್ನು ನೀಡಿ, ಕೋರ್ಸ್ನ ಕೊನೆಯಲ್ಲಿ ವಿದ್ಯಾರ್ಥಿಗಳು ಏರ್ ವೆಹಿಕಲ್ ಅಭಿವೃದ್ಧಿಗೆ ಬೇಕಾದ ಸೂಕ್ತ ಜ್ಞಾನವನ್ನು ಹೊಂದುವರು. ಈ ಕೋರ್ಸ್‌ಗಳಲ್ಲಿ ಏರೋಸ್ಪೇಸ್ ಇಂಡಸ್ಟ್ರಿ ತಜ್ಞರು ಭೋದಕರಾಗಿ ಸಹಕರಿಸುತ್ತಾರೆ.

## XI. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (KREIS) ಅಡಿಯಲ್ಲಿ ಬರುವ ಶಾಲೆಗಳ ವೈಜ್ಞಾನಿಕ ಲೆಕ್ಕಪರಿಶೋಧನೆ

ಸಮಾಜ ಕಲ್ಯಾಣ ಇಲಾಖೆಯು KREIS ಶಾಲೆಗಳ ವೈಜ್ಞಾನಿಕ ಲೆಕ್ಕಪರಿಶೋಧನೆ ನಡೆಸಲು KSCST ಯನ್ನು ಕೋರಲಾಗಿದೆ. ವೈಜ್ಞಾನಿಕ ಲೆಕ್ಕಪರಿಶೋಧನೆಯು ಇಲಾಖೆಗೆ ಸಹಾಯ ಮಾಡುವ ದೃಷ್ಟಿಯಿಂದ ವ್ಯವಸ್ಥೆಯ ನ್ಯೂನತೆಗಳನ್ನು ಗುರುತಿಸಿವುದು, ಶಾಲೆಯ ಆಡಳಿತದಲ್ಲಿ ವ್ಯವಸ್ಥಾಪನಾ ಅಭ್ಯಾಸಗಳನ್ನು ಸುಧಾರಿಸಲು ಮತ್ತು ಇಲಾಖೆಯ ಈ ಪ್ರಯತ್ನಗಳಿಗೆ ಆಡಿಟ್ ಪಾತ್ರವು ಮಹತ್ವವಾಗಿದೆ.

ISEC, IISc ಮತ್ತು NLSIU ನ ಪರಿಣಿತ ಸದಸ್ಯರೊಂದಿಗೆ ಆಡಿಟ್ ತಂಡವು ಕರ್ನಾಟಕದಾದ್ಯಂತ ಸುಮಾರು 40 KREIS ಶಾಲೆಗಳಿಗೆ ಭೇಟಿ ನೀಡಿ, ಕಟ್ಟಡಗಳು, ತರಗತಿಗಳು, ಆಟದ ಮೈದಾನಗಳು, ಪ್ರಯೋಗಾಲಯಗಳು, ಗ್ರಂಥಾಲಯ, ಕಂಪ್ಯೂಟರ್ ಲ್ಯಾಬ್, ICT, ಇಂಟರ್ನೆಟ್ ಸೌಲಭ್ಯಗಳು, ಉಪಕರಣಗಳು, ರಾಂಪ್, ಒಳಚರಂಡಿ ಸಂಸ್ಕರಣಾ ಘಟಕದಂತಹ ವಿವಿಧ ನಿಯತಾಂಕಗಳೊಂದಿಗೆ ಪರಿಶೀಲನೆ ನಡೆಸಿದ್ದಾರೆ. ಯುಪಿಎಸ್, ವಾಟರ್ ಪ್ಯೂರಿಫೈಯರ್, ಕಿಚನ್, ಡೈನಿಂಗ್ ಹಾಲ್, ಹಾಸ್ಟೆಲ್ ಸೌಲಭ್ಯ, ಆಹಾರ, ನೈರ್ಮಲ್ಯ, ಗುಣಮಟ್ಟದ ವಸತಿ, ಕೊಠಡಿಗಳ ಗಾತ್ರ, ವಸತಿ ನಿಲಯ, ಶೌಚಾಲಯ (ಬಾಲಕರು, ಹುಡುಗಿಯರು, ಸಿಬ್ಬಂದಿ ಮತ್ತು ವಿಕಲಚೇತನರಿಗೆ ಪ್ರತ್ಯೇಕ) ಕುಡಿಯುವ ನೀರು,

ಸೋಲಾರ್, ವಿದ್ಯುದ್ದೀಕರಣ ಮತ್ತು ಇತ್ಯಾದಿ ಸಮಸ್ಯೆಗಳನ್ನು ಸಹಾ ಗುರುತಿಸಿದ್ದಾರೆ. ದಿನದಿಂದ ದಿನಕ್ಕೆ KREIS ಶಾಲೆಗಳ ಆಡಳಿತದ ನಿರ್ವಹಣೆಯಲ್ಲಿ ಸುಗಮಗೊಳಿಸಲು ಮತ್ತು ಅವುಗಳನ್ನು ಸುವ್ಯವಸ್ಥಿತಗೊಳಿಸಲು ಈ ನಿಯತಾಂಕಗಳನ್ನು ನವೀಕರಿಸಿ, ಶೀಘ್ರದಲ್ಲೇ ವರದಿಯನ್ನು ಸಮಾಜ ಕಲ್ಯಾಣ ಇಲಾಖೆ ಸಲ್ಲಿಸಲಾಗುವುದು.




## XII. KREIS PU ಕಾಲೇಜುಗಳಲ್ಲಿ ಡಿಜಿಟಲ್ ಸಾಕ್ಷರತೆಗಾಗಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ICT) ಮೂಲಸೌಕರ್ಯ ಒದಗಿಸುವುದು

HAL CSR ನಿಧಿಯ ಅಡಿಯಲ್ಲಿ KSCSTಯು ಕರ್ನಾಟಕದಾದ್ಯಂತ 61 KREIS ಕಾಲೇಜುಗಳಲ್ಲಿ ಲ್ಯಾಪ್‌ಟಾಪ್‌ಗಳು (ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆ), ಪ್ರೊಜೆಕ್ಟರ್‌ಗಳು, ಲೈಬ್ರರಿ ಪುಸ್ತಕಗಳು, ನೆಟ್‌ವರ್ಕ್ ಸಂಪರ್ಕ ಮತ್ತು ಕಂಪ್ಯೂಟರ್ ಲ್ಯಾಬ್ (AIO PC ಡೆಸ್ಕ್‌ಟಾಪ್) ಒದಗಿಸುವ ಮೂಲಕ KREIS ವಸತಿ ವಿಜ್ಞಾನ ಪಿಯು ಕಾಲೇಜುಗಳಲ್ಲಿ ಡಿಜಿಟಲ್ ಸಾಕ್ಷರತೆಯ ಅನುಷ್ಠಾನಕ್ಕಾಗಿ ICT ಮೂಲಸೌಕರ್ಯವನ್ನು ಸ್ಥಾಪಿಸುತ್ತಿದೆ. ಈ ಯೋಜನೆಯ ವೆಚ್ಚ ರೂ. 3.64 ಕೋಟಿ ರೂಗಳು. ಯೋಜನೆಯ ಅನುಸ್ಥಾಪನೆ ಪ್ರಗತಿಯಲ್ಲಿದೆ.

## XIII. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕೇಂದ್ರ

- "ಭೀಮ್ ಕೌಶಲ್ಯ - ಕೆಎಸ್‌ಸಿಎಸ್‌ಟಿ" ಎಂಬ ವೆಬ್ ಆಧಾರಿತ ಆಂಡ್ರಾಯ್ಡ್ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ವಿವಿಧ ಹವಾಮಾನ ವಲಯಗಳ ಅಡಿಯಲ್ಲಿ ಉದ್ಯೋಗಾವಕಾಶಗಳು ಸೇರಿದಂತೆ ಕೌಶಲ್ಯ ತರಬೇತಿಗಳನ್ನು ಗುರುತಿಸುವುದು ಈ ಅಪ್ಲಿಕೇಶನ್ ನ ಉದ್ದೇಶವಾಗಿದೆ.
- SC/ST ಸಮುದಾಯಗಳಿಗೆ ಹಣ್ಣುಗಳು ಮತ್ತು ತರಕಾರಿಗಳ ಕೊಯ್ಲಿನಲ್ಲಿ ತಂತ್ರಜ್ಞಾನದ ಬಳಕೆ ಕುರಿತು ಸೆಪ್ಟೆಂಬರ್ 2022 ರಲ್ಲಿ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (IIHR), ಹೆಸರಘಟ್ಟ, ಬೆಂಗಳೂರಿನಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.
- ಘನತ್ಯಾಜ್ಯ ನಿರ್ವಹಣೆಗಾಗಿ ಪಟ್ಟಣಗಳು ಮತ್ತು ಪುರಸಭೆಗಳ ಉದ್ಯೋಗಿಗಳಿಗೆ ಸರಿಯಾದ ರೀತಿಯ ಸಾಮಗ್ರಿಗಳು ಮತ್ತು ಸಲಕರಣೆಗಳನ್ನು ಗುರುತಿಸುವಲ್ಲಿ ಮಂಡಳಿಯು ಸಫಾಯಿ ಕರ್ಮಚಾರಿ ಆಯೋಗವನ್ನು ಬೆಂಬಲಿಸಿದೆ.
- ಗುವಾಹಟಿಯ IITಯಲ್ಲಿ 11-12ನೇ ನವೆಂಬರ್ 2022 ರಂದು ನಡೆದ "ಗ್ರಾಮೀಣ ಸಮುದಾಯದ ವಿಜ್ಞಾನ ಮತ್ತು ತಂತ್ರಜ್ಞಾನದ ಸಬಲೀಕರಣ" ಕುರಿತ ಎರಡು ದಿನಗಳ ಸಮಾವೇಶದಲ್ಲಿ ಭಾಗವಹಿಸಲಾಯಿತು ಹಾಗೂ ಗೌರವಾನ್ವಿತ ಶ್ರೀ ಅರ್ಜುನ್

ಮುಂಡಾಜಿ, ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವರು, ಪ್ರೊ.ಎಸ್.ಚಂದ್ರಶೇಖರ್ ಕಾರ್ಯದರ್ಶಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರ, ಪ್ರೊ.ಟಿ.ಜಿ.ಸೀತಾರಾಮ್, ನಿರ್ದೇಶಕರು, IIT ಗುವಾಹಟಿ ಮತ್ತು ಬುಡಕಟ್ಟು ವಿಶ್ವವಿದ್ಯಾಲಯಗಳ ಉಪಕುಲಪತಿಗಳು ಮತ್ತು ಇತರರಿಗೆ ಮಂಡಳಿಯ ಪ.ಜಾತಿ/ಪ.ಪಂಗಡ ಕೇಂದ್ರದ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಲಾಯಿತು.







ಭೀಮ್ ಆಪ್ ನಾ ಕಿರು ನೋಟ ಮತ್ತು ತರಕಾರಿಗಳ ಕೊಯ್ಲಿನಲ್ಲಿ ತಂತ್ರಜ್ಞಾನದ ಬಳಕೆ ಕುರಿತು ಕಾರ್ಯಗಾರ





ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವರು ಗೌರವಾನ್ವಿತ ಶ್ರೀ ಅರ್ಜುನ್ ಮುಂಡಾಜಿ ರವರು ಮಂಡಳಿಯ ಕಾರ್ಯಕ್ರಮ ಕುರಿತು ಮಾಹಿತಿ ಪಡೆಯುತ್ತಿರುವುದು

**ಸಂಪರ್ಕ:**
ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ (KSCST)
ಭಾರತೀಯ ವಿಜ್ಞಾನ ಮಂದಿರ ಆವರಣ,
ಬೆಂಗಳೂರು-560012
ದೂರವಾಣಿ: 080- 23341652, 22932212
ಇಮೇಲ್: office.kscst@iisc.ac.in

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನ ಕಾಲೇಜು ಪ್ರವೇಶ ದ್ವಾರದ ಹತ್ತಿರ, ಜಿ.ಕೆ.ವಿ.ಕೆ ಆವರಣ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ, ವಿದ್ಯಾರಣ್ಯಪುರ ಪೋಸ್ಟ್, ಯಲಹಂಕ, ಬೆಂಗಳೂರು

**ಪರಿಚಯ:**

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗ ಸಂಸ್ಥೆಯಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ 2005ರಿಂದ ಕಾರ್ಯನಿರ್ವಹಿಸುತ್ತಿದ್ದು, ರಾಜ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಬೆಳವಣಿಗೆ, ಮೂಲ ವಿಜ್ಞಾನಕ್ಕೆ ಉತ್ತೇಜನ, ವಿದ್ಯಾರ್ಥಿಗಳಲ್ಲಿ ಮತ್ತು ಜನಸಾಮಾನ್ಯರಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸುವುದು, ವಿಜ್ಞಾನ ಸಂವಹನ, ತಂತ್ರಜ್ಞಾನ ಪ್ರಸಾರ, ನಾವೀನ್ಯತೆ ಮತ್ತು ಉದ್ಯಮಶೀಲತೆಗಳನ್ನು ಬೆಳೆಸುವುದು, ಪ್ರತಿಭೆಗಳನ್ನು ಗುರುತಿಸುವುದು ಮತ್ತು ರಾಜ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕಾರ್ಯನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಉದ್ದೇಶಗಳನ್ನು ಹೊಂದಿದೆ.

ಪ್ರಸ್ತುತ ಪ್ರೊ. ಎಸ್ ಅಯ್ಯಪ್ಪನ್, ಕುಲಾಧಿಪತಿಗಳು, ಕೇಂದ್ರೀಯ ಕೃಷಿ ವಿಶ್ವವಿದ್ಯಾನಿಲಯ, ಇಂಫಾಲ ಮತ್ತು ನಿವೃತ್ತ ಮಹಾ ನಿರ್ದೇಶಕರು, ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಹಾಗೂ ನಿವೃತ್ತ ಕಾರ್ಯದರ್ಶಿಗಳು, ಕೃಷಿ ಸಂಶೋಧನೆ ಮತ್ತು ಶಿಕ್ಷಣ ವಿಭಾಗ, ಭಾರತ ಸರ್ಕಾರ ಇವರು ಅಕಾಡೆಮಿಯು ಅಧ್ಯಕ್ಷರಾಗಿದ್ದು, ಪ್ರಮುಖ ಇಲಾಖೆಗಳ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಪರಿಣತರನ್ನೊಳಗೊಂಡ ನಾಮನಿರ್ದೇಶಿತ ಸದಸ್ಯರು ಮತ್ತು ವಿಶೇಷ ಆಹ್ವಾನಿತರು ಸೇರಿ ಒಟ್ಟು 13 ಸದಸ್ಯರನ್ನು ಹೊಂದಿದೆ.

2022-'23ನೇ ಸಾಲಿನಲ್ಲಿ ಅಕಾಡೆಮಿಯ ವತಿಯಿಂದ ಆಯೋಜಿಸಲಾದ ಪ್ರಮುಖ ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ:

**1. ವೆಬಿನಾರ್ ಮತ್ತು ಭೌತಿಕ ಕಾರ್ಯಕ್ರಮಗಳು**

ಆರ್ಥಿಕ ವರ್ಷ 2022-23ರಲ್ಲಿ ಜನವರಿ 2023 ರವರೆಗೆ ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯದ ಮುಂಚೂಣಿ ಕ್ಷೇತ್ರದಲ್ಲಿ 30 ಕಾರ್ಯಕ್ರಮಗಳನ್ನು (ಅವುಗಳಲ್ಲಿ 23 ವೆಬಿನಾರ್ ಗಳು ಮತ್ತು 07 ಭೌತಿಕ ಕಾರ್ಯಕ್ರಮಗಳು) ವಿವಿಧ ಸಂಶೋಧನಾ ಸಂಸ್ಥೆಗಳು, ವಿಜ್ಞಾನ ಕೇಂದ್ರಗಳು, ಶೈಕ್ಷಣಿಕ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಲಾಗಿದ್ದು, ಸುಮಾರು 2500 ಫಲಾನುಭವಿಗಳು ಈ ಕಾರ್ಯಕ್ರಮಗಳ ಪ್ರಯೋಜನವನ್ನು ಪಡೆದಿದ್ದಾರೆ.

| ಕ್ರ. ಸಂ | ದಿನಾಂಕ | ಕಾರ್ಯಕ್ರಮ | ಸಹಯೋಗ ಸಂಸ್ಥೆ |
|---|---|---|---|
| 1 | ಏಪ್ರಿಲ್ 7, 2022 | 6/6: ಕಣ್ಣಿನ ಆರೈಕೆ - ಡಾ.ಅರುಣ್ ಅಡ್ಕೋಲಿ | - |
| 2 | ಏಪ್ರಿಲ್ 18, 2022 | ಅಪರೂಪದ ಆನುವಂಶಿಕ ರೋಗ ಸಂಪೂರ್ಣ-ಎಕ್ಸೋಮ್ ಮತ್ತು ಸಂಪೂರ್ಣ-ಜೀನೋಮ್ ಸೀಕ್ವೆನ್ಸಿಂಗ್ ಮೂಲಕ ರೋಗನಿರ್ಣಯ | - |

| | | | |
|---|---|---|---|
| 3 | ಏಪ್ರಿಲ್ 19, 2022 | ಅಕಾಡೆಮಿ ವೆಬಿನಾರ್ ಸರಣಿ - ಮ್ಯಾಜಿಕ್ ಆಫ್ ಪೈ - ಪ್ರೊ. ಶರ್ಮಿಷ್ಠ ಸಾಹು | - |
| 4 | ಮೇ 7, 2022 | ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಶಿಕ್ಷಣ | ಇ-ಜ್ಞಾನ ಮತ್ತು ಸುರಾನಾ ಕಾಲೇಜು |
| 5 | ಜೂನ್ 2-4, 2022 | ನವೀನ ಸಂಶೋಧನೆ ಮತ್ತು ಜ್ಞಾನ ಅಭಿವೃದ್ಧಿಗೆ 3-ಡಿ ಪ್ರಿಂಟಿಂಗ್ | ಜ್ಯೋತಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು |
| 6 | ಜೂನ್ 4, 2022 | ಮಹಿಳಾ ಬರಹಗಾರರಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಪತ್ರಿಕೋದ್ಯಮ | ವಿಜ್ಞಾನ್ ಪ್ರಸಾರ, ನವದೆಹಲಿ ಮತ್ತು ಕುತುಹಾಲಿ |
| 7 | ಜೂನ್ 8, 2022 | ವಿಶ್ವ ಸಾಗರ ದಿನ - ಡಾ.ಎನ್.ರಾಮಯ್ಯ, ನಿವೃತ್ತ ಮುಖ್ಯ ವಿಜ್ಞಾನಿ, ಸಿಎಸ್ಐಆರ್-ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಓಷಿಯನೋಗ್ರಫಿ (ಎನ್ಐಒ), ಗೋವಾ | - |
| 8 | ಜೂನ್ 29, 2022 | ಪ್ರತಿಭಾನ್ವೇಷಣೆ ಕಾರ್ಯಕ್ರಮ: ಥರ್ಮೋಡೈನಾಮಿಕ್ಸ್ - ಡಾ.ಜಿ.ಕೆ.ವೆಂಕಟೇಶ್ | ಕೆಸ್ಟೆಪ್ಸ್, ಕರ್ನಾಟಕ ಸರ್ಕಾರ |
| 9 | ಜೂನ್ 30, 2022 | ಪ್ರತಿಭಾನ್ವೇಷಣೆ ಕಾರ್ಯಕ್ರಮ: ಮಾನವ ದೇಹದ ಅಂಗಗಳು - ಡಾ.ಸಿ.ಕೆ.ಮಂಜುನಾಥ್ | ಕೆಸ್ಟೆಪ್ಸ್, ಕರ್ನಾಟಕ ಸರ್ಕಾರ |
| 10 | ಜೂನ್ 28 - ಜುಲೈ 04, 2022 | ಬಯೋಟೆಕ್ನಾಲಜಿ ಕಾರ್ಯಾಗಾರ - ಡಿಬಿಟಿ ಸ್ಕಿಲ್ ವಿಜ್ಞಾನ್ ಕಾರ್ಯಕ್ರಮ | ಕೆಟೆಕ್, ಕರ್ನಾಟಕ ಸರ್ಕಾರ |
| 11 | ಆಗಸ್ಟ 22-26, 2022 | ಹೈಡ್ರೋ-ಜಿಯೋಲಾಜಿಕಲ್ ಎಂಜಿನಿಯರಿಂಗ್ | ಜೆಎನ್ ಎನ್ ಸಿಇ, ಶಿವಮೊಗ್ಗ |
| 12 | ಸೆಪ್ಟೆಂಬರ್ 9, 2022 | ಜೇಮ್ಸ್ ವೆಬ್ ಟೆಲಿಸ್ಕೋಪ್ | ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು |
| 13 | ಸೆಪ್ಟೆಂಬರ್ 18, 2022 | ಶಾಲಾ ವಿದ್ಯಾರ್ಥಿಗಳಿಗಾಗಿ ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ" ಕುರಿತ 2 ನೇ ವರ್ಚುವಲ್ ರಾಷ್ಟ್ರೀಯ ಸಮ್ಮೇಳನ | ಐ.ಎಸ್.ಐ. ಅಹ್ಮದಾಬಾದ್, ಪೀಪಲ್ ಸೈನ್ಸ್ ಫೋರಂ, ಮೈಸೂರು ಮತ್ತು ಸ್ಪೇಸ್ ಗೀಕ್ |
| 14 | ಸೆಪ್ಟೆಂಬರ್ 21-23, 2022 | 62 ನೇ ವಾರ್ಷಿಕ ಅಂತಾರಾಷ್ಟ್ರೀಯ ಸಮ್ಮೇಳನ - "ಸೂಕ್ಷ್ಮಜೀವಿಗಳು ಮತ್ತು ಸಮಾಜ: ಪ್ರಸ್ತುತ ಪ್ರವೃತ್ತಿಗಳು ಮತ್ತು ಭವಿಷ್ಯದ ನಿರೀಕ್ಷೆಗಳು" | ಅಸೋಸಿಯೇಷನ್ ಆಫ್ ಮೈಕ್ರೋಬಯಾಲಜಿಸ್ಟ್ಸ ಆಫ್ ಇಂಡಿಯನ್ ಮತ್ತು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| 15 | ಸೆಪ್ಟೆಂಬರ್ 23-25, 2022 | ಶಿಕ್ಷಕರ ತರಬೇತಿ ಕಾರ್ಯಕ್ರಮ | - |
| 16 | ಅಕ್ಟೋಬರ್ 01-14, 2022 | ವಿಜ್ಞಾನ ಪ್ರತಿಭಾ ಶೋಧನೆ (ಅಕ್ಟೋಬರ್: 1, 6, 7, 10, 11, 14) | ಕೆಸ್ಟೆಪ್ಸ್, ಬೆಂಗಳೂರು |
| 17 | ನವೆಂಬರ್ 01-30, 2022 | ವಿಜ್ಞಾನ ಪ್ರತಿಭಾ ಶೋಧನೆ (ನವೆಂಬರ್: 3,5,7,8,14,15,23,25,29,30) | ಕೆಸ್ಟೆಪ್ಸ್, ಬೆಂಗಳೂರು |
| 18 | ನವೆಂಬರ್ 21-23, 2022 | ನೊಬೆಲ್ ಪ್ರಶಸ್ತಿ ಉಪನ್ಯಾಸ ಮಾಲೇ 2022 | - |
| 19 | ನವೆಂಬರ್ 21, 2022 | ರೀ-ಸರ್ಚ್ '22 | ಎಸ್.ಆರ್.ಎನ್. ಆದರ್ಶ ಕಾಲೇಜು, ಬೆಂಗಳೂರು |
| 20 | ಡಿಸೆಂಬರ್ 12-14, 2022 | ಅಗ್ರಿಪ್ರೆನ್ಯೂರ್ಶಿಪ್ ಅಭಿವೃದ್ಧಿ | ಮ್ಯಾನೇಜ್, ಹೈದರಾಬಾದ್ |
| 21 | ಡಿಸೆಂಬರ್ 17, 2022 | ಉತ್ತಮ ಆಡಳಿತದ ಬಗ್ಗೆ ಪ್ಯಾನಲ್ ಚರ್ಚೆ: ಕೆಎಸ್ಟಿಎ ಫೆಲೋಗಳನ್ನು ಒಳಗೊಂಡ ಸಮಿತಿ | - |

| | | | |
|---|---|---|---|
| 22 | ಡಿಸೆಂಬರ್ 22, 2022 | ಉತ್ತಮ ಆಡಳಿತದ ಬಗ್ಗೆ ವಿಶೇಷ ಉಪನ್ಯಾಸ: ಶ್ರೀ ಎಂ.ಎನ್.ವಿದ್ಯಾಶಂಕರ್ ಐ.ಎ.ಎಸ್ ಮತ್ತು ಪ್ರೊ.ಗೋಪಾಲ್ ನಾಯಕ್ | - |
| 23 | ಡಿಸೆಂಬರ್ 01-31, 2022 | ವಿಜ್ಞಾನ ಪ್ರತಿಭಾ ಶೋಧನೆ (ಡಿಸೆಂಬರ್: 1,2,5,7,21,22,26,27,28,29,30,31) | ಕೆಸ್ಟೆಪ್ಸ್, ಬೆಂಗಳೂರು |

**ಭೌತಿಕ ಕಾರ್ಯಕ್ರಮಗಳು**

| ಕ್ರ. ಸಂ. | ದಿನಾಂಕ | ವಿಷಯ | ಸಹಯೋಗ ಸಂಸ್ಥೆ |
|---|---|---|---|
| 1 | ಅಕ್ಟೋಬರ್ 06-12, 2022 | ಜೈವಿಕ ತಂತ್ರಜ್ಞಾನದಲ್ಲಿ ಕೌಶಲ್ಯ ವಿಜ್ಞಾನ | ಕೆ.ಐ.ಟಿ.ಎಸ್ & ಜೈವಿಕ ತಂತ್ರಜ್ಞಾನ ವಿಭಾಗ, ಭಾರತ ಸರ್ಕಾರ |
| 2 | ಅಕ್ಟೋಬರ್ 08, 2022 | 'ವಿಜ್ಞಾನ ಸಂಜೆ' (ಸಂಪನ್ಮೂಲ ತಜ್ಞರು: ಡಾ.ನಾ.ಸೋಮೇಶ್ವರ) | ಕುತೂಹಲಿ, ವಿಜ್ಞಾನ್ ಪ್ರಸಾರ, ನವದೆಹಲಿ |
| 3 | ಅಕ್ಟೋಬರ್ 18-19, 2022 | ವಿಜ್ಞಾನ ಮತ್ತು ತಂತ್ರಜ್ಞಾನ ಭಾಷಾಂತರ | ಕುತೂಹಲಿ, ವಿಜ್ಞಾನ್ ಪ್ರಸಾರ, ನವದೆಹಲಿ |
| 4 | ನವೆಂಬರ್ 12, 2022 | ವಿಜ್ಞಾನ ಸಂಜೆ ಸಂಪನ್ಮೂಲ ತಜ್ಞರು: ಪ್ರೊ.ವಿಜಯರಾಘವನ್ | ಕುತೂಹಲಿ, ವಿಜ್ಞಾನ್ ಪ್ರಸಾರ, ನವದೆಹಲಿ |
| 5 | ಡಿಸೆಂಬರ್ 10, 2022 | ವಿಜ್ಞಾನ ಸಂಜೆ' | ಕುತೂಹಲಿ, ವಿಜ್ಞಾನ್ ಪ್ರಸಾರ, ನವದೆಹಲಿ |
| 6 | ಡಿಸೆಂಬರ್ 13-17, 2022 | ಸಂಶೋಧನಾ ವಿಧಾನ ಮತ್ತು ದತ್ತಾಂಶ ವಿಶ್ಲೇಷಣೆ | ವಿಟಿಯು, ಬೆಳಗಾವಿ |
| 7 | ಡಿಸೆಂಬರ್ 22, 2022 | ವಿಜ್ಞಾನ ವಿಸ್ಮಯ 2022 | ಶ್ರೀ ಸಾಯಿ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಧಾರವಾಡ |

## 2. ವಿಜ್ಞಾನ ಮತ್ತು ತಂತ್ರಜ್ಞಾನ ವಾರ್ಷಿಕ ಸಮ್ಮೇಳನ

ಅಕಾಡೆಮಿ ಮತ್ತು ತುಮಕೂರಿನ ಸಿದ್ದಗಂಗಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಜಂಟಿಯಾಗಿ 2022ರ ಜುಲೈ 19 ರಿಂದ 21, ರವರೆಗೆ "ನವೋದ್ಯಮಗಳಿಗೆ ವಿಜ್ಞಾನ ಮತ್ತು ತಂತ್ರಜ್ಞಾನ" ಎಂಬ ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿತ್ತು. ಸಮ್ಮೇಳನವನ್ನು ತುಮಕೂರು ವಿಧಾನ ಸಭಾ ಸದಸ್ಯರಾದ ಶ್ರೀ ಜ್ಯೋತಿ ಗಣೇಶ್ ರವರು ಉದ್ಘಾಟಿಸಿದರು. ಅಕಾಡೆಮಿಯ ಅಧ್ಯಕ್ಷರು ಹಾಗೂ ಪದ್ಮಶ್ರೀ ಪುರಸ್ಕೃತ ಪ್ರೊ. ಎಸ್. ಅಯ್ಯಪ್ಪನ್ ರವರು ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನಾಡಿದರು. ಭಾರತೀಯ ವಿಜ್ಞಾನ ಸಂಸ್ಥೆಯ ಏರೋಸ್ಪೇಸ್ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ. ಕೆ.ಪಿ.ಜೆ. ರೆಡ್ಡಿ ರವರು ಮುಖ್ಯ ಅತಿಥಿಗಳ ಭಾಷಣ ಮಾಡಿದರು. ಸಿದ್ದಗಂಗಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಟಿ.ಕೆ. ನಂಜುಂಡಪ್ಪ ನವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಎ.ಎಂ. ರಮೇಶ್ ರವರು, ಸಿದ್ದಗಂಗಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ.ಶಿವಕುಮಾರಯ್ಯರವರು ಮತ್ತು ಪ್ರಾಂಶುಪಾಲರಾದ ಡಾ. ಎಸ್.ವಿ. ದಿನೇಶ್ ರವರು, ಸಿದ್ದಗಂಗಾ ಟೆಕ್ನಾಲಜಿ ಬಿಸಿನೆಸ್

ಇನ್ಕ್ಯುಬೇಟರ್ ನ ಬೋಧಕ ಸಂಯೋಜಕರು ಹಾಗೂ ಕಾರ್ಯಕ್ರಮದ ಸಂಯೋಜಕರಾದ ಡಾ. ಸಿ.ಪಿ. ಲೋಹಿತ್ ರವರು ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಮೂರು ದಿನಗಳ ಈ ಸಮ್ಮೇಳನದಲ್ಲಿ ವಿಷಯ ತಜ್ಞರು, ನೀತಿ ನಿರೂಪಕರು, ತಂತ್ರಜ್ಞಾನಿಗಳು, ನವೋದ್ಯಮಿಗಳು, ಉದಯೋನ್ಮುಖ ಯುವ ಉದ್ಯಮಿಗಳು ಉಪನ್ಯಾಸದ ಮೂಲಕ ತಮ್ಮ ಜ್ಞಾನವನ್ನು ಹಂಚಿಕೊಂಡರು. ಸಮ್ಮೇಳನದ ಪ್ರತಿನಿಧಿಗಳಾಗಿ ರಾಜ್ಯದ ಮತ್ತು ದೇಶದ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಅಧ್ಯಾಪಕರು, ಉದ್ಯಮಿಗಳು ಸೇರಿದಂತೆ 500ಕ್ಕೂ ಹೆಚ್ಚು ಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮದ ಭಾಗವಾಗಿ, ಭೌತ ವಿಜ್ಞಾನ ಮತ್ತು ಗಣಿತ ವಿಜ್ಞಾನ, ರಾಸಾಯನಿಕ ವಿಜ್ಞಾನ, ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಮತ್ತು ಬಹುಶಿಸ್ತೀಯ ವಿಜ್ಞಾನದ ವಿವಿಧ ವಿಷಯಗಳಲ್ಲಿ 91 ವೈಜ್ಞಾನಿಕ ಪ್ರಬಂಧಗಳನ್ನು ಪೋಸ್ಟರ್ ರೂಪದಲ್ಲಿ ಪ್ರಸ್ತುತ ಪಡಿಸಲಾಯಿತು.




### 3. ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ

ಅಕಾಡೆಮಿಯ ವತಿಯಿಂದ ಕರ್ನಾಟಕ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಸಹಯೋಗದೊಂದಿಗೆ 2022ರ ಸೆಪ್ಟೆಂಬರ್ 14 ರಿಂದ 16 ರವರೆಗೆ ಬೀದರ್ ನಲ್ಲಿ ನಾಲ್ಕನೇ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನವನ್ನು ಕನ್ನಡದಲ್ಲಿ ಆಯೋಜಿಸಲಾಯಿತು. ವಿಜ್ಞಾನಿಗಳು, ಪ್ರಖ್ಯಾತ ವಿಜ್ಞಾನ ಬರಹಗಾರರು ಮತ್ತು ಸಂವಹನಕಾರರಿಂದ ಆಹ್ವಾನಿತ ಉಪನ್ಯಾಸಗಳನ್ನು ಆಯೋಜಿಸಲಾಗಿತ್ತು. ಇದಲ್ಲದೆ, ಸಂಶೋಧನಾ ವಿದ್ಯಾರ್ಥಿಗಳು ಕನ್ನಡದಲ್ಲಿ ಪೋಸ್ಟರ್ ಪ್ರಸ್ತುತಿಯನ್ನು ಮಾಡಿದರು. ಸಮ್ಮೇಳನವನ್ನು ಬೀದರ್ ನ ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀ ಗೋವಿಂದರೆಡ್ಡಿ, ಭಾ.ಆ.ಸೇ. ಇವರು ಉದ್ಘಾಟಿಸಿದರು. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಅಕಾಡೆಮಿಯ ಮಾನ್ಯ ಸದಸ್ಯರಾದ ಪ್ರೊ. ಬಿ. ಇ. ಮೂಲಿಮನಿರವರು ಮತ್ತು ಪ್ರೊ. ಎ. ಎಸ್. ರಾಜಾಸಾಬ್ ರವರು ಹಾಗೂ ಅಕಾಡೆಮಿಯ ನಿಕಟಪೂರ್ವ ಸದಸ್ಯರಾದ ಡಾ. ಪಿ. ಎಸ್. ಶಂಕರ್ ರವರು ಉಪಸ್ಥಿತರಿದ್ದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಬೀದರ್ ನ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಸವರಾಜ ಜಾಬಶೆಟ್ಟಿ ರವರು ವಹಿಸಿದ್ದರು. ಕಲ್ಯಾಣ ಕರ್ನಾಟಕ ಭಾಗದ ಸುಮಾರು 5oo ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು ಮತ್ತು ಸಮ್ಮೇಳನದಲ್ಲಿ 170 ಪೋಸ್ಟರ್ ಗಳನ್ನು ಪ್ರಸ್ತುತಪಡಿಸಲಾಯಿತು.



**4. ಜೈವಿಕ ತಂತ್ರಜ್ಞಾನದಲ್ಲಿ ಕೌಶಲ್ಯ ವಿಜ್ಞಾನ ಕಾರ್ಯಕ್ರಮ**


ಕೆಎಸ್‌ಟಿಎ-ಡಿಬಿಟಿ ಕೌಶಲ್ಯ ವಿಜ್ಞಾನ ಕಾರ್ಯಕ್ರಮವು 15 ದಿನಗಳ ಬೋಧಕ ತರಬೇತಿ ಕಾರ್ಯಕ್ರಮವಾಗಿದ್ದು, ಕರ್ನಾಟಕ ಸರ್ಕಾರದ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿಯಲ್ಲಿರುವ ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೇವೆಗಳ (ಕಿಟ್ಸ್) ಮೂಲಕ ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯ ಧನಸಹಾಯದೊಂದಿಗೆ ನಡೆಸಲಾಗುತ್ತಿದೆ. ಈ ಕಾರ್ಯಕ್ರಮದಡಿಯಲ್ಲಿ ಕರ್ನಾಟಕ ರಾಜ್ಯದ ವಿವಿಧ ಕಾಲೇಜುಗಳು/ವಿಶ್ವವಿದ್ಯಾಲಯಗಳು/ ಶಿಕ್ಷಣ ಸಂಸ್ಥೆಗಳ ಪದವಿಪೂರ್ವ/ಪದವಿ/ಸ್ನಾತಕೋತ್ತರ ಪದವಿ ಬೋಧಕರು ಮತ್ತು ಯುವ ವೃತ್ತಿಪರ ವಿಜ್ಞಾನಿಗಳಿಗೆ ಜೈವಿಕ ತಂತ್ರಜ್ಞಾನದಲ್ಲಿ ಹೊಸ ಪ್ರವೃತ್ತಿಗಳಲ್ಲಿ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಜ್ಞಾನವನ್ನು ಪಡೆಯಲು ಅನುವು ಮಾಡಿಕೊಡಲಾಗುತ್ತಿದೆ. ರಾಜ್ಯದ ವಿವಿಧ ಕಾಲೇಜುಗಳು / ವಿಶ್ವವಿದ್ಯಾಲಯಗಳು / ಶಿಕ್ಷಣ ಸಂಸ್ಥೆಗಳ ಸುಮಾರು 25 ಜೀವಶಾಸ್ತ್ರ ಉಪನ್ಯಾಸಕರುಗಳಿಗೆ ಅಕಾಡೆಮಿಯಲ್ಲಿ ಹೈಬ್ರಿಡ್ ಮಾದರಿಯಲ್ಲಿ 2 ವಾರಗಳ (ಒಂದು ವಾರ ಆನ್ಲೈನ್ ಮತ್ತು ಒಂದು ವಾರದ ಆಫ್ಲೈನ್) ಕಾಲ "ಜೈವಿಕ ತಂತ್ರಜ್ಞಾನದಲ್ಲಿ ಕೌಶಲ್ಯ ವಿಜ್ಞಾನ" ಕುರಿತ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು. ಹೆಸರಾಂತ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳ ಸಂಪನ್ಮೂಲ ತಜ್ಞರ ಮೂಲಕ ತರಬೇತಿ ಮತ್ತು ಆಹ್ವಾನಿತ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ಶಿಬಿರಾರ್ಥಿಗಳಿಗೆ ಬೆಂಗಳೂರಿನಲ್ಲಿರುವ ಹೆಸರಾಂತ ವೈಜ್ಞಾನಿಕ ಸಂಸ್ಥೆಗಳು ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯಗಳಿಗೆ ಭೇಟಿಯನ್ನು ಸಹ ಏರ್ಪಡಿಸಲಾಗಿತ್ತು.





## 5. ಅಕಾಡೆಮಿ ಪ್ರಕಟಣೆಗಳು


### *5.1* ದ್ವೈಮಾಸಿಕ ಸಂಚಿಕೆ ವಿಜ್ಞಾನ ಲೋಕ


ಅಕಾಡೆಮಿಯು 'ವಿಜ್ಞಾನ ಲೋಕ' ಎಂಬ ದ್ವೈಮಾಸಿಕ ಸಂಚಿಕೆಯನ್ನು 2007ರ ಆಗಸ್ಟ ಮಾಹೆಯಿಂದ ನಿರಂತರವಾಗಿ ಪ್ರಕಟಿಸುತ್ತಿದೆ. 2022-23ನೇ ಸಾಲಿನಲ್ಲಿ ಜನವರಿ 2023ರವರೆಗೆ 05 ಸಂಚಿಕೆಗಳನ್ನು ಪ್ರಕಟಿಸಲಾಗಿದೆ. ಪ್ರತಿ ಸಂಚಿಕೆಯ ತಲಾ 2000 ಪ್ರತಿಗಳನ್ನು ಮುದ್ರಿಸಿ, ಚಂದಾದಾರರಾದ ವಿಜ್ಞಾನ ಪದವಿ ಪೂರ್ವ ಮತ್ತು ಪದವಿ ಕಾಲೇಜು, ವಿಜ್ಞಾನ ಕೇಂದ್ರಗಳು, ಗ್ರಂಥಾಲಯಗಳು ಮತ್ತು ಇನ್ನಿತರೆ ಸಂಘ ಸಂಸ್ಥೆಗಳಿಗೆ ಕಳುಹಿಸಿಕೊಡಲಾಗಿದೆ. ವಿಜ್ಞಾನ ಲೋಕದ ಎಲ್ಲಾ ಸಂಚಿಕೆಗೆಗಳನ್ನು ಅಕಾಡೆಮಿಯ ವೆಬ್ ಸೈಟ್ kstacademy.in ನಲ್ಲಿ ಅಪ್ ಲೋಡ್ ಮಾಡಲಾಗಿದೆ.













### 5.2 ಸಂಶೋಧನೆಗಳ ಮುಂಚೂಣಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಹೊಸತೇನು?

ಕರ್ನಾಟಕ ವಿಜ್ಞಾನ ತಂತ್ರಜ್ಞಾನ ಅಕಾಡೆಮಿಯ 'ವಿಜ್ಞಾನ ಲೋಕ' ಪ್ರಕಟಣೆಯು ಕಳೆದ 16 ವರ್ಷಗಳಿಂದ ನಿರಂತರವಾಗಿ ಡಾ. ಪಿ. ಎಸ್. ಶಂಕರ್.ರವರ ಸಂಪಾದಕತ್ವದಲ್ಲಿ ಹೊರಬರುತ್ತಿದೆ. ಜೊತೆಗೆ, ಈವರೆಗೆ ನಾಲ್ಕು ವಿಶೇಷ ಸಂಚಿಕೆಗಳನ್ನೂ ಸಹ ಹೊರತಂದಿದ್ದು ಇದೀಗ 'ಸಂಶೋಧನೆಗಳ ಮುಂಚೂಣಿಯಲ್ಲಿ' ಎಂಬ 136 ಪುಟಗಳ ವಿಶೇಷ ಸಂಚಿಕೆಯನ್ನು ಪ್ರಕಟಿಸಲಾಗಿದೆ. ಈ

ವಿಶೇಷ ಸಂಚಿಕೆಯು ವಿಜ್ಞಾನ ಮತ್ತು ತಂತ್ರಜ್ಞಾನದ ಮುಂಚೂಣಿ ವಿಷಯಗಳಲ್ಲಿ ರಾಜ್ಯದ ಪ್ರಸಿದ್ಧ ವಿಜ್ಞಾನ ಲೇಖಕರ ಒಟ್ಟು 25 ಲೇಖನಗಳನ್ನು ಹೊಂದಿದೆ.


## 5.3 ಕಾರ್ಯತಂತ್ರ ಪತ್ರ-2 : ವ್ಯಾಲ್ಯೂವೇಶನ್ ಆಫ್ ಟೆರಸ್ಟ್ರಿಯಲ್ ಇಕೊಸಿಸ್ಟಂ ಸರ್ವೀಸಸ್

ಭೂಪರಿಸರ ವ್ಯವಸ್ಥೆ ಸೇವೆಗಳ ಮೌಲ್ಯಮಾಪನವು (ವಿಇಎಸ್) ಲೆಕ್ಕಕ್ಕೆ ಸಿಗದ ಪರಿಸರ ವ್ಯವಸ್ಥೆಯ ಪ್ರಯೋಜನಗಳನ್ನು ಮೌಲ್ಯೀಕರಿಸಲು ನಿಷ್ಪಕ್ಷಪಾತ ಪದ್ಧತಿಯನ್ನು ಒದಗಿಸುತ್ತದೆ ಮತ್ತು ಅರ್ಥಪೂರ್ಣ ನೀತಿ ಮಧ್ಯಸ್ಥಿಕೆಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಈ ನಿಟ್ಟಿನಲ್ಲಿ ಅಕಾಡೆಮಿಯು ಭೂ ಪರಿಸರ ವ್ಯವಸ್ಥೆಯ ಸೇವೆಗಳ ಮೌಲ್ಯಮಾಪನದ ಮೇಲೆ ಕೇಂದ್ರೀಕರಿಸಿ ಈ ಕಾರ್ಯತಂತ್ರ ಪತ್ರವನ್ನು ಹೊರತಂದಿದೆ. ಇದನ್ನು ಪ್ರೊ. ಟಿ. ವಿ. ರಾಮಚಂದ್ರ, ಸಂಯೋಜಕರು, ಎನರ್ಜಿ ಅಂಡ್ ವೆಟ್ ಲ್ಯಾಂಡ್ ಗ್ರೂಪ್, ಸೆಂಟರ್ ಫಾರ್ ಇಕಾಲಾಜಿಕಲ್ ಸೈನ್ಸಸ್ (ಸಿಇಎಸ್), ಭಾರತೀಯ ವಿಜ್ಞಾನ ಸಂಸ್ಥೆ ಇವರ ನೇತೃತ್ವದ ತಜ್ಞ ಸಮಿತಿಯು ತಯಾರಿಸಿದ್ದು, ಈ ರೀತಿಯ ಪ್ರಯತ್ನವು ಭಾರತದಲ್ಲಿ ಸಂರಕ್ಷಣೆ, ಯೋಜನೆ ಮತ್ತು ಪರಿಸರ ವ್ಯವಸ್ಥೆ ಆಧಾರಿತ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುವುದು ನಿಸ್ಸಂದೇಹ.

## 5.4 ಅಪ್ರೋಚ್ ಪತ್ರ- 2: ಪ್ರಮೋಟಿಂಗ್ ಮಿನರಲ್ ಎಕ್ಸ್ ಪ್ಲೋರೇಶನ್, ಮೈನಿಂಗ್ ಅಂಡ್ ಪ್ರೊಸೆಸ್ಸಿಂಗ್ ಇನ್ ಕರ್ನಾಟಕ- ವೇ ಪಾರ್ವಡ್

ಬ್ರಿಟೀಷ್ ಆಳ್ವಿಕೆಯ ಪೂರ್ವದಿಂದಲೂ ಸಂಪನ್ಮೂಲ ಸಾಮರ್ಥ್ಯದಲ್ಲಿ ಸಮೃದ್ಧವಾಗಿ ಹಲವಾರು ಲೋಹಗಳು ಮತ್ತು ಖನಿಜಗಳನ್ನು ಉತ್ಪಾದಿಸುತ್ತಿರುವ ಕರ್ನಾಟಕ ರಾಜ್ಯವು ದೇಶದ ಅತಿದೊಡ್ಡ ಕೈಗಾರಿಕಾ ಕೇಂದ್ರಗಳಲ್ಲಿ ಒಂದಾಗಿದೆ. ಈಗಿರುವ ಅಂತರಗಳು, ಸವಾಲುಗಳು ಮತ್ತು ಅವಕಾಶಗಳನ್ನು ಗಮನದಲ್ಲಿಟ್ಟುಕೊಂಡು, ಕರ್ನಾಟಕದಲ್ಲಿ ಖನಿಜ ಅನ್ವೇಷಣೆ, ಗಣಿಗಾರಿಕೆ ಮತ್ತು ಖನಿಜ ಸಂಸ್ಕರಣೆಯನ್ನು ಉತ್ತೇಜನಕ್ಕೆ ಅನುವು ಮಾಡಿಕೊಡಲು ಈ ಅಪ್ರೋಚ್ ಪತ್ರವನ್ನು ಹೊರತಂದಿದೆ. ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ನಿರ್ದೇಶಕರ ಮಂಡಳಿಯ ನಿವೃತ್ತ ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ಸದಸ್ಯರಾದ ಡಾ. ಪ್ರಭಾಕರ ಸಂಗೂರಮಠ ಇವರ ನೇತೃತ್ವದ ತಜ್ಞರ ತಂಡವು ಈ ಪತ್ರವನ್ನು ಸಿದ್ಧಪಡಿಸಿದೆ.





## 5.5 ವಾರ್ಷಿಕ ಪುಸ್ತಕ 2023

ಅಕಾಡೆಮಿಯು ಪ್ರತಿ ವರ್ಷ ಫೆಲೋಶಿಪ್.ಗಾಗಿ (FKSTA) ನಾಮನಿರ್ದೇಶನಗಳನ್ನು ಆಹ್ವಾನಿಸುತ್ತದೆ. ಅಕಾಡೆಮಿಯ ಪ್ರಶಸ್ತಿ ಮತ್ತು ಫೆಲೋಶಿಪ್ ಆಯ್ಕೆ ಸಮಿತಿಯು 2022ನೇ ಸಾಲಿಗೆ ಸ್ವೀಕರಿಸಲಾದ ನಾಮನಿರ್ದೇಶನಗಳನ್ನು ಪರಿಶೀಲಿಸಿ ಮಾಡಿದ ಶಿಫಾರಸ್ಸುಗಳನ್ನು ಅಕಾಡೆಮಿಯ ಕಾರ್ಯಕಾರಿ ಸಮಿತಿಯು ಅನುಮೋದಿಸಿದೆ. 2022ನೇ ಸಾಲಿಗೆ 12 ವಿಭಾಗಗಳಡಿಯಲ್ಲಿ 51 ಫೆಲೋಗಳನ್ನು ಆಯ್ಕೆ ಮಾಡಲಾಗಿದೆ. 2022-23ನೇ ಸಾಲಿನ ಮೂರನೇ ತ್ರೈಮಾಸಿಕದಲ್ಲಿ ಫೆಲೋಗಳು, ಸಹವರ್ತಿಗಳು, ಸಾಂಸ್ಥಿಕ ಸದಸ್ಯರು ಮತ್ತು ಅಕಾಡೆಮಿಯೊಂದಿಗೆ ಒಡಂಬಡಿಕೆಯನ್ನು ಹೊಂದಿರುವ ಸಂಸ್ಥೆಗಳ ವಿವರಗಳನ್ನು ಒಳಗೊಂಡ ವಾರ್ಷಿಕ ಪುಸ್ತಕವನ್ನು ಹೊರತರಲಾಯಿತು. ಈ ಪುಸ್ತಕವು 177 ಅಕಾಡೆಮಿ ಫೆಲೋಗಳು, 08 ಸಾಂಸ್ಥಿಕ ಸದಸ್ಯರು, 02 ಸಾಂಸ್ಥಿಕ ಸಹವರ್ತಿಗಳು, 94 ಸಹವರ್ತಿಗಳು ಮತ್ತು ಅಕಾಡೆಮಿಯೊಂದಿಗೆ ಒಡಂಬಡಿಕೆಯನ್ನು ಹೊಂದಿರುವ 54 ಸಂಸ್ಥೆಗಳ ವಿವರಗಳನ್ನು ಒಳಗೊಂಡಿದೆ (2022ರ ನವೆಂಬರ್ ವರಗಿನ ಮಾಹಿತಿ)

## 5.6 ತ್ರೈಮಾಸಿಕ ಇ- ಸುದ್ದಿ ಪತ್ರ – ವಿಜ್ಞಾನ ವಾಹಿನಿ

ಅಕಾಡೆಮಿಯ ವತಿಯಿಂದ 'ವಿಜ್ಞಾನ ವಾಹಿನಿ' ಇ- ಸುದ್ದಿ ಪತ್ರಿಕೆಯನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಹೊರತರಲಾಗುತ್ತಿದೆ. ಇದರಲ್ಲಿ ಆಹ್ವಾನಿತ ಲೇಖನಗಳು, ಅಕಾಡೆಮಿಯ ಕಾರ್ಯಕ್ರಗಳು ಹಾಗೂ ಪ್ರಚಲಿತ ವಿಜ್ಞಾನ ಸುದ್ದಿಗಳನ್ನು ನೀಡಲಾಗುತ್ತಿದೆ. 2022-23ನೇ ಸಾಲಿನ ಜನವರಿ 2023ರವರೆಗೆ ಒಟ್ಟು 03 ಸಂಚಿಕೆಗಳನ್ನು ಹೊರತರಲಾಗಿದೆ.




## 6. ಡಿಜಿಟಲ್ ಸಂಪನ್ಮೂಲಗಳ ತಯಾರಿಕೆ

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (KSEEB) ಪಠ್ಯಕ್ರಮದ ಅನುಸಾರ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಮತ್ತು ಜೀವಶಾಸ್ತ್ರದಲ್ಲಿ ಡಿಜಿಟಲ್ ಕಲಿಕಾ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಹಾಗೂ ರಾಜ್ಯದಾದ್ಯಂತ ಆಯ್ದ ಸರ್ಕಾರಿ ಪ್ರೌಢಶಾಲೆಗಳಿಗೆ DVD ಮೂಲಕ ಕಳುಹಿಸಿಕೊಡಲಾಗುತ್ತಿದೆ. ಇಲ್ಲಿಯವರೆಗೆ ಒಟ್ಟು 70 ಉಪನ್ಯಾಸ/ಪ್ರಯೋಗಗಳನ್ನು ಹೊಂದಿರುವ DVDಗಳನ್ನು 400 ಪ್ರೌಢಶಾಲೆಗಳಿಗೆ ಕಳುಹಿಸಿಕೊಡಲಾಗಿದೆ. ಈ ಕಾರ್ಯಕ್ರಮವನ್ನು ಕೆಸ್ಟೆಪ್ಸ್ ಸಹಯೋಗದಲ್ಲಿ ಅನುಷ್ಠಾಗೊಳಿಸಲಾಗುತ್ತಿದೆ.

## 7. ಪದವಿ ಪೂರ್ವ ವಿದ್ಯಾರ್ಥಿಗಳಿಗೆ ವಿಜ್ಞಾನ ಪ್ರತಿಭಾ ಅನ್ವೇಷಣೆ ಕಾರ್ಯಕ್ರಮ

ಅಕಾಡೆಮಿಯು ಕೆಸ್ಟೆಪ್ಸ್ ಸಂಸ್ಥೆಯೊಂದಿಗೆ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ವಿಜ್ಞಾನ ಪ್ರತಿಭಾ ಅನ್ವೇಷಣೆ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ಈ ಕಾರ್ಯಕ್ರಮದಲ್ಲಿ ಪ್ರತಿ ಶೈಕ್ಷಣಿಕ ಜಿಲ್ಲೆಯಿಂದ ಅಂಕಗಳ ಆಧಾರದ ಮೇಲೆ ತಲಾ 10 ವಿದ್ಯಾರ್ಥಿಗಳಂತೆ ರಾಜ್ಯದಿಂದ ಒಟ್ಟು 320 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಹೀಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ 2022-2023ನೇ ಸಾಲಿನಲ್ಲಿ ಭೌತ ವಿಜ್ಞಾನ, ರಸಾಯನ ವಿಜ್ಞಾನ, ಜೀವ ವಿಜ್ಞಾನ, ಇಂಜಿನಿಯರಿಂಗ್ ಮತ್ತು ಕೃಷಿ ವಿಜ್ಞಾನ ವಿಷಯಗಳಲ್ಲಿ 60 ಆನ್ ಲೈನ್ ಉಪನ್ಯಾಸಗಳನ್ನು ಹೆಸರಾಂತ ಸಂಪನ್ಮೂಲ ತಜ್ಞರುಗಳಿಂದ ಏರ್ಪಡಿಸಲಾಯಿತು. ಒಟ್ಟು 3600 ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಪ್ರಯೋಜನ ಪಡೆದಿದ್ದಾರೆ.

## 8. ಶಿಕ್ಷಣ ಕ್ಷೇತ್ರದಲ್ಲಿ ಬೌಧಿಕ ಆಸ್ತಿ: ಪೇಟೆಂಟ್ಸ್

ಅಕಾಡೆಮಿ ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ (ಕೆ.ಎಸ್.ಸಿ.ಎಸ್.ಟಿ) ಜಂಟಿಯಾಗಿ 2023ರ ಜನವರಿ 30 ರಂದು ಪೇಟೆಂಟ್ ಕುರಿತು ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಯಿತು. ಕಾರ್ಯಾಗಾರದಲ್ಲಿ ರಾಜ್ಯದ ವಿವಿಧ ಸ್ಥಳಗಳಿಂದ ಇಂಜಿನಿಯರಿಂಗ್ ಮತ್ತು ವಿಜ್ಞಾನ ಅಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಸೇರಿ ಒಟ್ಟು 42 ಶಿಭಿರಾರ್ಥಿಗಳು ಭಾಗವಹಿಸಿದ್ದರು.

## 9. ಅಕಾಡೆಮಿ ಪ್ರಶಸ್ತಿಗಳು

2022ನೇ ಸಾಲಿನ ಪ್ರೊ. ಸಿ. ಎನ್. ಆರ್. ರಾವ್ ಜೀವಮಾನ ಸಾಧನೆ ಪ್ರಶಸ್ತಿ ಮತ್ತು ವಿಜ್ಞಾನ ಸಂವಹನ ಜೀವಮಾನ ಸಾಧನೆ ಪ್ರಶಸ್ತಿಗಳನ್ನು 2022ರ ಆಗಸ್ಟ್ 2 ರಂದು ನೀಡಲಾಯಿತು. ಈ ಪ್ರಶಸ್ತಿಗಳು ಚಿನ್ನದ ಪದಕ, ನಗದು ಪುರಸ್ಕಾರ ಮತ್ತು ಅಕಾಡೆಮಿಯ ಗೌರವ ಫೆಲೋಶಿಪ್ ಅನ್ನು ಹೊಂದಿರುತ್ತವೆ. ಕರ್ನಾಟಕ ಸರ್ಕಾರದ ಸನ್ಮಾನ್ಯ ಉನ್ನತ ಶಿಕ್ಷಣ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಸಿ. ಎನ್. ಅಶ್ವಥ್ ನಾರಾಯಣ್ ರವರು ಆಯ್ಕೆಯಾದ ವಿಜ್ಞಾನಿಗಳಿಗೆ ಪ್ರಶಸ್ತಿ ಮತ್ತು ಫೆಲೋಶಿಪ್ ಪ್ರದಾನ ಮಾಡಿದರು. ಗೌರವಾನ್ವಿತ ಪ್ರಧಾನ ಮಂತ್ರಿಗಳ ಪ್ರಧಾನ ವೈಜ್ಞಾನಿಕ ಸಲಹೆಗಾರರಾದ ಪ್ರೊ. ಎ. ಕೆ. ಸೂದ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಪದ್ಮಶ್ರೀ ಪುರಸ್ಕೃತರು ಹಾಗೂ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಸ್. ಅಯ್ಯಪ್ಪನ್ ರವರು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ತಾಂತ್ರಿಕ ನಿರ್ದೇಶಕರಾದ ಶ್ರೀ ಎ. ಬಿ. ಬಸವರಾಜುರವರು ಹಾಗೂ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಎ. ಎಂ. ರಮೇಶ್ ರವರು ಸಮಾರಂಭದಲ್ಲಿ ಭಾಗವಹಿಸಿದ್ದರು.






## 9.1 ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ವೈದ್ಯವಿಜ್ಞಾನ (ಸ್ಟೀಮ್) ದಲ್ಲಿ ಜೀವಮಾನ ಸಾಧನೆಗಾಗಿ ಪ್ರೊ. ಸಿ. ಎನ್. ಆರ್. ರಾವ್ - ಕೆಎಸ್‌ಟಿಎ ಪ್ರಶಸ್ತಿ

2022ನೇ ಸಾಲಿಗೆ ಈ ಕೆಳಕಂಡ ಹಿರಿಯ ವಿಜ್ಞಾನಿಗಳಿಗೆ ಜೀವಮಾನ ಸಾಧನೆ ಪ್ರಶಸ್ತಿಗೆ ನೀಡಿ ಸನ್ಮಾನಿಸಲಾಯಿತು.

| ವರ್ಷ | ಪುರಸ್ಕೃತರು |
|---|---|
| 2022 | **ಡಾ. ಸಿ. ಎ. ವಿರಕ್ತಮಠ್,** ನಿವೃತ್ತ ಎಮರಿಟಸ್ ಪ್ರೊಫೆಸರ್, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು<br><br>**ಡಾ. ಟಿ. ಶಿವಾನಂದಪ್ಪ,** ಸಿಎಸ್‌ಐಆರ್ ಎಮರಿಟಸ್ ವಿಜ್ಞಾನಿ, ಮೈಸೂರು ವಿಶ್ವವಿದ್ಯಾನಿಲಯ |



**ಡಾ. ಸಿ. ಎ. ವಿರಕ್ತಮಠ್**
**ನಿವೃತ್ತ ಎಮರಿಟಸ್ ಪ್ರೊಫೆಸರ್, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**



**ಡಾ. ಟಿ. ಶಿವಾನಂದಪ್ಪ**
**ಸಿಎಸ್‌ಐಆರ್ ಎಮರಿಟಸ್ ವಿಜ್ಞಾನಿ, ಮೈಸೂರು ವಿಶ್ವವಿದ್ಯಾನಿಲಯ**

## 9.2 ಕನ್ನಡದಲ್ಲಿ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ವೈದ್ಯ ವಿಜ್ಞಾನ (ಸ್ಟೀಮ್ ) ಸಂವಹನಕ್ಕಾಗಿ ಜೀವಮಾನ ಸಾಧನೆ ಪ್ರಶಸ್ತಿ

2022ನೇ ಸಾಲಿಗೆ ಈ ಕೆಳಕಂಡ ಹಿರಿಯ ವಿಜ್ಞಾನ ಸಂವಹನಕಾರರಿಗೆ ಜೀವಮಾನ ಸಾಧನೆ ಪ್ರಶಸ್ತಿಗೆ ನೀಡಿ ಸನ್ಮಾನಿಸಲಾಯಿತು.

| ವರ್ಷ | ಪುರಸ್ಕೃತರು |
|---|---|
| 2022 | **ಡಾ. ನಾ ಸೋಮೇಶ್ವರ,** ವೈದ್ಯರು/ಖ್ಯಾತ ಕ್ವಿಜ್ ಮಾಸ್ಟರ್ ಬೆಂಗಳೂರು<br><br>**ಡಾ. ಕೆ. ವಿ. ರಾವ್,** ನಿರ್ದೇಶಕರು, ಪಿಲಿಕುಲ ಪ್ರಾದೇಶಿಕ ವಿಜ್ಞಾನ ಕೇಂದ್ರ, ಮಂಗಳೂರು |



**ಡಾ. ನಾ ಸೋಮೇಶ್ವರ**
**ವೈದ್ಯರು/ಖ್ಯಾತ ಕ್ವಿಜ್ ಮಾಸ್ಟರ್ ಬೆಂಗಳೂರು**



**ಡಾ. ಕೆ. ವಿ. ರಾವ್**
**ನಿರ್ದೇಶಕರು, ಪಿಲಿಕುಲ ಪ್ರಾದೇಶಿಕ ವಿಜ್ಞಾನ ಕೇಂದ್ರ, ಮಂಗಳೂರು**

## 9.3 ವಿಜ್ಞಾನ, ತಂತ್ರಜ್ಞಾನ, ಕೃಷಿ ಮತ್ತು ವೈದ್ಯಕೀಯ ವಿಭಾಗಗಳಲ್ಲಿ ಅತ್ಯುತ್ತಮ ಕನ್ನಡ ಪುಸ್ತಕಗಳಿಗೆ ಪ್ರಶಸ್ತಿ

ವಿಜ್ಞಾನ, ತಂತ್ರಜ್ಞಾನ, ಕೃಷಿ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಕನ್ನಡ ಪುಸ್ತಕಗಳ ಬರವಣಿಗೆ ಮತ್ತು ಪ್ರಕಟಣೆಯನ್ನು ಉತ್ತೇಜಿಸುವ ಸಲುವಾಗಿ ಅತ್ಯುತ್ತಮ ಪುಸ್ತಕ ಪ್ರಶಸ್ತಿಗಳ ಯೋಜನೆಯನ್ನು ಸ್ಥಾಪಿಸಿದೆ. ಈ ಪ್ರಶಸ್ತಿಯನ್ನು 2009 ರಿಂದ ಪ್ರತಿ ಎರಡು ವರ್ಷಗಳಿಗೊಮ್ಮೆ ನೀಡಲಾಗುತ್ತಿದೆ. ಆಯ್ಕೆಯಾದ ಪುಸ್ತಕದ ಲೇಖಕರಿಗೆ ರೂ. 25,000/-ಗಳ ನಗದು ಪುರಸ್ಕಾರ ಮತ್ತು ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಲಾಗುವುದು. 2022ರ ಪ್ರಶಸ್ತಿಗೆ ಒಟ್ಟು 71 ಪುಸ್ತಕಗಳು ಸಲ್ಲಿಕೆಯಾಗಿದ್ದು, ಪರಿಣಿತರಿಂದ ಮೌಲ್ಯಮಾಪನ ಮಾಡಿಸಲಾಗುತ್ತಿದೆ. ಪ್ರಶಸ್ತಿ ವಿತರಣೆಯನ್ನು 2023ರ ಮಾರ್ಚ್ ಮಾಹೆಯಲ್ಲಿ ನಡೆಸಲಾಗುವುದು.

## 9.4 ಆವಿಷ್ಕಾರ/ನಾವಿನ್ಯತೆ ಪ್ರಶಸ್ತಿ (ಪದವಿ & ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು) ಮತ್ತು ಜನಸಾಮಾನ್ಯರ ಆವಿಷ್ಕಾರ/ನಾವಿನ್ಯತೆ ಪ್ರಶಸ್ತಿ

ವಿಜ್ಞಾನ ಮತ್ತು ತಂತ್ರಜ್ಞಾನ ಅಥವಾ ಆರ್ಥಿಕತೆಯ ಯಾವುದೇ ವಿಭಾಗದಿಂದ ಹೊರಹೊಮ್ಮುವ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಜನರ ಜೀವನವನ್ನು ಪರಿವರ್ತಿಸಲು ಸಹಾಯ ಮಾಡಿರುವ ಅಥವಾ ಉದ್ಯಮಗಳು ಮತ್ತು ಉದ್ಯೋಗಾವಕಾಶಗಳನ್ನು ಸಶಕ್ತಗೊಳಿಸಿದ ಅನುಕರಣೀಯ ಆವಿಷ್ಕಾರಗಳು/ ಪರಿಹಾರಗಳನ್ನು ಪ್ರತಿವರ್ಷವೂ ಗುರುತಿಸಲಾಗುತ್ತದೆ. ಪ್ರಶಸ್ತಿಯ ಮೂರು ವಿಭಾಗಗಳು ಹೀಗಿವೆ: ಪದವಿ ಮಟ್ಟದಲ್ಲಿ ಅತ್ಯುತ್ತಮ ನಾವೀನ್ಯತೆಗಾಗಿ ಡಾ ಎಸ್. ಕೆ. ಶಿವಕುಮಾರ್ ಪ್ರಶಸ್ತಿ; ಸ್ನಾತಕೋತ್ತರ ಮಟ್ಟದಲ್ಲಿ ಅತ್ಯುತ್ತಮ ನಾವೀನ್ಯತೆಗಾಗಿ ಪ್ರೊ. ಯು. ಆರ್. ರಾವ್ ಪ್ರಶಸ್ತಿ; ಮತ್ತು ಜನಸಾಮಾನ್ಯರ ಅತ್ಯುತ್ತಮ ನಾವೀನ್ಯತೆಗಾಗಿ ಕೆಎಸ್‌ಟಿಎ ಪ್ರಶಸ್ತಿ. ಪ್ರತಿಯೊಂದು ಪ್ರಶಸ್ತಿಯೂ ಸನ್ಮಾನಪತ್ರ, ತಲಾ ರೂ 10,000 ನಗದು ಬಹುಮಾನ ಮತ್ತು ಪ್ರಮಾಣಪತ್ರವನ್ನು ಒಳಗೊಂಡಿವೆ. 2022ನೇ ಸಾಲಿನ ಪ್ರಶಸ್ತಿಗೆ ಒಟ್ಟು 104 ಅರ್ಜಿಗಳು ಸಲ್ಲಿಕೆಯಾಗಿದ್ದು, ಪರಿಣಿತ ಸಮಿತಿಯ ಮುಂದೆ ಮೌಖಿಕ ಪ್ರಸ್ತುತಿಯನ್ನು 2023ರ ಫೆಬ್ರುವರಿ 09ರಂದು ನಡೆಸಲಾಗುತ್ತಿದೆ. ಪ್ರಶಸ್ತಿ ವಿತರಣೆಯನ್ನು 2023ರ ಮಾರ್ಚ್ ಮಾಹೆಯಲ್ಲಿ ನಡೆಸಲಾಗುವುದು.

## 9.5 ಅಕಾಡೆಮಿ ಫೆಲೋಶಿಪ್‌ಗಳು, ಸದಸ್ಯತ್ವಗಳು ಮತ್ತು ಸಾಂಸ್ಥಿಕ ಸಹಯೋಗ

ಅಕಾಡೆಮಿಯ ವತಿಯಿಂದ ವಿಜ್ಞಾನ ಮತ್ತು ತಂತ್ರಜ್ಞಾನ, ವಿಜ್ಞಾನ ಸಂವಹನ/ ಜನಪ್ರಿಯಗೊಳಿಸುವಿಕೆ ಮತ್ತು ಪ್ರಸರಣ ಕ್ಷೇತ್ರಕ್ಕೆ ಶಿಕ್ಷಣ ತಜ್ಞರು, ಸಂಶೋಧಕರು, ಎಂಜಿನಿಯರ್‌ಗಳು, ಸಂಸ್ಥೆಗಳು ಮತ್ತು ಉದ್ಯಮದಲ್ಲಿರುವ ತಂತ್ರಜ್ಞರು ಹಾಗೂ ಯುವ ವೃತ್ತಿಪರರ ಕೊಡುಗೆಗಳನ್ನು ಗುರುತಿಸಲು ಫೆಲೋಶಿಪ್, ಸಾಂಸ್ಥಿಕ ಸದಸ್ಯತ್ವ ಮತ್ತು ಸಹವರ್ತಿತ್ವಗಳನ್ನು ನೀಡಲಾಗುತ್ತಿದೆ.

### 9.5.1 ಫೆಲೋಶಿಪ್

ವೈಯಕ್ತಿಕ ಅರ್ಹತೆ ಮತ್ತು ನೀಡಿದ ಕೊಡುಗೆ ಹಾಗೂ ಅಕಾಡೆಮಿ-ಪ್ರಶಸ್ತಿಗಳು ಮತ್ತು ಫೆಲೋಶಿಪ್ ಆಯ್ಕೆ ಸಮಿತಿಯ ಶಿಫಾರಸ್ಸಿನಂತೆ 2022-23ನೇ ಸಾಲಿನಲ್ಲಿ 50 ಮಹನೀಯರಿಗೆ ಅಕಾಡೆಮಿಯ ಫೆಲೋಶಿಪ್ ನೀಡಿ ಗೌರವಿಸಲಾಯಿತು. ಈವರೆವಿಗೂ ಒಟ್ಟು 177 ಮಹನೀಯರು ಅಕಾಡೆಮಿಯ ಫೆಲೋಶಿಪ್ ಹೊಂದಿದ್ದಾರೆ.

| ಕ್ರ. ಸಂ | ಹೆಸರು | ಕ್ರ. ಸಂ | ಹೆಸರು | ಕ್ರ. ಸಂ | ಹೆಸರು |
|---|---|---|---|---|---|
| 1 | ಪ್ರೊ. ಎ. ಕೆ. ಸೂದ್ | 17 | ಡಾ. ಲಲಿತಾ ಆರ್. ಗೌಡ | 34 | ಪ್ರೊ. ಶಂಕರ್ ಕೆ. ಎಂ. |

| | | | | | |
|---|---|---|---|---|---|
| 2 | ಡಾ. ಅಬ್ರಹಾಂ ವರ್ಗೀಸ್ | 18 | ಪ್ರೊ. ಮನೋಹರ್ ವಿ. ಕುಲಕರ್ಣಿ | 35 | ಶ್ರೀ ಸಿದ್ದಿಕಿ ಎಂ. ಝುಡ್. |
| 3 | ಪ್ರೊ. ಆದಿಮೂರ್ತಿ ಎ. | 19 | ಪ್ರೊ. ಮೂರ್ತಿ ಕೆ. ಎನ್. ಬಿ. | 36 | ಡಾ. ಸೋಮೇಶ್ವರ ಎನ್. |
| 4 | ಪ್ರೊ. ಅಮೃತೇಶ್ ಕೆ.ಎನ್. | 20 | ಡಾ. ಎನ್. ಕೆ. ಎಸ್. ಗೌಡ | 37 | ಡಾ. ಶ್ರೀದೇವಿ ಎ. ಸಿಂಗ್ |
| 5 | ಡಾ. ಅರುಣ್ ಸಿ. ಇನಾಮದಾರ | 21 | ಪ್ರೊ. ನಡುವಿನಮನೆ ಎನ್. ಬಿ. | 38 | ಡಾ. ಶ್ರೀಕಂಠೇಶ್ವರ ಸ್ವಾಮಿ ಎಸ್. ಜಿ. |
| 6 | ಪ್ರೊ. ಭಾಗ್ಯರಾಜ್ ಡಿ.ಜಿ. | 22 | ಪ್ರೊ. ನವಕಾಂತ ಭಟ್ | 39 | ಡಾ. ಶ್ರೀ ಕೃಷ್ಣ ಇಸ್ಲೂರು |
| 7 | ಪ್ರೊ. ಬಾಲಸುಬ್ರಮಣಿಯನ್ ಎ. | 23 | ಡಾ. ನವಲಗುಂದ ಆರ್. ಆರ್. | 40 | ಡಾ. ಸುಬರ್ನಾ ರಾಯ್ |
| 8 | ಡಾ. ಭಾಸ್ಕರ್ ಎನ್. | 24 | ಡಾ. ಪ್ರಸಾದ್ ಸಿ. ಎಸ್. | 41 | ಡಾ. ಸುದರ್ಶನ್ ಎಚ್. |
| 9 | ಡಾ. ಸಿ. ಎಲ್. ಲಕ್ಷ್ಮೀಪತಿ ಗೌಡ | 25 | ಪ್ರೊ.ರಬಿನಾಳ್ ಎಂ. ಕೆ. | 42 | ಪ್ರೊ. ತಿಮ್ಮೇಗೌಡ ಬಿ. |
| 10 | ಪ್ರೊ. ದಂಡಿನ್ ಎಸ್. ಬಿ. | 26 | ಡಾ. ರಜನಿ ಎಂ. ಬಿ. | 43 | ಪ್ರೊ. ಉಮಾಶಂಕರ್ ಆರ್. |
| 11 | ಪ್ರೊ. ಎಚ್. ಆರ್. ರಾಮಕೃಷ್ಣರಾವ್ | 27 | ಡಾ. ರಾಮಚಂದ್ರ ಟಿ. ವಿ. | 44 | ಪ್ರೊ. ವಿ.ರವಿಶಂಕರ್ ರೈ |
| 12 | ಪ್ರೊ. ಹೊನ್ನಪ್ಪಗೋಳ ಎಸ್. ಎಸ್. | 28 | ಪ್ರೊ.ರಮೇಶ್ ಎಸ್. ಆರ್. | 45 | ಪ್ರೊ. ವೀರಪ್ಪಗೌಡ ಜಿ. ಡಿ. |
| 13 | ಪ್ರೊ. ಇಂದಿರೇಶ್ ಕೆ. ಎಂ. | 29 | ಡಾ. ರಾಮಚಂದ್ರ ಟಿ. ವಿ. | 46 | ಪ್ರೊ. ವೆಂಕಟರಾಮನ್ ಎ. |
| 14 | ಪ್ರೊ. ಜಗದೀಶ್ ಜಿ. | 30 | ಪ್ರೊ.ರಮೇಶ್ ಎಸ್. ಆರ್. | 47 | ಪ್ರೊ. ವಿಜಯಲಕ್ಷ್ಮಿ ದೇಗ |
| 15 | ಪ್ರೊ. ಜಗದೀಶ್ ಆರ್. ತೋನಣ್ಣನವರ್ | 31 | ಪ್ರೊ. ರಂಗಸ್ವಾಮಿ ಬಿ. ಇ. | 48 | ಪ್ರೊ. ವಿರಕ್ತಮಠ ಸಿ. ಎ. |
| 16 | ಡಾ. ಜಾಲಿ ಎಂ. ವಿ. | 32 | ಪ್ರೊ. ರೇವಣಸಿದ್ದಪ್ಪ ಎಚ್. | 49 | ಡಾ. ವಿಶಾಲ್ ರಾವ್ |
| 17 | ಡಾ. ಕೆ. ವಿ. ರಾವ್ | 33 | ಪ್ರೊ. ರೂಪಾ ಕೆ. ಎಂ. | 50 | ಡಾ. ವಿಶ್ವನಾಥ ಎಸ್. |
| 16 | ಡ್ಡಾ. ಕುರ್ಪಾದ್ ಎ. ವಿ. | 34. | ಡಾ. ಸೋಮೇಶ್ವರ ಎನ್. | | |

### 9.5.2 ಸಾಂಸ್ಥಿಕ ಸದಸ್ಯರು

2022-23ನೇ ಸಾಲಿನಲ್ಲಿ ಈ ಕೆಳಕಂಡ ಸಂಸ್ಥೆಯು ಅಕಾಡೆಮಿಯ ಸಾಂಸ್ಥಿಕ ಸದಸ್ಯತ್ವವನ್ನು ಪಡೆದಿದ್ದು, ಇದುವರೆವಿಗೂ ಒಟ್ಟು 09 ಸಂಸ್ಥೆಗಳು ಅಕಾಡೆಮಿಯ ಸಾಂಸ್ಥಿಕ ಸದಸ್ಯರಾಗಿದ್ದಾರೆ.

| **ಹೆಸರು** |
|---|
| ಶೇಷಾದ್ರಿಪುರಂ ಪದವಿ ಕಾಲೇಜು, ಯಲಹಂಕ, ಬೆಂಗಳೂರು |

### 9.5.3 ಸಹವರ್ತಿಗಳು

ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ವೈದ್ಯಕೀಯ ಕ್ಷೇತ್ರದ ಶಿಕ್ಷಣ ತಜ್ಞರು/ಸಂಶೋಧಕರು/ಶಿಕ್ಷಕರು/ಉದ್ಯೋಗನಿರತರು/ಸಂಶೋಧನಮತ್ತು ಕಾರ್ಪೊರೇಟ್ ಸೇರಿದಂತೆ ಸಂಬಂಧಿತ ಸಂಸ್ಥೆಗಳ ಉದ್ಯೋಗಿಗಳು ಮತ್ತು ನಿವೃತ್ತರನ್ನು ಸಹವರ್ತಿಗಳಾಗಿ ನೋಂದಾಯಿಸಿಕೊಳ್ಳಲಾಗುತ್ತಿದೆ. ಸಹವರ್ತಿತ್ವವನ್ನು ಪಡೆಯಲು ಬಯಸುವವರು ರೂ. 1,000/- (ಒಂದು ಸಾವಿರ ರೂಪಾಯಿಗಳು ಮಾತ್ರ) ಶುಲ್ಕ ಮತ್ತು ಅಕಾಡೆಮಿ ವೆಬ್.ಸೈಟ್.ನಲ್ಲಿರುವ ಅರ್ಜಿಯನ್ನು ಭರ್ತಿ ಮಾಡಿ ವರ್ಷದ ಯಾವುದೇ ಸಮಯದಲ್ಲಿ ಸಲ್ಲಿಸಬಹುದಾಗಿದೆ. 2022-23ನೇ ಸಾಲಿನಲ್ಲಿ ಒಟ್ಟು 102 ಸಹವರ್ತಿಗಳನ್ನು ನೋಂದಾಯಿಸಿಕೊಳ್ಳಲಾಗಿದೆ.

## 9.6 ಒಡಂಬಡಿಕೆ ಮತ್ತು ಸಹಯೋಗಗಳು

ಅಕಾಡೆಮಿಯು ವಿವಿಧ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳೊಂದಿಗೆ ಈ ಕೆಳಕಂಡ ಉದ್ದೇಶಗಳೊಂದಿಗೆ ವಿವಿಧ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳನ್ನು ಪರಸ್ಪರ ಸಹಯೋಗದೊಂದಿಗೆ ಹಮ್ಮಿಕೊಳ್ಳಲು ಒಡಂಬಡಿಕೆ ಮಾಡಿಕೊಂಡಿದೆ.

- ವಿಜ್ಞಾನ ಸಂವಹನದ ಮೂಲಕ ನಾಗರಿಕ ಸಮಾಜದ ಎಲ್ಲಾ ಸ್ಥರಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು
- ಗ್ರಾಮೀಣ ಪ್ರದೇಶಗಳಲ್ಲಿ ಅಕಾಡೆಮಿ-ಫಾರ್ಮ್-ಇಂಡಸ್ಟ್ರಿ ಮೂಲಕ ತಂತ್ರಜ್ಞಾನ ಪ್ರಸರಣ
- ಆವಿಷ್ಕಾರ/ನಾವೀನ್ಯತೆ ಮತ್ತು ಉದ್ಯಮಶೀಲತೆಯ ಬೆಳವಣಿಗೆಯ ಮೂಲಕ ಸಮಾಜದ ಏಳಿಗೆ
- ಸಮ್ಮೇಳನಗಳು ಮತ್ತು ಕಾರ್ಯಕ್ರಮಗಳ ಆಯೋಜನೆ
- ವಿಜ್ಞಾನ ಮತ್ತು ತಂತ್ರಜ್ಞಾನದ ಮುಂಚೂಣಿ ವಿಷಯಗಳಲ್ಲಿ ಸಾಮರ್ಥ್ಯ ವರ್ಧನೆ

2022-23ನೇ ಸಾಲಿನಲ್ಲಿ ಈ ಕೆಳಕಂಡ 08 ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈವರೆವಿಗೂ ಒಟ್ಟು 54 ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ:

| ಕ್ರ.ಸಂ. | ಸಂಸ್ಥೆ | ದಿನಾಂಕ |
|---|---|---|
| 1 | ದಯಾನಂದ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು | 07-04-2022 |
| 2 | ಬಿ.ಎಲ್.ಡಿ.ಇ.ಎ.ರವರ ವಿ.ಪಿ.ಡಾ.ಪಿ.ಜಿ.ಹಳಕಟ್ಟಿ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಮಹಾವಿದ್ಯಾಲಯ, ವಿಜಯಪುರ | 09-05-2022 |
| 3 | ಬಿ.ಎಲ್.ಡಿ.ಇ. ಶ್ರೀ ಸಂಗನಬಸವ ಮಹಾಸ್ವಾಮೀಜಿ ಕಾಲೇಜ್ ಆಫ್ ಫಾರ್ಮಸಿ ಅಂಡ್ ರಿಸರ್ಚ್ ಸೆಂಟರ್, ವಿಜಯಪುರ | 11-05-2022 |
| 4 | ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್, ಮಣಿಪಾಲ್ | 18-05-2022 |
| 5 | ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ಬೆಂಗಳೂರು | 27-05-2022 |
| 6 | ವಿಜ್ಞಾನ್ ಪ್ರಸಾರ್, ವಿಜ್ಞಾನ ಮತ್ತು ತಂತ್ರಜ್ಞಾನ ಲಾಖೆ, ಭಾರತ ಸರ್ಕಾರ, ನವದೆಹಲಿ (ಸ್ಕೋಪ್ ಪ್ರಾಜೆಕ್ಟ್) | 04-06-2022 |
| 7 | ಪೂರ್ಣಪ್ರಜ್ಞ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ & ರೀಸರ್ಚ್, ಬೆಂಗಳೂರು | 08.07.2022 |
| 8 | ಡಾನ್ ಬಾಸ್ಕೊ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು | 05.07.2022 |

## 10. ಸುಶಾಸನ ಮಾಸಾಚರಣೆ (ಡಿಸೆಂಬರ್ 2022)

ದಿವಂಗತ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿರವರ ಸ್ಮರಣಾರ್ಥ ಕರ್ನಾಟಕ ಸರ್ಕಾರವು ಘೋಷಿಸಿದಂತೆ 2022ರ ಡಿಸೆಂಬರ್ ಮಾಹೆಯನ್ನು ಸುಶಾಸನ ಮಾಸವಾಗಿ ಆಚರಿಸಲಾಯಿತು. ಇದು ಸರ್ಕಾರದ ಹೊಣೆಗಾರಿಕೆಯ ಬಗ್ಗೆ ಜನಜಾಗೃತಿ ಮೂಡಿಸುವುದು ಇದರ ದ್ದೇಶವಾಗಿತ್ತು. ಖ್ಯಾತ ಆಡಳಿತಗಾರರು ಮತ್ತು ಶಿಕ್ಷಣ ತಜ್ಞರಿಂದ ವಿಶೇಷ

ಉಪನ್ಯಾಸಗಳು ಮತ್ತು ಪದವಿ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸುವ ಮೂಲಕ ಅಕಾಡೆಮಿಯ ವತಿಯಿಂದ ಸುಶಾಸನ ಮಾಸವನ್ನು ಆಚರಿಸಲಾಯಿತು.


**ಸಂಪರ್ಕ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಕರ್ನಾಟಕ ವಿಜ್ಞಾನ ಮತು ತಂತ್ರಜ್ಞಾನ ಅಕಾಡೆಮಿ
ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ,
ತೋಟಗಾರಿಕೆ ವಿಜ್ಞಾನ ಕಾಲೇಜು ಪ್ರವೇಶ ದ್ವಾರದ ಹತ್ತಿರ
ಜಿ.ಕೆ.ವಿ.ಕೆ ಆವರಣ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ,
ವಿದ್ಯಾರಣ್ಯಪುರ ಪೋಸ್ಟ್, ಯಲಹಂಕ, ಬೆಂಗಳೂರು – 560097
ದೂರವಾಣಿ: 080-29721550; 080-29721549
ಇಮೇಲ್ : kstacademy.in

# ಜವಾಹರಲಾಲ್ ನೆಹರು ತಾರಾಲಯ

ಬೆಂಗಳೂರು ಅಸೋಷಿಯೇಶನ್ ಫಾರ್ ಸೈನ್ಸ್ ಎಜುಕೇಷನ್ (ಬೇಸ್)
ಶ್ರೀ ಟಿ. ಚೌಡಯ್ಯ ರಸ್ತೆ, ಹೈಗ್ರೌಂಡ್ಸ್, ಬೆಂಗಳೂರು - 560 001

## ಪರಿಚಯ:

ಜವಾಹರಲಾಲ್ ನೆಹರು ತಾರಾಲಯ (ಜೆಎನ್‌ಪಿ), ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಶನ್ (ಬೇಸ್) ನಿಂದ ನಿರ್ವಹಿಸಲ್ಪಡುತ್ತದೆ, ಇದು ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿದೆ. ಇದು ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಧನಸಹಾಯ ಪಡೆದಿದೆ. BASE ನ ಆಡಳಿತ ಮಂಡಳಿಯು ಪ್ರತಿಷ್ಠಿತ ರಾಷ್ಟ್ರೀಯ ಸಂಸ್ಥೆಗಳ ಏಳು ಗಣ್ಯ ಹಿರಿಯ ವಿಜ್ಞಾನಿಗಳು ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಆಯುಕ್ತರು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮೇಯರ್ ಅನ್ನು ಒಳಗೊಂಡಿದೆ. ಇಸ್ರೋದ ಮಾಜಿ ಅಧ್ಯಕ್ಷ ಡಾ. ಎ. ಎಸ್. ಕಿರಣ್ ಕುಮಾರ್ ಅವರು ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದಾರೆ.

ವಿಜ್ಞಾನದ ಜನಪ್ರಿಯತೆ ಮತ್ತು ಅನೌಪಚಾರಿಕ ವಿಜ್ಞಾನ ಶಿಕ್ಷಣ ಸಂಸ್ಥೆಯ ಪ್ರಾಥಮಿಕ ಉದ್ದೇಶಗಳಾಗಿವೆ. BASE/JNP ಶಾಲಾ ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಮತ್ತು ವಿಜ್ಞಾನದ ಉತ್ಸಾಹಿ ವಿದ್ಯಾರ್ಥಿಗಳಿಗೆ ಶಿಕ್ಷಣ/ಮಾಹಿತಿಯ ಮೂಲವಾಗಿದೆ ಏಕೆಂದರೆ ಎಲ್ಲಾ ವಯಸ್ಸಿನ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ವಿವಿಧ ಚಟುವಟಿಕೆಗಳನ್ನು ಪೂರೈಸುತ್ತಿದೆ. ಸಾವಿರಾರು ವಿದ್ಯಾರ್ಥಿಗಳನ್ನು ಒಳಗೊಂಡಂತೆ 3 ಲಕ್ಷಕ್ಕೂ ಹೆಚ್ಚು ಸಾರ್ವಜನಿಕರು ವಾರ್ಷಿಕವಾಗಿ ತಾರಾಲಯಕ್ಕೆ ಭೇಟಿ ನೀಡುತ್ತಾರೆ. ಜೆಎನ್‌ಪಿಯ ಶೈಕ್ಷಣಿಕ ಚಟುವಟಿಕೆಗಳಲ್ಲಿ ನೂರಾರು ವಿದ್ಯಾರ್ಥಿಗಳು ಭಾಗವಹಿಸುತ್ತಾರೆ.

### 1. <u>ವಿಜ್ಞಾನವನ್ನು ಜನಪ್ರಿಯಗೊಳಿಸುವುದು</u>

- **ಆಕಾಶ ಮಂದಿರದ ಪ್ರದರ್ಶನಗಳು**

  ಆಕಾಶ ಮಂದಿರದ ಹೊಸ ಪ್ರದರ್ಶನಗಳ ತಯಾರಿಕೆ: ಸಾರ್ವಜನಿಕರಿಗಾಗಿ "ಗುರುತ್ವ" ಮತ್ತು "ನಮ್ಮ ಸೂರ್ಯ ಮತ್ತು ಅವನ ಪರಿವಾರ"ಎಂಬ ಎರಡು ಪ್ರದರ್ಶನಗಳನ್ನು ತಯಾರಿಸಲಾಗುತ್ತಿದೆ. "ಗುರುತ್ವ" ಪ್ರದರ್ಶನವನ್ನು ಸದ್ಯದಲ್ಲಿಯೇ ಉದ್ಘಾಟಿಸಲಾಗುವುದು.

  ಆಕಾಶ ಮಂದಿರದ ಎಲ್ಲಾ ಪ್ರದರ್ಶನಗಳ ಮುನ್ನ ಐದು ನಿಮಿಷಗಳ 'ವಿಜ್ಞಾನ ಸಮೀಕ್ಷೆಯನ್ನು ತಯಾರಿಸಿ ಪ್ರದರ್ಶಿಸಲಾಗುವುದು. ಈ ವರ್ಷ "ಜೇಮ್ಸ್ ವೆಬ್ ಸ್ಪೇಸ್ ಟೆಲಿಸ್ಕೋಪ್"ಕುರಿತ ಸಮೀಕ್ಷೆಯನ್ನು ಪ್ರದರ್ಶಿಸಲಾಗುತ್ತಿದೆ.

  ಪ್ರತಿ ವರ್ಷದಂತೆ, ಈ ವರ್ಷವೂ ಬಿಬಿಎಂಪಿ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪ್ರದರ್ಶನಗಳನ್ನು ಆಯೋಜಿಸಲಾಗಿತ್ತು. 28 ಶಾಲೆಗಳಿಂದ 2838 ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆದಿದ್ದಾರೆ. ಅಲ್ಲದೇ, ಸುಮಾರು 4200 ವಿಶೇಷ ಮಕ್ಕಳು, ಆರ್ಥಿಕವಾಗಿ ಹಿಂದುಳಿದವರು, ಅವಕಾಶ ವಂಚಿತ ಮಕ್ಕಳಿಗೆ ಉಚಿತ ತಾರಾಲಯ ಪ್ರದರ್ಶನವನ್ನು ನೀಡಲಾಗಿದೆ.



ಫಲಾನುಭವಿಗಳು: 3.45 ಲಕ್ಷ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಕಾಲಾವಧಿ: ಏಪ್ರಿಲ್ - ಜನವರಿ

- **ದೂರದರ್ಶಕ ತಯಾರಿಕಾ ಕಮ್ಮಟ**

  ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಎರಡು ದಿನಗಳ ದೂರದರ್ಶಕ ತಯಾರಿಕಾ ಕಮ್ಮಟವನ್ನು ಆಯೋಜಿಸಲಾಗಿತ್ತು. ೧೫೦ ಮಿಲಿಮೀಟರಿನ ನ್ಯೂಟಾನಿಯನ್ ದೂರದರ್ಶಕವನ್ನು ತಯಾರಿಸಲಾಯಿತು. ಈ ಕಾರ್ಯಕ್ರಮವು ದೂರದರ್ಶಕದ ಬಳಕೆ ಮತ್ತು ಅವುಗಳ ಕುರಿತ ಮಾಹಿತಿಯನ್ನು ಒಳಗೊಂಡಿತ್ತು.



ಫಲಾನುಭವಿಗಳು: ಸುಮಾರು 10-12 ; ಕಾಲಾವಧಿ: ಎರಡು ದಿನಗಳು

- **ಶೂನ್ಯ ನೆರಳಿನ ದಿನ**

  2022ರ ಏಪ್ರಿಲ್ 24ರಂದು ಶಾಲಾ ವಿದ್ಯಾರ್ಥಿಗಳಿಗಾಗಿ ಶೂನ್ಯ ನೆರಳಿನ ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ಗ್ನೋಮಾನ್ನ ನೆರಳಿನ ಸಹಾಯದಿಂದ ಉತ್ತರ ದಿಕ್ಕನ್ನು ಕಂಡುಹಿಡಿದರು ಮತ್ತು ದೇಶಾದ್ಯಂತದ ವಿವಿಧ ಪ್ರದೇಶಗಳಲ್ಲಿ ಸಂಗ್ರಹಿಸಿದ ಮಾಹಿತಿಯಿಂದ ಭೂಮಿಯ ಸುತ್ತಳತೆಯನ್ನು ಲೆಕ್ಕಾಚಾರ ಮಾಡಿದರು.

  ಜವಾಹರ್‌ಲಾಲ್ ನೆಹರು ತಾರಾಲಯ, ಭಾರತೀಯ ಖಭೌತ ಸಂಸ್ಥೆ, ಬೆಂಗಳೂರು; ತಮಿಳು ನಾಡು ವಿಜ್ಞಾನ ತಂತ್ರಜ್ಞಾನ ಕೇಂದ್ರ, ಚೆನ್ನೈ; ಗೆಲಿಲಿಯೋ ಸೈನ್ಸ್ ಕ್ಲಬ್, ಕೊಯಂಬತ್ತೂರ್; ಜಿಲ್ಲಾ ಪ್ರಾದೇಶಿಕ ವಿಜ್ಞಾನ ಕೇಂದ್ರ, ಧಾರವಾಡ; ಪಿಳೀಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ, ಮಂಗಳೂರು; ಕಾರವಾರ, ರಾಯಚೂರು ಮತ್ತು ಬಳ್ಳಾರಿಯ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರಗಳು; ಆರ್ಯಭಟ ಫೌಂಡೇಶನ್, ಭೂಪಾಲ್; ಬಿ. ಎಮ್. ಬಿರ್ಲಾ ಪ್ಲಾನಿಟೇರಿಯಮ್, ಜೈಪುರ ಮತ್ತು ಜವಾಹರ್ ಪ್ಲಾನಿಟೇರಿಯಮ್, ಅಲಾಹಾಬಾದ್ - ದೇಶದಾದ್ಯಂತ ಈ ಸಂಸ್ಥೆಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವು.

**ಈ ಮೇಲಿನ ಕಮ್ಮಟವಲ್ಲದೇ, ತಾರಾಲಯದಲ್ಲಿ ಕೆಳಕಂಡ ವ್ಯವಸ್ಥೆಗಳನ್ನೂ ಮಾಡಲಾಗಿತ್ತು:**

- 'ಸೂರ್ಯ'ನ ಕುರಿತ ಭಿತ್ತಿ ಚಿತ್ರ ಪ್ರದರ್ಶನ
- ಸೌರಕಲೆಗಳನ್ನು ವೀಕ್ಷಿಸಲು ಸೋಲಾರ್ ಸ್ಕೋಪ್‌ನ ಮುಲಕ ಸೂರ್ಯನ ಪ್ರತಿಬಿಂಬವನ್ನು ಪರದೆಯ ಮೇಲೆ ತೋರಿಸಲಾಯಿತು.
- ಎ ಎಚ್-ಆಲ್ಫಾ ಟೆಲಿಸ್ಕೋಪ್ ನ ಮೂಲಕ ಸೂರ್ಯನ ಮೇಲ್ಮೈ ಲಕ್ಷಣಗಳ ವೀಕ್ಷಣೆ
- ಶೂನ್ಯ ನೆರಳಿನ ಕ್ಷಣವನ್ನು ಪ್ರದರ್ಶಿಸಲು: ಎರಡು ಗ್ನೋಮಾನ್ ಗಳು, ಎರಡು ಸಮಾನಾಂತರ ಫಲಕಗಳು ಮತ್ತು ಸೂರ್ಯ ಬೆಳಕನ್ನು ಬಳಸಿಕೊಂಡು ಶೂನ್ಯ ನೆರಳಿನ ಕ್ಷಣದಲ್ಲಿ ಪಟಾಕಿಗಳನ್ನು ಹೊತ್ತಿಸುವುದು

❖ ಭಾರತೀಯ ಖಭೌ ತಶಾಸ್ತ್ರ ಸಂಸ್ಥೆಯ ವಿಜ್ಞಾನಿಗಳೊಂದಿಗೆ ಸಂವಾದ



ಫಲಾನುಭವಿಗಳು: ಸುಮಾರು 300 ವಿದ್ಯಾರ್ಥಿಗಳು ಹಾಗು ಸಾರ್ವಜನಿಕರು
ಕಾಲಾವಧಿ: ಎರಡು ದಿನಗಳು (ವರ್ಷಕ್ಕೊಮ್ಮೆ)

- **ಕ್ಷುದ್ರಗ್ರಹಗಳ ದಿನ – 30ನೇ ಜೂನ್**
  "ರೋಬೋಟಿಕ್ ಬಾಹ್ಯಾಕಾಶ ನೌಕೆಗಳಿಂದ ಕ್ಷುದ್ರಗ್ರಹಗಳ ಅನ್ವೇಷಣೆ" ಕುರಿತು ಡಾ. ಬಿ. ಆರ್. ಗುರುಪ್ರಸಾದ್ ಅವರಿಂದ ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. "ಕ್ಷುದ್ರಗ್ರಹಗಳು" ಕುರಿತಂತೆ ಕರ್ನಾಟಕದ ವಿಜ್ಞಾನ ಕೇಂದ್ರಗಳ ಸಹಯೋಗದೊಂದಿಗೆ ಡಾ. ಬಿ. ಎಸ್. ಶೈಲಜಾ, ಶ್ರೀಮತಿ. ಬಿ. ಆರ್. ಲಕ್ಷ್ಮಿ ಮತ್ತು ಡಾ. ಎಂ. ವೈ. ಆನಂದ್ ಅವರು ಹೈಬ್ರಿಡ್ ಮಾದರಿಯಲ್ಲಿ ವಿದ್ಯಾರ್ಥಿಗಳಿಗೆ ಕನ್ನಡ ಸಂವಾದವನ್ನು ಆಯೋಜಿಸಲಾಗಿತ್ತು.

  ಫಲಾನುಭವಿಗಳು: ಸುಮಾರು 90 (ಅಮೆಚುರ್ ಅಸ್ಟ್ರಾನಮರ್ಸ್ ಮತ್ತು ಆಸಕ್ತಿಯುಳ್ಳ ಸಾರ್ವಜನಿಕರು) ಕಾಲಾವಧಿ: ಒಂದು ದಿನ (ವರ್ಷಕ್ಕೊಮ್ಮೆ)

- **ವಿಶೇಷ ಮಕ್ಕಳಿಗಾಗಿ ಕಮ್ಮಟ**
  ಡೈನಮ್ ಕ್ರಿಯೇಟಿವೇಟಿ ಅಂಡ್ ವೊಕೇಶನಲ್ ಸ್ಕಿಲ್ ಟ್ರೇನಿಂಗ್ ಸೆಂಟರ್ ಅವರ ಸಹಯೋಗದಲ್ಲಿ ವಿಶೇಷ ಮಕ್ಕಳ ಸೃಜನಶೀಲತೆಯನ್ನು ವೃದ್ಧಿಸುವ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ವಿಶೇಷ ಮಕ್ಕಳು ಮತ್ತು ಅವರ ಶಿಕ್ಷಕರಿಗಾಗಿ ನಾಲ್ಕು ಕಾರ್ಯಾಗಾರಗಳನ್ನು ನವೆಂಬರ್ 3 ಮತ್ತು 4 ರಂದು ಹಾಗೂ ಡಿಸೆಂಬರ್ 7 ಮತ್ತು 8 ರಂದು ನಡೆಸಲಾಯಿತು.



ಫಲಾನುಭವಿಗಳು: ಸುಮಾರು 130 ಕಾಲಾವಧಿ: ಎರಡು ದಿನಗಳು (ವರ್ಷಕ್ಕೊಮ್ಮೆ)

- **ತಿಂಗಳ ಕಾರ್ಯಕ್ರಮಗಳು**

ಪ್ರತಿ ತಿಂಗಳ ಮೊದಲನೇ ಭಾನುವಾರ ಸಂಜೆ **'ನಕ್ಷತ್ರ ವೀಕ್ಷಣೆ'** ಎಂಬ ಆಕಾಶ ವೀಕ್ಷಣಾ ಕಾರ್ಯಕ್ರಮವನ್ನು ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಯಿತು.



ಫಲಾನುಭವಿಗಳು: ಸುಮಾರು 270 ಕಾಲಾವಧಿ: ಪ್ರತಿ ತಿಂಗಳು

ಪ್ರತಿ ತಿಂಗಳ ಮೊದಲನೇ ಭಾನುವಾರದಂದು '**ಖಗೋಳ ವಿಜ್ಞಾನ : ಕೇಳಿ - ತಿಳಿ'** ಎಂಬ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಾರ್ವಜನಿಕರು ಖಗೋಳದ ಕುರಿತು ತಮ್ಮ ಪ್ರಶ್ನೆಗಳು ಅಥವಾ ಸಂದೇಹಗಳನ್ನು ತಾರಾಲಯದ ಖಗೋಳ ವಿಜ್ಞಾನಿಗಳಿಂದ ಕೇಳಿ ತಿಳಿಯಬಹುದಾಗಿದೆ.



ಫಲಾನುಭವಿಗಳು: ಸುಮಾರು ೩೦೦ ಕಾಲಾವಧಿ: ಪ್ರತಿ ತಿಂಗಳು

ಪ್ರತಿ ತಿಂಗಳ ಮೂರನೇ ಭಾನುವಾರದಂದು ಸಾರ್ವಜನಿಕರಿಗೆ ಸುಲಭವಾಗಿ ಲಭ್ಯವಿರದ ಆಯ್ದ ವಿಶೇಷ **ವಿಜ್ಞಾನ ಚಲನಚಿತ್ರ**ಗಳನ್ನು ಪ್ರದರ್ಶಿಸಲಾಯಿತು. ವಂಡರ್ಸ್ ಆಫ್ ಲೈಫ್ - ಎಂಡ್‌ಲೆಸ್ ಫಾರ್ಮ್ಸ್ ಮೋಸ್ಟ್ ಬ್ಯೂಟಿಫುಲ್; ವಂಡರ್ಸ್ ಆಫ್ ಲೈಫ್ ಸೈಝ್ ಮ್ಯಾಟರ್ಸ್; ಹೌ ದಿ ಯೂನಿವರ್ಸ್ ವರ್ಕ್ಸ್ : ಬ್ಲಾಕ್ ಹೋಲ್; ಹೌ ದಿ ಯೂನಿವರ್ಸ್ ವರ್ಕ್ಸ್ - ಏಲಿಯನ್ ಗೆಲಾಕ್ಸಿಸ್ ಮುಂತಾದವುಗಳನ್ನು ಪ್ರದರ್ಶಿಸಲಾಯಿತು.

ಫಲಾನುಭವಿಗಳು: ಸುಮಾರು 300 ಕಾಲಾವಧಿ: ಪ್ರತಿ ತಿಂಗಳು

ಪ್ರೌಢಶಾಲಾ ವಿದ್ಯಾರ್ಥಿಗಳು ಹಾಗೂ ಮೇಲ್ಪಟ್ಟವರಿಗಾಗಿ ಪ್ರತಿ ತಿಂಗಳ ಎರಡನೇ ಭಾನುವಾರದಂದು **ವಿಜ್ಞಾನ ಕೂಟ** ಎಂಬ ಕಾರ್ಯಕ್ರಮದಡಿಯಲ್ಲಿ ವಿವಿಧ ವಿಷಯಗಳ ಕುರಿತು ಚರ್ಚೆಯನ್ನು ನಡೆಸಲಾಯಿತು. ಈ ಕಾರ್ಯಕ್ರಮವು ತಾರಾಲಯದಲ್ಲಿ ನಡೆಯುವ ವಾರಾಂತ್ಯದ ತರಗತಿಗಳಿಗೆ ಹಾಜರಾಗಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಈ ವರ್ಷದ ವಿಷಯಗಳೆಂದರೆ ಆದಿತ್ಯ L1 ಯೋಜನೆ,

ಧೂಮಕೇತುಗಳು, ಕರೋನಲ್ ಮಾಸ್ ಎಜೆಕ್ಷನ್ ಮತ್ತು ಭೂಕಾಂತೀಯ ಮಾರುತಗಳು, ಡಿಟೆಕ್ಷನ್ ಆಫ್ ಫಾಸ್ಟೆಸ್ಟ್ ಸ್ಟಾರ್ ಅರೌಂಡ್ ಎ ಬ್ಲ್ಯಾಕ್ ಹೋಲ್, ಮರಳು – ಸರಳವೇನಲ್ಲ, ಕಾಗದದಲ್ಲಿ ವಿಜ್ಞಾನ, ಸೃಜನಶೀಲ ವಿಜ್ಞಾನಿ ಜೆ. ಸಿ. ಬೋಸ್ ಮತ್ತು ಗಣಿತ ವಿನೋದ



ಫಲಾನುಭವಿಗಳು: ಸುಮಾರು 350 (ವರ್ಷಕ್ಕೆ) ಕಾಲಾವಧಿ: ಪ್ರತಿ ತಿಂಗಳು

- **ಸಾರ್ವಜನಿಕರಿಗಾಗಿ ಕಮ್ಮಟ:**
  "ಯೂನಿವರ್ಸ್ ಇನ್ ದಿ ಕ್ಲಾಸ್ ರೂಮ್" ಎಂಬ ಮೂರು ದಿನಗಳ ಖಗೋಳ ಕಮ್ಮಟವನ್ನು ಎರಡು ಬಾರಿ ದಿ.23 ರಿಂದ 25 ಡಿಸೆಂಬರ್ 2022 ಮತ್ತು 27 ರಿಂದ 29 ಜನವರಿ 2023 ರವರೆಗೆ ಸಾರ್ವಜನಿಕರಿಗಾಗಿ ಆಯೋಜಿಸಲಾಗಿತ್ತು. ಚರ್ಚೆಗಳು, ಕ್ರಿಯಾತ್ಮಕ ಚಟುವಟಿಕೆಗಳು, ಖಗೋಳ ವಿಜ್ಞಾನದ ಮಾದರಿಗಳ ಪ್ರಾತ್ಯಕ್ಷಿಕೆ, ಆಕಾಶ ಮಂದಿರದಲ್ಲಿ ನಕ್ಷತ್ರಗಳು ಮತ್ತು ಆಕಾಶ ಕಾಯಗಳ ಪರಿಚಯ ಮತ್ತು ಹೊರಾಂಗಣದಲ್ಲಿಯೂ ವೀಕ್ಷಣೆಯನ್ನು ನಡೆಸಲಾಯಿತು.



ಫಲಾನುಭವಿಗಳು: ಸುಮಾರು 35 ; ಕಾಲಾವಧಿ: ವರ್ಷಕ್ಕೆರಡು ಬಾರಿ

- **ಬಾಲಕಿರಿಯರಿಗಾಗಿ ಕಮ್ಮಟ**
  2023 ರ ಜನವರಿ 20 ಮತ್ತು 21 ರಂದು ಬಾಲಕಿಯರಿಗೆ "ಹಗಲಿನ ಖಗೋಳಶಾಸ್ತ್ರ"ದ ಕುರಿತು ಒಂದು ದಿನದ ಎರಡು ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಈ ಕಾರ್ಯಾಗಾರವು ಗ್ನೋಮನ್ ಜೊತೆಗಿನ ಚಟುವಟಿಕೆಗಳು, ಸೂರ್ಯನ ಕೋನೀಯ ಗಾತ್ರವನ್ನು ಅಳೆಯುವುದು, ಸೂರ್ಯನ ಬಿಂಬವನ್ನು ಮೂಡಿಸುವುದು ಮತ್ತು ಇತರ ಚಟುವಟಿಕೆಗಳನ್ನು ಒಳಗೊಂಡಿತ್ತು.
  ಫಲಾನುಭವಿಗಳು: ಸುಮಾರು 135 ಕಾಲಾವಧಿ: ವರ್ಷಕ್ಕೊಮ್ಮೆ

- **ವಿಜ್ಞಾನ ಪ್ರದರ್ಶನ**

  ಈ ಪ್ರದರ್ಶನದಲ್ಲಿ ಸುಮಾರು ೨೫ ಮಾದರಿಗಳು ಲಭ್ಯವಿರುತ್ತವೆ. ತಾರಾಲಯವು ನಿರ್ಮಿಸುವ ವಿಜ್ಞಾನ ಮಾದರಿಗಳನ್ನು ಆಗಸ್ಟ್ ತಿಂಗಳಿನಲ್ಲಿ ನಡೆಯುವ ವಿಜ್ಞಾನ ಪ್ರದರ್ಶನದಲ್ಲಿ ಪ್ರದರ್ಶಿಸಲಾಗುವುದು. ವಿವಿಧ ಶಾಲಾ ಮಕ್ಕಳು ತಯಾರಿಸಿರುವ ವಿಜ್ಞಾನ ಮಾದರಿಗಳಲ್ಲಿ ಆಯ್ದ ಮಾದರಿಗಳನ್ನು ನವಂಬರ್ ತಿಂಗಳಿನಲ್ಲಿ ಪ್ರದರ್ಶಿಸಲಾಗುವುದು.

  ಹಲವು ಸಂಘ ಸಂಸ್ಥೆಗಳ ಆಸಕ್ತಿಯ ಮೇರೆಗೆ ಈ ವಿಜ್ಞಾನ ಪ್ರದರ್ಶನವನ್ನು ವಿವಿಧ ಶೈಕ್ಷಣಿಕ ಸಂಸ್ಥೆಗಳ ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ಹಲವೆಡೆ ಆಯೋಜಿಸಲಾಗುತ್ತಿದೆ. ಜಯನಗಗರದ ನ್ಯಾಷನಲ್ ಕಾಲೇಜಿನ ಬಿ. ವಿ. ಜಗದೀಶ್ ಸೈನ್ಸ್ ಸೆಂಟರ್‌ನಲ್ಲಿ 2023 ರ ಜನವರಿ 6 ರಿಂದ 8 ರವರೆಗೆ ಆಯೋಜಿಸಲಾಗಿತ್ತು.




ಫಲಾನುಭವಿಗಳು: ಸುಮಾರು 8000-10000 (ಶಾಲಾ ಮಕ್ಕಳು+ಸಾರ್ವಜನಿಕರು)
ಕಾಲಾವಧಿ: ವರ್ಷದಲ್ಲಿ 3 ಬಾರಿ

- **ವಿಶೇಷ ಉಪನ್ಯಾಸಗಳು**

  ವಿವಿಧ ಪ್ರತಿಷ್ಠಿತ ಸಂಸ್ಥೆಗಳ ವಿಜ್ಞಾನಿಗಳಿಂದ ಕೆಳಕಂಡ ಉಪನ್ಯಾಸಗಳನ್ನು ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಥಿಯರೆಟಿಕಲ್ ಸೈನ್ಸಸ್ ನ ಸಹಯೋಗದೊಂದಿಗೆ ಸಾರ್ವಜನಿಕರಿಗಾಗಿ ಆಯೋಜಿಸಲಾಯಿತು.

  - 24.04.2022 ರಂದು ಆರ್.ಆರ್.ಐ. ನ ಪ್ರೊ. ಸುಪರ್ಣ ಸಿನ್ಹಾ ಅವರಿಂದ "ಪರ್ಸ್ಪೆಕ್ಟೀವ್ಸ್ ಇನ್ ಮಯಾತ್ ಅಂಡ್ ಆರ್ಟ್"
  - 08.05.2022 ರಂದು ಎನ್.ಸಿ.ಬಿ.ಎಸ್. ನ ಪ್ರೊ. ಎಮ್. ಕೆ. ಮ್ಯಾಥ್ಯೂ ಅವರಿಂದ "ಕೋಪಿಂಗ್ ವಿತ್ ಸಾಲ್ಟ್ ಅಂಡ್ ಡ್ರಾಟ್"
  - 26.06.2022 ರಂದು ಪ್ರೊ. ವಿಜಯ್ ತಿರುವೇದಿ ಅವರಿಂದ "ಗ್ರೀನಿಂಗ್ ಆಫ್ ಬೆಂಗಳೂರು"
  - 31.07.2022 ರಂದು ಪ್ರೊ. ಸಂಜುಕ್ತ ರಾಯ್ ಅವರಿಂದ "ನಾವೆಲ್ ಫೇಸಸ್ ಆಫ್ ಮ್ಯಾಟರ್ ನಿಯರ್ ಆಬ್ಸುಲ್ಯೂಟ್ ಝೀರೋ ಟೆಂಪರೇಚರ್"
  - 28.08.2022 ರಂದು ಪ್ರೊ. ಪಾರ್ಥನಿಲ್ ರಾಯ್ ಅವರಿಂದ "ಸಿಮ್ಯೂಲೇಷನ್ಸ್: ವೈ, ವಾಟ್ ಅಂಡ್ ಹೌ"
  - 11.09.2022 ರಂದು ಪ್ರೊ. ಸರಿತಾ ವಿಗ್ ಅವರಿಂದ "ಫೈಂಡಿಂಗ್ ಅವರ್ ಪ್ಲೇಸ್ ಅಮಾಂಗ್ ಸ್ಟಾರ್ಸ್"
  - 30.10.2022 ರಂದು ಪ್ರೊ. ಶಿಶಿರ್ ಕೊಲತಾಯ ಅವರಿಂದ "ಹಿಸ್ಟರಿ ಆಫ್ ವಾಕಿಂಗ್ ರೊಬೊಟ್ಸ್"
  - 27.11.2022 ರಂದು ಪ್ರೊ. ಸ್ವಪನ್ ಚಟ್ಟೋಪಾಧ್ಯಾಯ ಅವರಿಂದ "ಬೀಮಿಂಗ್ ಇನ್ಟು ಮ್ಯಾಟರ್ ಅಂಡ್ ಲೈಫ್ ವಿತ್ ಪಾರ್ಟಿಕಲ್ಸ್ ಅಂಡ್ ಲೈಟ್"
  - 11.12.2022 ರಂದು ಪ್ರೊ. ಜೆನ್ ಮಾರ್ಕ್‌ಲೋಫ್ ಅವರಿಂದ "ಚಾನ್ಸ್ ಅಂಡ್ ಚೋಸ್"
  - 14.01.2023 ರಂದು ಪ್ರೊ. ಸುವ್‌ರಾಜ್ ರಾಜು ಅವರಿಂದ "ಬ್ಲ್ಯಾಕ್ ಹೋಲ್ಸ್, ಕ್ವಾಂಟಮ್ ಮೆಕಾನಿಕ್ಸ್ ಅಂಡ್ ದಿ ರಿವರ್ಸಬಿಲಿಟಿ ಆಫ್ ಟೈಮ್"

ಅಲ್ಲದೇ, ವಿಜ್ಞಾನವನ್ನು ಜನಪ್ರಿಯಗೊಳಿಸಲು ತಾರಾಲಯದ ಸಂಪನ್ಮೂಲ ವ್ಯಕ್ತಿಗಳು ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ ಕೆಳಗಿನ ಉಪನ್ಯಾಸಗಳನ್ನು ನೀಡಿದ್ದಾರೆ:

- 19.10.2022 ರಂದು ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸ್ಪೇಸ್ ಸೈನ್ಸ್ ಅಂಡ್ ಟೆಕ್ನಾಲಜಿಯ ಪ್ರೊ. ಆನಂದ್ ನಾರಾಯಣನ್ ಅವರಿಂದ "ಎಕ್ಸ್‌ಟ್ರಸೋಲಾರ್ ಪ್ಲಾನೆಟ್ಸ್ ಅಂಡ್ ದಿ ಸರ್ಚ್ ಫಾರ್ ಹ್ಯಾಬಿಟಬಲ್ ವರ್ಲ್ಡ್ಸ್"
- 20.10.2022 ರಂದು ತಾರಾಲಯದ ನಿಕಟ ಪೂರ್ವ ನಿರ್ದೇಶಕರಾದ ಡಾ. ಬಿ. ಎಸ್. ಶೈಲಜಾ ಅವರಿಂದ "ಸರ್ಚ್ ಆಫ್ ಎಕ್ಸೋಪ್ಲಾನೆಟ್"
- 20.10.2022 ರಂದು ಡಾ. ಬಿ. ಎಸ್. ಶೈಲಜಾ ಅವರಿಂದ "ಅನ್ಯಗ್ರಹಗಳ ಅನ್ವೇಷಣೆ" ಕುರಿತು ಕನ್ನಡದಲ್ಲಿ ಸಂವಾದ
- 29.01.2023 ರಂದು ಪ್ರೊ. ಮೌರಾ ಮ್ಯಾಕ್‌ಲಾಫ್ಲಿನ್ ಅವರಿಂದ "ಪಲ್ಸಾರ್ಸ್"

**ಫಲಾನುಭವಿಗಳು**: ಸುಮಾರು 3000 ಕಾಲಾವಧಿ: ಪ್ರತಿ ತಿಂಗಳು

- **ಅಮೃತ ಮಹೋತ್ಸವ**

ಈ ಕಾರ್ಯಕ್ರಮದಡಿಯಲ್ಲಿ ಕೆಳಗಿನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು:

- 8 ಉಪನ್ಯಾಸಗಳನ್ನು ತಾರಾಲಯದ ಸಿಬ್ಬಂದಿಗಳು ನೀಡಿದ್ದಾರೆ; ಮುಂಬರುವ ತಿಂಗಳುಗಳಲ್ಲಿ ಇನ್ನೂ ಕೆಲವು ಉಪನ್ಯಾಸಗಳನ್ನು ಆಯೋಜಿಸಲಾಗುತ್ತಿದೆ.
- ಕರ್ನಾಟಕದಾದ್ಯಂತ ಮಡಿಕೇರಿ, ಕಡಬ, ತುಮಕೂರು, ಚೆನ್ನಪಟ್ಟಣ, ಮಂಗಳೂರು, ರಾಯಚೂರು, ಹೊಸಕೋಟೆ ಮುಂತಾದ 23 ಗ್ರಾಮಾಂತರ ಸರ್ಕಾರಿ ಶಾಲೆಗಳಲ್ಲಿ ರಾತ್ರಿ ಆಕಾಶ ವೀಕ್ಷಣೆಯನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆ ದೊರೆತಿದೆ. ಸುಮಾರು 3000 ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಾರ್ವಜನಿಕರು ಈ ಅವಕಾಶವನ್ನು ಉಪಯೋಗಿಸಿಕೊಂಡಿದ್ದಾರೆ.
- ಭಾರತೀಯ ಖಗೋಳ ವಿಜ್ಞಾನಿಗಳ ಕುರಿತು ಹತ್ತು ಕಿರುಚಿತ್ರಗಳನ್ನು ತಯಾರಿಸಿ ನಮ್ಮ ಯೂಟ್ಯೂಬ್‌ಗೆ ಅಪ್ಲೋಡ್ ಮಾಡಲಾಗಿದೆ.
- ಖಗೋಳ ವಿಜ್ಞಾನವನ್ನು ಮಾದರಿಗಳ ಮೂಲಕ ನಿರೂಪಿಸುವ ಕಿರುಚಿತ್ರದ ತಯಾರಿಯು ಅಂತಿಮ ಹಂತದಲ್ಲಿದ್ದು, ಸದ್ಯದಲ್ಲಿಯೇ ತಾರಾಲಯದ ಯೂಟ್ಯೂಬ್‌ನಲ್ಲಿ ಅಪ್ಲೋಡ್ ಮಾಡಲಾಗುವುದು.
- ಪ್ರತಿಭಾನ್ವಿತ ವಿದ್ಯಾರ್ಥಿಗಳೊಂದಿಗೆ ಪ್ರತಿಷ್ಠಿತ ವಿಜ್ಞಾನಿಗಳಿಂದ ಎರಡು ಸಂವಾದಾತ್ಮಕ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾಯ್ರಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಮೆಚ್ಚುಗೆ ವ್ಯಕ್ತಪಡಿಸಿರುವುದರಿಂದ, ಮುಂಬರುವ ದಿನಗಳಲ್ಲಿ ಈ ರೀತಿಯ ಉಪನ್ಯಾಸಗಳನ್ನು ಆಯೋಜಿಸಲಾಗುವುದು.
- ಕರ್ನಾಟಕದಾದ್ಯಂತ ವಿದ್ಯಾರ್ಥಿಗಳನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸುವ ಮೂಲಕ ಐದು ಹಂತಗಳಲ್ಲಿ ಕನ್ನಡದಲ್ಲಿ ರಾಜ್ಯ ಮಟ್ಟದ ವಿಜ್ಞಾನ ರಸಪ್ರಶ್ನೆ ಸ್ಪರ್ಧೆಯನ್ನು ನಡೆಸಲಾಯಿತು. ಅಂತಿಮ ಸುತ್ತಿನ ವಿಜ್ಞಾನ ರಸಪ್ರಶ್ನೆ ಸ್ಪರ್ಧೆಯಲ್ಲಿ ಮೈಸೂರು ವಿಭಾಗದ ಚಿನ್ಮಯ್ ಜಿ. ಕೆ. ಪ್ರಥಮ ಬಹುಮಾನ ಪಡೆದರು. ಕನ್ನಡದ ವಿಜ್ಞಾನ ರಸಪ್ರಶ್ನೆ ರಾಜ್ಯದ ಎಲ್ಲ ಮೂಲೆಗಳಿಗೂ ತಲುಪಿದೆ ಮತ್ತು ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಮನಸ್ಸಿನಲ್ಲಿ ಜಾಗೃತಿ ಮತ್ತು ಆಸಕ್ತಿಯನ್ನು ಮೂಡಿಸಿದೆ. ಈ ಕಾರ್ಯಕ್ರಮ ಮುಂದಿನ ವರ್ಷವೂ ಮುಂದುವರಿಯಲಿದೆ.

**ಫಲಾನುಭವಿಗಳು:** ಪ್ರೌಢಶಾಲಾ ವಿದ್ಯಾರ್ಥಿಗಳು, ಹೆಬ್ಬಾಳದ ಬಿಬಿಎಂಪಿ ಶಾಲೆಯ 100 ವಿದ್ಯಾರ್ಥಿಗಳನ್ನು ಅಂತಿಮ ಸುತ್ತಿನ ರಸಪ್ರಶ್ನೆಗೆ ಸಾಕ್ಷಿಯಾಗಲು ಆಹ್ವಾನಿಸಲಾಗಿತ್ತು. ಕಾಲಾವಧಿ: ಆಗಸ್ಟ್ ೨೦೨೩ ರವರೆಗೆ

- **ದಸರಾ ಉಪನ್ಯಾಸಗಳು**

  ತಾರಾಲಯವು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರನ್ನು ತಲುಪಲು ಈ ವರ್ಷ ವಿಶೇಷ ಉಪನ್ಯಾಸಗಳ ಹೊಸ ಸರಣಿಯನ್ನು ಪ್ರಾರಂಭಿಸಿತು. ಈ ಕಾರ್ಯಕ್ರಮದಡಿ ತಾರಾಲಯವು ಈ ಕೆಳಗಿನ ನಾಲ್ಕು ಉಪನ್ಯಾಸಗಳನ್ನು ಆಯೋಜಿಸಿದೆ. "ಸ್ಟ್ರಕ್ಚರ್ಸ್ ಅಟ್ ಡಿಫರೆಂಟ್ ಸ್ಕೇಲ್ಸ್" ವಿಷಯದ ಕುರಿತು ಉದ್ಘಾಟನಾ ದಸರಾ ಉಪನ್ಯಾಸಗಳನ್ನು ಪ್ರಾರಂಭಿಸಲಾಯಿತು.

  - 28.09.2022 ರಂದು ರಾಮನ್ ಸಂಶೋಧನಾ ಸಂಸ್ಥೆಯ ಪ್ರೊ. ತರುಣ್ ಸೌರದೀಪ್ ಅವರಿಂದ "ಅವರ್ ಪ್ಲೇಸ್ ಇನ್ ದಿ ಕಾಸ್ಮಾಸ್"
  - 29.09.2022 ರಂದು ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಥಿಯರೆಟಿಕಲ್ ಸೈನ್ಸಸ್‌ನ ಪ್ರೊ. ರಮಾ ಗೋವಿಂದರಾಜನ್ ಅವರಿಂದ "ಏಸ್ತಟಿಕ್ಸ್ ಇನ್ ಫ್ಲುಯಿಡ್ ಮೆಕಾನಿಕ್ಸ್"
  - 30.09.2022 ರಂದು ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ. ತೇಜಸ್ ಜಿ. ಮೂರ್ತಿ ಅವರಿಂದ "ದಿ ಆರ್ಟ್ ಅಂಡ್ ಸೈನ್ಸ್ ಆಫ್ ನೆಸ್ಟ್ ಬಿಲ್ಡಿಂಗ್"
  - 01.10.2022 ರಂದು ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ. ಉದಯ್ ಮೈತ್ರಾ ಅವರಿಂದ "ಕೆಮಿಸ್ಟ್ರಿ ಈಸ್ ಫನ್"

**ಫಲಾನುಭವಿಗಳು:** ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು, ಸುಮಾರು 200
**ಕಾಲಾವಧಿ:** ದಸರಾ ಸಂದರ್ಭದಲ್ಲಿ

- **ರಾಷ್ಟ್ರೀಯ ಗಣಿತ ದಿನ**

  ರಾಮಾನುಜನ್ ಅವರ ಜನ್ಮ ದಿನದ ಅಂಗವಾಗಿ ಡಿಸೆಂಬರ್ 22 ರಂದು ಪ್ರೌಢಶಾಲಾ ಶಿಕ್ಷಕರಿಗಾಗಿ "ಗಣಿತ ಕುಣಿತ" ಎಂಬ ಕಮ್ಮಟವನ್ನು ಆಯೋಜಿಸಲಾಯಿತು. ಶ್ರೀ ಬಿ ಎಸ್ ಕೃಷ್ಣಮೂರ್ತಿ, M Sc , PGDMCA , MCSI  ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಬಂದು ಹಲವಾರು ರಂಜನೀಯ ಚಟುವಟಿಕೆಗಳ ಮೂಲಕ ಗಣಿತ ಕಲಿಯುವ ಕಲೆಯನ್ನು ಚರ್ಚಿಸಿದರು.



ಫಲಾನುಭವಿಗಳು: ವಿದ್ಯಾರ್ಥಿಗಳು, ಸುಮಾರು 20 ; ಕಾಲಾವಧಿ: ಒಂದು ದಿನ

- **ವಿಜ್ಞಾನ ಕೇಂದ್ರಗಳ ವಿಜ್ಞಾನ ಸಂವಹನಕಾರರಿಗಾಗಿ ಕಮ್ಮಟ**

  ಕರ್ನಾಟಕದ ವಿಜ್ಞಾನ ಕೇಂದ್ರಗಳ ಸಹಯೋಗದೊಂದಿಗೆ ಕೆಳಗಿನ ಕಾರ್ಯಕ್ರಮಗಳನ್ನು ಈ ವರ್ಷ ಹಮ್ಮಿಕೊಳ್ಳಲಾಗಿತ್ತು:

  - 20.07.2022 ರಂದು ವಿದ್ಯಾರ್ಥಿಗಳಿಗಾಗಿ 'ಚಂದ್ರ ದಿನ'ದ ಅಂಗವಾಗಿ ಒಂದು ಕಮ್ಮಟ.
  - 20.10.2022 ರಂದು "ಅನ್ಯಗ್ರಹಗಳ ಅನ್ವೇಷಣೆ" ಕುರಿತಯ ಕನ್ನಡದಲ್ಲಿ ಸಂವಾದ ಕಾರ್ಯಕ್ರಮ.

- ಪಾರ್ಶ್ವ ಸೂರ್ಯಗ್ರಹಣದ ಸಂದರ್ಭದಲ್ಲಿ ಸೌರ ಕನ್ನಡಕಗಳನ್ನು ಕಳುಹಿಸಿ, ಸುರಕ್ಷಿತ ಗ್ರಹಣ ವೀಕ್ಷಣೆಗೆ ಅನುವು ಮಾಡಿಕೊಡಲಾಯಿತು. ಈ ಗ್ರಹಣದ ಕುರಿತು ದತ್ತಾಂಶಗಳನ್ನು ಹಂಚಿಕೊಳ್ಳುವುದರೊಂದಿಗೆ, ಚರ್ಚಿಸಲಾಯಿತು.
- ತಾರಾಲಯದ ಗ್ರಂಥಾಲಯದ ಅಮೂಲ್ಯ ಮತ್ತು ಉಪಯುಕ್ತ ಪುಸ್ತಕಗಳನ್ನು ಕಾರವಾರದ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಕಳುಹಿಸಿಕೊಡಲಾಯಿತು.

**ಫಲಾನುಭವಿಗಳು:** ವಿಜ್ಞಾನ ಸಂವಹನಕಾರರು ಹಾಗೂ ಶಿಕ್ಷಕರು; ಕಾಲಾವಧಿ: ಒಂದು ದಿನದ ಕಾರ್ಯಕ್ರಮ

- **ವಿಜ್ಞಾನ ಕಿಟ್‌ಗಳ ತಯಾರಿಕೆ**
  ವಿಜ್ಞಾನಕ್ಕೆ ಸಂಬAಧಿಸಿದ ಸ್ಮರಣಿಕೆಗಳು, ಪುಸ್ತಕಗಳು, ಕಿಟ್‌ಗಳು ಇನ್ನೂ ಮುಂತಾದವುಗಳನ್ನು ತಯಾರಿಸಿ ಆವರಣದಲ್ಲಿನ ಪುಸ್ತಕ ಮಳಿಗೆಯ ಮೂಲಕ ಸಾರ್ವಜನಿಕರಿಗೆ ತಲುಪಿಸಲು ಯೋಜಿಸಲಾಗಿತ್ತು. ಅದರಂತೆ, ಒಂದು ಸೌರವ್ಯೂಹದ ರಟ್ಟಿನ ಮಾದರಿಯನ್ನು 'ಡು ಇಟ್ ಯುವರ್‌ಸೆಲ್ಫ್' ಶೀರ್ಷಿಕೆಯಡಿಯಲ್ಲಿ ತಯಾರಿಸಲಾಗಿದೆ. ಮತ್ತು ವಿಜ್ಞಾನ ಪರಿಶೋಧನೆಯ ಕಿಟ್ ಅನ್ನು ತಯಾರಿಸುವ ಕಾರ್ಯವು ಪ್ರಗತಿಯಲ್ಲಿದೆ. ಫಲಾನುಭವಿಗಳು: ವಿದ್ಯಾರ್ಥಿಗಳು

- **ಬಾಹ್ಯಾಕಾಶ ಸಪ್ತಾಹ**
  'ಅಂತಾರಾಷ್ಟ್ರೀಯ ಬಾಹ್ಯಾಕಾಶ ಸಪ್ತಾಹ' ವನ್ನು ಆಚರಿಸಲು ಕೆಸ್ಟೆಪ್ಸ್, ಪಿಳಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ, ಮಂಗಳೂರು; ಪ್ರಾದೇಶಿಕ ವಿಜ್ಞಾನ ಕೇಂದ್ರ, ಧಾರವಾಡ; ರಾಯಚೂರು, ಕಾರವಾರ ಮತ್ತು ಬಾಗಲಕೋಟೆಯ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಸಹಯೋಗದೊಂದಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು:
  - 07.10.2022 ರಂದು ಇಸ್ರೋ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಡಾ. ಎ. ಎಸ್. ಕಿರಣ್ ಕುಮಾರ್ ಹಾಗೂ ನಿವೃತ್ತ ಹಿರಿಯ ವಿಜ್ಞಾನಿಗಳಾದ ಡಾ. ಎಸ್. ಸೀತಾ ಮತ್ತು ವಿಜ್ಞಾನಿಗಳಾದ ಡಾ. ಪಿ. ಜೆ. ಭಟ್ ಅವರೊಂದಿಗೆ ಕಾಲೇಜು ವಿದ್ಯಾರ್ಥಿಗಳಿಗಾಗಿ ಸಂವಾದ ಕಾರ್ಯಕ್ರಮ.
  - 08.10.2022 ರಂದು ಬೆಂಗಳೂರಿನ ಕ್ರೈಸ್ಟ್ ಯೂನಿವರ್ಸಿಟಿಯ ಡಾ. ಅರುಣ್ ಕೆನತ್ ಅವರಿಂದ "ಅಸ್ಟ್ರೋಬಯಾಲಜಿ" ಕುರಿತು ಉಪನ್ಯಾಸ.
  - 09.10.2022 ರಂದು ತಾರಾಲಯದ ಡಾ. ಎಮ್. ವೈ. ಆನಂದ್ ಅವರಿಂದ 'ಸೈನ್ಸ್ ಫ್ರಮ್ ಸ್ಪೇಸ್ ಟೆಲಿಸ್ಕೋಪ್ಸ್' ಕುರಿತು ಉಪನ್ಯಾಸ.



ಇಸ್ರೋ ಸಂಸ್ಥೆಯ ಸಹಯೋಗದೊಂದಿಗೆ ಮೂರು ದಿನದ ಬಾಹ್ಯಾಕಾಶ ಮಾದರಿಗಳ ಪ್ರದರ್ಶನ ಮತ್ತು ವಾಕ್-ಇನ್-ಕ್ವಿಜ಼್ ಕಾರ್ಯಕ್ರಮವನ್ನು ಅಕ್ಟೋಬರ್ 7 ರಿಂದ 9 ರವರೆಗೆ ಆಯೋಜಿಸಲಾಗಿತ್ತು. 250 ಶಾಲಾ ವಿದ್ಯಾರ್ಥಿಗಳು ಈ ಪ್ರದರ್ಶನ ಮತ್ತು ಕಾರ್ಯಕ್ರಮದಲ್ಲಿ

ಭಾಗವಹಿಸಿದ್ದರು. ಕರ್ನಾಟಕದ ಇತರೆ ವಿಜ್ಞಾನ ಕೇಂದ್ರಗಳೂ ಸೇರಿದಂತೆ ಒಟ್ಟು 75 ಮಕ್ಕಳು ರಸಪ್ರಶ್ನೆಯಲ್ಲಿ ಭಾಗಿಯಾಗಿದ್ದರು, ಇದರಲ್ಲಿ ಮೊದಲ 25 ಮಕ್ಕಳನ್ನು ಇಸ್ರೋ ಸಂಸ್ಥೆಯ ಒಂದು ಕೇಂದ್ರಕ್ಕೆ ಕರೆದೊಯ್ಯಲು ಆಯ್ಕೆ ಮಾಡಲಾಯಿತು. ಅದರಂತೆ ತಾರಾಲಯವು ಹೆಚ್ಚಿನ ಒತ್ತು ನೀಡಿ ಈ ಕಾರ್ಯಕ್ರಮ ನೆರವೇರಲು, ಇಸ್ರೋ ಸಂಸ್ಥೆ ಹಾಗೂ ವಿದ್ಯಾರ್ಥಿಗಳೊಂದಿಗೆ ಸತತ ಸಂಪರ್ಕ ವಹಿಸಿ, 28.12.2022 ರಂದು ISTRAC ಸಂಸ್ಥೆಗೆ ಕರೆದೊಯ್ಯುವ ವ್ಯವಸ್ಥೆ ಮಾಡಿತು.
ಫಲಾನುಭವಿಗಳು: 250 ಶಾಲಾ ವಿದ್ಯಾರ್ಥಿಗಳು ; ಕಾಲಾವಧಿ: ನಾಲ್ಕು ದಿನ

- **ಪ್ರಕಟಣೆಗಳು**

**ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸಲು ಪ್ರಚಾರ ಪತ್ರಗಳನ್ನು ಮುದ್ರಿಸುವ ಕಾರ್ಯವನ್ನು ಕೈಗೊಳ್ಳಲಾಯಿತು.**

## 2. ವಿಜ್ಞಾನ ಶಿಕ್ಷಣ ಮತ್ತು ಸಂಶೋಧನೆ

ಕಾರ್ಯಕ್ರಮದ ವಿವರಗಳು:

- **ವಾರಾಂತ್ಯದ ತರಗತಿಗಳು**

  ಈ ಸಾಲಿನಲ್ಲಿ 'ಓಮ್ಸ್ ನ ನಿಯಮ ಮತ್ತು ವಿದ್ಯುನ್ಮಂಡಲ'ದ ಕುರಿತು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ವಾರಾಂತ್ಯದ ತರಗತಿಗಳು ನೆರವೇರಿದವು. 2022 ರ ಜುಲೈ 10 ರಿಂದ ಆರಂಭವಾಗಿದ್ದು, 2023 ರ ಫೆಬ್ರುವರಿಯಲ್ಲಿ ತರಗತಿಗಳು ಅಂತ್ಯಗೊಳ್ಳಲಿವೆ.

ಫಲಾನುಭವಿಗಳು: ಸುಮಾರು ೨೫ ವಿದ್ಯಾರ್ಥಿಗಳು ಕಾಲಾವಧಿ: ಜುಲೈ ನಿಂದ ಫೆಬ್ರುವರಿ – ಎಂಟು ತಿಂಗಳು

## 3. ಶಾಲಾ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರಗಳು

2022ರ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ವಿವಿಧ ವಯೋಮಾನದ ವಿದ್ಯಾರ್ಥಿಗಳಿಗಾಗಿ ಕೆಳಕಂಡ ಬೇಸಿಗೆ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು:

1. **ಚಿಣ್ಣರ ಕಾರ್ಯಕ್ರಮ**

   ಏಪ್ರಿಲ್ 5 ರಿಂದ 9 ಮತ್ತು 19 ರಿಂದ 23 ರವರೆಗೆ ಐದು ದಿನಗಳ ವಿಜ್ಞಾನ ಚಟುವಟಿಕೆ ಆಧಾರಿತ ಶಿಬಿರವನ್ನು ನಾಲ್ಕು ತಂಡಗಳಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸರಳ ವಿಜ್ಞಾನ ಪ್ರಾತ್ಯಕ್ಷಿಕೆಗಳು ಮತ್ತು ಮಾದರಿಗಳ ತಯಾರಿಯನ್ನು ಕಲಿಸಲಾಯಿತು.

2. **ಫನ್ ವಿತ್ ಸೈನ್ಸ್**

   ಏಪ್ರಿಲ್ 12 ರಿಂದ 16 ರವರೆಗೆ ಐದು ದಿನಗಳ ಶಿಬಿರವನ್ನು 6 ಮತ್ತು 7 ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಯಿತು. ವಿದ್ಯಾರ್ಥಿಗಳಿಗೆ ವಿಜ್ಞಾನದ ಮೂಲಭೂತ ಅಂಶಗಳನ್ನು ಪ್ರಾತ್ಯಕ್ಷಿಕೆಗಳು ಮತ್ತು ಸುಲಭ ಚಟುವಟಿಕೆಗಳ ಮೂಲಕ ಕಲಿಸಲಾಯಿತು.

3. **ಒಂದು ದಿನದ ಕಮ್ಮಟಗಳೂ**

   ಏಪ್ರಿಲ್ 10 ಮತ್ತು 17 ರಂದು 'ಬೆಳಕು' ಮತ್ತು 'ಗಣಿತ' ವಿಷಯದ ಕುರಿತು ಒಂದು ದಿನದ ಕಮ್ಮಟಗಳನ್ನು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಲಾಗಿತ್ತು. ಈ ಚಟುವಟಿಕೆ ಆಧಾರಿತ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಗಣಿತ ಮತ್ತು ವಿಜ್ಞಾನದ ಪರಿಕಲ್ಪನೆಗಳನ್ನು ಪರಿಚಯಿಸಿದವು.

**4. ಅಸ್ಟ್ರೋ ಕಂಪ್ಯೂಟಿಂಗ್**

ಏಪ್ರಿಲ್ 5 ರಿಂದ 9 ಮತ್ತು 19 ರಿಂದ 23 ರವರೆಗೆ ಐದು ದಿನಗಳ ಎರಡು ಕಮ್ಮಟಗಳನ್ನು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿತ್ತು. ಕ್ಷುದ್ರಗ್ರಹಗಳ ಸ್ಥಾನಗಳನ್ನು ಪತ್ತೆಹಚ್ಚಲು, ಸೂರ್ಯನ ಪರಿಭ್ರಮಣವನ್ನು ಅರ್ಥಮಾಡಿಕೊಳ್ಳಲು ಮತ್ತು ಸಿಎಲ್ಇಎ ತಂತ್ರಾಂಶವನ್ನು ಬಳಸಿಕೊಂಡು ಇತರ ಖಗೋಳ ಚಲನೆಗಳನ್ನು ಅರ್ಥಮಾಡಿಕೊಳ್ಳಲು ಖಗೋಳಶಾಸ್ತ್ರಜ್ಞರು ಅಳವಡಿಸಿಕೊಂಡ ವಿಧಾನಗಳನ್ನು ಕಾರ್ಯಕ್ರಮದಲ್ಲಿ ತಿಳಿಸಲಾಯಿತು.

**5. ಹಗಲಿನ ಖಗೋಳಶಾಸ್ತ್ರ**

12 ಏಪ್ರಿಲ್ 2022 ರಂದು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಈ ಕಮ್ಮಟವನ್ನು ಆಯೋಜಿಸಲಾಗಿತ್ತು. ಗ್ನೋಮನ್, ಸೂರ್ಯನ ಬಿಂಬ, ಸೂರ್ಯನ ಕೋನೀಯ ಗಾತ್ರವನ್ನು ಅಳೆಯುವುದು ಮತ್ತು ಇತರ ಚಟುವಟಿಕೆಗಳ ಬಗ್ಗೆ ಕಾರ್ಯಕ್ರಮದಲ್ಲಿ ಚರ್ಚಿಸಲಾಯಿತು.

**6. ಆಪ್‌ಗಳ ಮೂಲಕ ಖಗೋಳಶಾಸ್ತ್ರ**

13 ಏಪ್ರಿಲ್ 2022 ರಿಂದ ಮೂರು ದಿನಗಳ ಕಮ್ಮಟವನ್ನು ಆನ್‌ಲೈನ್ ಮೂಲಕ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿತ್ತು. ಮೂಲಭೂತ ವಿಜ್ಞಾನ ಪರಿಕಲ್ಪನೆಗಳೊಂದಿಗೆ ಆಯ್ದ ಖಗೋಳ ವಿಜ್ಞಾನ ಅಪ್ಲಿಕೇಶನ್‌ಗಳನ್ನು ಪರಿಚಯಿಸಲಾಯಿತು. ಸೂರ್ಯ-ಭೂಮಿಯ ಸಂಪರ್ಕಗಳನ್ನು ಗಮನಿಸಲು, ಗ್ರಹಗಳು, ನಕ್ಷತ್ರಗಳು ಮತ್ತು ಗ್ಯಾಲಕ್ಸಿಗಳನ್ನು ಮೊಬೈಲ್ ಅಪ್ಲಿಕೇಶನ್‌ಗಳೊಂದಿಗೆ ವಿವರಿಸಲಾಯಿತು.

**7. ಯೂನಿವರ್ಸ್ ಇನ್ ದಿ ಕ್ಲಾಸ್ ರೂಮ್**

2022 ರ ಮೇ 6 ರಿಂದ 8 ರವರೆಗೆ 13 ವರ್ಷ ಮೇಲ್ಪಟ್ಟವರಿಗಾಗಿ ಮೂರು ದಿನಗಳ ಖಗೋಳ ಕಮ್ಮಟವನ್ನು ಆಯೋಜಿಸಲಾಗಿತ್ತು. ಇದರಲ್ಲಿ ವಿದ್ಯಾರ್ಥಿಗಳಿಗೆ ಖಗೋಳಶಾಸ್ತ್ರದ ಪರಿಚಯ, ಚಟುವಟಿಕೆಗಳು, ಮಾದರಿಗಳು, ಪ್ರದರ್ಶನಗಳು ಮತ್ತು ಚಲನಚಿತ್ರಗಳನ್ನು ತೋರಿಸಲಾಯಿತು.

**8. ಖಗೋಳವಿಜ್ಞಾನದ ಮೂಲಭೂತ ಅಂಶಗಳು**

ಏಪ್ರಿಲ್ ಮತ್ತು ಮೇ 2022ರ ವಾರಾಂತ್ಯಗಳಲ್ಲಿ 15 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ವ್ಯಕ್ತಿಗಳಿಗೆ ಹೈಬ್ರಿಡ್ ವಿಧಾನದಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಪ್ರತ್ಯೇಕ ಅಲ್ಪಾವಧಿಯ ಕೋರ್ಸ್ ಅನ್ನು ನಡೆಸಲಾಯಿತು. ಈ ಕಾರ್ಯಕ್ರಮವು ಖಗೋಳ ವಿಜ್ಞಾನ ಮತ್ತು ಖಭೌತಶಾಸ್ತ್ರದ ಮೂಲಭೂತ ಅಂಶಗಳನ್ನು ವಿವರಿಸುವ ಗುರಿಯನ್ನು ಹೊಂದಿತ್ತು, ಮತ್ತು ಪರಿಕಲ್ಪನೆಗಳನ್ನು ಸ್ಪಷ್ಟಪಡಿಸಲು ಸಂವಾದಾತ್ಮಕ ಅಧಿವೇಶನಗಳು, ಮಾದರಿಗಳ ಪ್ರಾತ್ಯಕ್ಷಿಕೆಯನ್ನು ಒಳಗೊಂಡಿತ್ತು.

**9. ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಬೇಸಿಗೆ ಶಿಬಿರ**

2022 ರ ಏಪ್ರಿಲ್ 19 ರಿಂದ 30 ರವರೆಗೆ ಹತ್ತು ದಿನಗಳ ಶಿಬಿರವನ್ನು ಆಯೋಜಿಸಲಾಗಿತ್ತು. ಸೈದ್ಧಾಂತಿಕ ತರಗತಿಗಳು, ಪ್ರಯೋಗಾಲಯ ಮತ್ತು ಕಂಪ್ಯೂಟರ್ ತರಗತಿಗಳು, ಪ್ರಾತ್ಯಕ್ಷಿಕೆಗಳು ಮತ್ತು ಚಲನಚಿತ್ರ ಪ್ರದರ್ಶನಗಳ ಮೂಲಕ ವಿಜ್ಞಾನದ ವಿವಿಧ ವಿಭಾಗಗಳಲ್ಲಿ ವರ್ಗೀಕರಣದ ವಿವಿಧ ತತ್ವಗಳನ್ನು ಪರಿಚಯಿಸಲಾಯಿತು.

**10. ಭಾರತೀಯ ಖಗೋಳ ಶಾಸ್ತ್ರದ ತತ್ವಗಳು**

2022 ರ ಮೇ 11 ರಿಂದ 15 ವರ್ಷ ಮೇಲ್ಪಟ್ಟವರಿಗೆ ನಡೆದ ಮೂರು ದಿನದ ಹೈಬ್ರಿಡ್ ಮಾದರಿಯ ಕಾರ್ಯಾಗಾರದಲ್ಲಿ "ಸೂರ್ಯ ಸಿದ್ಧಾಂತ"ದಂತಹ ಸಂಸ್ಕೃತ ಗ್ರಂಥಗಳಲ್ಲಿ

ಚರ್ಚಿಸಲಾಗಿರುವ ಖಗೋಳೀಯ ವಿಚಾರಗಳನ್ನು ಪರಿಚಯಿಸಲಾಯಿತು. ರಾತ್ರಿಯ ಆಕಾಶದ ಮೂಲಭೂತ ವಿಚಾರಗಳಿಂದ ಹಿಡಿದು ಗ್ರಹಣಗಳನ್ನು ಪ್ರವಾದಿಸುವವರೆಗಿನ ವಿಚಾರಗಳನ್ನು ತಿಳಿಯುವಲ್ಲಿ, ಈಗಿನ ಕಾಲದ ಗೋಳೀಯ ತ್ರಿಕೋನಮಿತಿ ವಿಧಾನಗಳಿಗೂ ಹಿಂದಿನ ವಿಧಾನಗಳಿಗೂ ಇರುವ ಸಾಮ್ಯತೆ ಮತ್ತು ವ್ಯತ್ಯಯಗಳನ್ನು ತಿಳಿಸಲಾಯಿತು.

**11. ಫ್ರಮ್ ವೆಬ್ ಆಫ್ ಲೈಫ್ ಟು ಯೂನಿವರ್ಸ್**

2022ರ ಮೇ 24ರಿಂದ ಜೂನ್ 3ರವರೆಗೆ ಕಾಲೇಜು ವಿದ್ಯಾರ್ಥಿಗಳಿಗೆ ಹತ್ತು ದಿನಗಳ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಂಶೋಧನಾ ಸಂಸ್ಥೆಗಳ ವಿಜ್ಞಾನಿಗಳು ಈ ಶಿಬಿರದಲ್ಲಿ ಉಪನ್ಯಾಸಗಳನ್ನು ನೀಡಿದರು. ಈ ಉಪನ್ಯಾಸಗಳು ವಿದ್ಯಾರ್ಥಿಗಳಿಗೆ ವಿವಿಧ ಕ್ಷೇತ್ರಗಳಲ್ಲಿನ ಮೂಲಭೂತ ಕಲ್ಪನೆಗಳು ಮತ್ತು ಸಂಶೋಧನೆಯ ಮುಂಚೂಣಿ ಕ್ಷೇತ್ರಗಳನ್ನು ಪರಿಚಯಿಸಿದವು. ವೈದ್ಯಕೀಯ ವಿಜ್ಞಾನಕ್ಕೆ ಭೌತಶಾಸ್ತ್ರ ಮತ್ತು ಜೀವಶಾಸ್ತ್ರದ ಪ್ರಸ್ತುತತೆಯ ಬಗ್ಗೆ ವೈದ್ಯಕೀಯ ವೃತ್ತಿಪರರಿಂದ ವಿಶೇಷ ಉಪನ್ಯಾಸಗಳನ್ನು ಸಹ ನಿಗದಿಪಡಿಸಲಾಗಿತ್ತು.

ಫಲಾನುಭವಿಗಳು: ಸುಮಾರು ೬೦೦ ವಿದ್ಯಾರ್ಥಿಗಳು ; ಕಾಲಾವಧಿ: ಏಪ್ರಿಲ್ ಮತ್ತು ಮೇ

- **ಶಿಕ್ಷಕರಿಗಾಗಿ ಕಾರ್ಯಾಗಾರ**

ಶೈಕ್ಷಣಿಕ ವರ್ಷದ ಆರಂಭದಲ್ಲಿ, ತಾರಾಲಯದ ವಾರ್ಷಿಕ ವಿಜ್ಞಾನ ಜನಪ್ರಿಯತೆ ಮತ್ತು ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಪರಿಚಯ ಮಾಡಿಕೊಳ್ಳಲು ಸಭೆ ನಡೆಸಲಾಯಿತು.

ಈ ವರ್ಷ ಪ್ರೌಢಶಾಲಾ ಶಿಕ್ಷಕರಿಗಾಗಿ ಈ ಕೆಳಗಿನ ವಿಷಯಗಳ ಮೇಲೆ ಕಾರ್ಯಾಗಾರಗಳನ್ನು ನಡೆಸಲಾಗಿದೆಃ

1. ಬೆಳಕು - 07.07.2022
2. ತ್ರಿಗುಣಮಿತಿ - 14.07.2022
3. ಒತ್ತಡ - 15.09.2022
4. ಲೋಹ ಮತ್ತು ಲೋಹವಲ್ಲದ ವಸ್ತುಗಳು - 04.08.2022
5. ಕ್ಷೇತ್ರಗಣಿತ - 22.09.2022



17 ಸೆಪ್ಟೆಂಬರ್ 2022 ರಂದು ಶಿಕ್ಷಕರ ದಿನಾಚರಣೆಯ ಅಂಗವಾಗಿ ಎರಡು ವಿಶೇಷ ಉಪನ್ಯಾಸಗಳನ್ನು ಆಯೋಜಿಸಲಾಗಿತ್ತು. ಖ್ಯಾತ ಶಿಕ್ಷಣ ತಜ್ಞ ಡಾ ಸಮೀರಸಿಂಹ ಅವರು "ಕಲಿಕೆಯ ಹಂತಗಳನ್ನು ಅಭಿವೃದ್ಧಿಪಡಿಸಲು ಬೋಧನಾತ್ಮಕ ವಿನ್ಯಾಸ" ಕುರಿತು ಉಪನ್ಯಾಸ ನೀಡಿದರು. ಮತ್ತು ಹೆಸರಾಂತ ಶಿಕ್ಷಣ ತಜ್ಞ ಡಾ.ಬಾಲಕೃಷ್ಣ ಅಡಿಗ, ಅವರು ಜೀವಶಾಸ್ತ್ರದ ಬೋಧನೆಯ ವಿಧಾನಗಳ ಬಗ್ಗೆ ಉಪನ್ಯಾಸ ನೀಡಿದರು



ಫಲಾನುಭವಿಗಳುಃ 150 ಶಿಕ್ಷಕರ ಕಾಲಾವಧಿ: ಜೂನ್ ನಿಂದ ಡಿಸೆಂಬರ್- ಆರು ತಿಂಗಳು

- **ಪದವಿ ವಿದ್ಯಾರ್ಥಿಗಳಿಗೆ ಸಂಶೋಧನಾ ಕಾರ್ಯಕ್ರಮ** :

- **ರಿಸರ್ಚ್ ಎಜುಕೇಷನ್ ಅಡ್ವಾನ್ಸ್ಮೆಂಟ್ ಪ್ರೋಗ್ರಾಂ:**
  ಭೌತಶಾಸ್ತ್ರ ಮತ್ತು ಜೀವಶಾಸ್ತ್ರದಲ್ಲಿ ಮೂರು ವರ್ಷಗಳ ಕಾರ್ಯಕ್ರಮವಾಗಿದ್ದು, ಇದನ್ನು ಅವರ ಔಪಚಾರಿಕ ಪಠ್ಯಕ್ರಮಕ್ಕೆ ಪೂರಕವಾಗಿ ನಿಯಮಿತ ಪದವಿ ಕಾಲೇಜು ಶಿಕ್ಷಣದೊಂದಿಗೆ ಏಕಕಾಲದಲ್ಲಿ ನೀಡಲಾಗುತ್ತದೆ. ವಿಜ್ಞಾನದ ಕಡೆಗೆ ವಿದ್ಯಾರ್ಥಿಗಳನ್ನು ಆಕರ್ಷಿಸುವುದು ಮತ್ತು ವಿಜ್ಞಾನದಲ್ಲಿ ಸಂಶೋಧನಾ ವೃತ್ತಿಗೆ ಅವರನ್ನು ಸಜ್ಜುಗೊಳಿಸುವುದು ಈ ಕಾರ್ಯಕ್ರಮದ ಪ್ರಾಥಮಿಕ ಉದ್ದೇಶವಾಗಿದೆ. ಇದಕ್ಕೆ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ), ಐ. ಸಿ. ಟಿ. ಎಸ್., ಟಿಐಎಫ್ಆರ್ ಮತ್ತು ಐಐಎ, ಇವರ ಸಕ್ರಿಯ ಬೆಂಬಲವಿದೆ. ಈ ಕಾರ್ಯಕ್ರಮವು ಪ್ರಾರಂಭವಾದಾಗಿನಿಂದ 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಿಎಚ್ಡಿ ಪಡೆದಿದ್ದಾರೆ ಮತ್ತು ಹಲವಾರು ವಿದ್ಯಾರ್ಥಿಗಳು ಡಾಕ್ಟರೇಟ್ ಅಧ್ಯಯನವನ್ನು ಮಾಡುತ್ತಿದ್ದಾರೆ. ಈ ವರ್ಷದ ಕಾರ್ಯಕ್ರಮವು 2022ರ ಸೆಪ್ಟೆಂಬರ್ 7ರಿಂದ ಆರಂಭವಾಗಿದ್ದು, 100 ವಿದ್ಯಾರ್ಥಿಗಳು ಭೌತಶಾಸ್ತ್ರ ಪ್ರವೇಶಕ್ಕಾಗಿ ನೋಂದಾಯಿಸಿಕೊಂಡಿದ್ದಾರೆ.
  ಫಲಾನುಭವಿಗಳುಃ 100 (30) ವಿದ್ಯಾರ್ಥಿಗಳು ಕಾಲಾವಧಿ: ಜೂನ್ 22 ರಿಂದ ಮಾರ್ಚ್ 23 ರ ರವರೆಗೆ -9 ತಿಂಗಳುಗಳು

- **ರೀಪ್-ಜೀವಶಾಸ್ತ್ರ**
  2022ರ ಆಗಸ್ಟ್ 13ರಿಂದ ಜೀವವಿಜ್ಞಾನದಲ್ಲಿ ಸಂಶೋಧನಾ ವೃತ್ತಿಜೀವನಕ್ಕೆ ಬಲವಾದ ಅರ್ಹತೆ ಹೊಂದಿರುವ ಬಿ ಎಸ್ ಸಿ ಓದುತ್ತಿರುವ ವಿದ್ಯಾರ್ಥಿಗಳಿಗೆ ವರ್ಷವಿಡೀ ವಾರಾಂತ್ಯಗಳಲ್ಲಿ ಬೋಧನಾ ಕಾರ್ಯಕ್ರಮಗಳು ನಡೆದವು.
  ಫಲಾನುಭವಿಗಳುಃ ಸುಮಾರು 90 ವಿದ್ಯಾರ್ಥಿಗಳು ಕಾಲಾವಧಿ: ಜೂನ್ 22 ರಿಂದ ಮಾರ್ಚ್ 23 ರ ರವರೆಗೆ -9 ತಿಂಗಳುಗಳು

- **ಶಾಲಾ ವಿದ್ಯಾರ್ಥಿಗಳಿಗಾಗಿ ಕಾರ್ಯಾಗಾರಗಳು**
  2022ರ ಜುಲೈ 20ರಂದು 'ಅಂತಾರಾಷ್ಟ್ರೀಯ ಚಂದ್ರ ದಿನ' ವನ್ನು ಆಚರಿಸಲು ವಿದ್ಯಾರ್ಥಿಗಳಿಗಾಗಿ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಮಕ್ಕಳ ದಿನದ ಆಚರಣೆಯ ಸಂದರ್ಭದಲ್ಲಿ, 3 ರಿಂದ 5 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿಜ್ಞಾನ ಪ್ರಯೋಗಗಳ ಪ್ರದರ್ಶನದೊಂದಿಗೆ 2022 ರ ನವೆಂಬರ್ 13 ರಂದು ಎರಡು ತಂಡಗಳಲ್ಲಿ ಅರ್ಧ ದಿನಗಳ ಕಾರ್ಯಾಗಾರವನ್ನು ನಡೆಸಲಾಯಿತು.
  ಫಲಾನುಭವಿಗಳುಃ 150 ವಿದ್ಯಾರ್ಥಿಗಳು ಕಾಲಾವಧಿ: ಒಂದು ದಿನ

- **ವಿಜ್ಞಾನ ವನದ ನಿರ್ವಹಣೆ**
  ವಿಜ್ಞಾನ ವನವು 60 ಕ್ಕೂ ಹೆಚ್ಚು ಕ್ರಿಯಾತ್ಮಕ ಮಾದರಿಗಳನ್ನು ಹೊಂದಿದ್ದು, ಅವು ವೈಜ್ಞಾನಿಕ ತತ್ವಗಳನ್ನು ಪ್ರದರ್ಶಿಸುತ್ತವೆ. ಪ್ರತಿ ವಿಜ್ಞಾನ ಮಾದರಿಯ ಪಕ್ಕದಲ್ಲಿ

ವಿವರವಾದ ವಿವರಣಾತ್ಮಕ ಬರವಣಿಗೆಗಳನ್ನು ಪ್ರದರ್ಶಿಸಲಾಗಿದೆ ಮತ್ತು ಕ್ಯೂಆರ್ ಕೋಡ್ ಬೆಂಬಲಿತ ಫ್ಲಿಪ್ ಏರ್ ತಂತ್ರಾಂಶವನ್ನು ಸ್ಕ್ಯಾನ್ ಮಾಡುವುದರ ಮೂಲಕ ಡೌನ್ಲೋಡ್ ಮಾಡಬಹುದು. ಈ ವಿವರಣಾತ್ಮಕ ವಸ್ತುಗಳು ತಾರಾಲಯದ ವೆಬ್ ಸೈಟ್‌ನಲ್ಲೂ ಲಭ್ಯವಿದೆ. ಮುಕ್ತ ಆಕಾಶದಲ್ಲಿ ಪ್ರಕೃತಿಯ ನಿರಂತರ ಪರಿಚಯವನ್ನು ಗಮನದಲ್ಲಿಟ್ಟುಕೊಂಡು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಸಂದರ್ಶಕರು ಬಳಸುತ್ತಿರುವುದರಿಂದ ನಿಯಮಿತ ಅವಧಿಯ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ.

ಈ ವರ್ಷ 'ನೊಯಿಸ್ ರೆಸೊನೇಟರ್' ಮತ್ತು 'ಕ್ಯಾಮೆರಾ' ಅನ್ನು ಈ ಪಟ್ಟಿಯಲ್ಲಿ ಸೇರಿಸಲಾಗಿದೆ.

ಫಲಾನುಭವಿಗಳುಃ ತಾರಾಲಯಕ್ಕೆ ಭೇಟಿ ನೀಡುವ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು- 3.50 ಕಾಲಾವಧಿ: ವರ್ಷವಿಡೀ ತೆರೆದಿರುತ್ತದೆ.

**ಈ ವರ್ಷ ಕೈಗೊಂಡ ಹೊಸ ಮತ್ತು ಹೆಚ್ಚುವರಿ ಕಾರ್ಯಕ್ರಮಗಳು**

1. **ಅಂತಾರಾಷ್ಟ್ರೀಯ ಚಂದ್ರದಿನ ಆಚರಣೆ :**

   ಇಸ್ರೋದ ಸಾಮರ್ಥ್ಯ ವರ್ಧನೆ ಕಾರ್ಯಕ್ರಮ ಕಚೇರಿಯ ಸಹಯೋಗದೊಂದಿಗೆ 'ಅಂತಾರಾಷ್ಟ್ರೀಯ ಚಂದ್ರನ ದಿನ' ಆಚರಿಸಲು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಇಸ್ರೋ ಮಾಜಿ ಅಧ್ಯಕ್ಷ ಮತ್ತು ಬೇಸ್ ಅಧ್ಯಕ್ಷ ಶ್ರೀ ಎ. ಎಸ್. ಕಿರಣ್ ಕುಮಾರ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

- ವಿದ್ಯಾರ್ಥಿಗಳಿಗಾಗಿ "ಚಟುವಟಿಕೆಗಳ ಮೂಲಕ ಚಂದ್ರ" ಕಾರ್ಯಾಗಾರ
- ಶ್ರೀ ಎಚ್. ಆರ್. ಮಧುಸೂದನ್, ಜೆ.ಎನ್.ಪಿ ಅವರ ಭಾಷಣ "ಚಂದ್ರನಾ ಅಂಗಳದಲ್ಲಿ"
- ಇಸ್ರೋದ ವಿಜ್ಞಾನ ಕಾರ್ಯಕ್ರಮ ಕಛೇರಿಯ ನಿರ್ದೇಶಕರಾದ ಡಾ. ತೀರ್ಥ ಪ್ರತಿಮ್ ದಾಸ್ ಅವರಿಂದ "ಚಂದ್ರನೊಂದಿಗೆ ಒಂದು ಪ್ರಯಾಣ" ಎಂಬ ಭಾಷಣ ನೀಡಿದರು.

  ಫಲಾನುಭವಿಗಳುಃ ~ 100 ಸಾಮಾನ್ಯ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಅವಧಿ: ಒಂದು ದಿನ

2. **ಹ್ಯೂಮನ್ ಸ್ಪೇಸ್ ಫ್ಲೈಟ್ ಎಕ್ಸ್ಪೋ – 2022**

   ಹ್ಯೂಮನ್ ಸ್ಪೇಸ್ ಫ್ಲೈಟ್ ಸೆಂಟರ್, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಮತ್ತು ತಾರಾಲಯ ಜಂಟಿಯಾಗಿ 2022ರ ಜುಲೈ 22ರಿಂದ 24ರವರೆಗೆ ತಾರಾಲಯದಲ್ಲಿ "ಅಮೃತ್ ಮಹೋತ್ಸವ" ದ ಅಂಗವಾಗಿ ಹ್ಯೂಮನ್ ಸ್ಪೇಸ್ ಫ್ಲೈಟ್ ಎಕ್ಸ್ಪೋ ಅನ್ನು ಆಯೋಜಿಸಿದ್ದವು. ಇದು ಭಾರತದ ಸ್ವಾತಂತ್ರ್ಯದ 75ನೇ ವರ್ಷಾಚರಣೆಯ ಸ್ಮರಣಾರ್ಥ ಬಾಹ್ಯಾಕಾಶ ವಿಷಯದ ಆಚರಣೆಯಾಗಿತ್ತು. ಇಸ್ರೋ ನಿರ್ಮಿಸಿದ 'ದಿ ಇಂಡಿಯನ್ ಸ್ಪೇಸ್ ಒಡಿಸ್ಸಿ- ಸರೌಂಡಿಂಗ್ ರಾಕೆಟ್ ಆಫ್ ಗಗನಯಾನ' ಪ್ರದರ್ಶನವನ್ನು ಸ್ಕೈ ಥಿಯೇಟರ್ ನಲ್ಲಿ ಪ್ರದರ್ಶಿಸಲಾಯಿತು. ಈ ಕಾರ್ಯಕ್ರಮದಲ್ಲಿ ಹಲವು ಚಟುವಟಿಕೆಗಳನ್ನು ನಡೆಸಲಾಯಿತು ಅವುಗಳೆಂದರೆ ಸ್ಪೇಸ್ಡ್ ಔಟ್, "ನೀವು ಗಗನಯಾತ್ರಿ ಆಗಬಹುದೇ, ಆರ್ ಯು (W)ರೈಟ್? , ಪೋಸ್ಟರ್ ಪ್ರಸ್ತುತಿ, ನಿಮ್ಮ ಸ್ವಂತ ಬಾಹ್ಯಾಕಾಶ ಆವಾಸವನ್ನು ನಿರ್ಮಿಸಿ, ಬಾಹ್ಯಾಕಾಶ ಯಾತ್ರಿಗಳ ಬ್ಯಾಗ್‌ನಲ್ಲಿ ಏನಿದೆ? , ಲೈವ್ ಉಪನ್ಯಾಸಗಳು ಮತ್ತು ಡೋಮ್ ವೀಡಿಯೊ, ವಿಜ್ಞಾನವು ವಿನೋದವನ್ನು ಸಂಯೋಜಿಸುತ್ತದೆ.



ಫಲಾನುಭವಿಗಳು : 23000 ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ; ಅವಧಿ – 3 ದಿನಗಳು

### 3. ಪಾರ್ಶ್ವ ಚಂದ್ರ ಗ್ರಹಣದ ವೀಕ್ಷಣೆ

2022 ರ ನವೆಂಬರ್ 8 ರಂದು ಸಂಜೆ ಆಕಾಶದಲ್ಲಿ ಪಾರ್ಶ್ವ ಚಂದ್ರಗ್ರಹಣವು ಸಂಭವಿಸಿತು. ಭಾರತ ಮತ್ತು ವಿಶ್ವದ ಹೆಚ್ಚಿನ ಭಾಗಗಳಲ್ಲಿ ಈ ಪಾರ್ಶ್ವ ಗ್ರಹಣ ಕಾಣದಿದ್ದರೂ, ವೈಜ್ಞಾನಿಕ ಮಾಹಿತಿಯನ್ನು ಸಾರ್ವಜನಿಕರಿಗೆ ತಿಳಿಸಲು ಈ ಕೆಳಗಿನ ವ್ಯವಸ್ಥೆಗಳನ್ನು ಮಾಡಲಾಗಿದೆಃ

- ಚಂದ್ರ ಗ್ರಹಣದ ಕುರಿತು ಉಪನ್ಯಾಸ
- ಚಂದ್ರ ಗ್ರಹಣವನ್ನು ಪ್ರಾತ್ಯಕ್ಷಿಕೆಯ ಸಹಾಯದೊಂದಿಗೆ ನಿರೂಪಣೆ
- ತಾರಾಲಯದ ಯೂಟ್ಯೂಬ್ ಚಾನಲ್‌ನಲ್ಲಿ ನೇರ ಪ್ರಸಾರ
- ಯೂಟ್ಯೂಬ್  ವೀಕ್ಷಕರ ಪ್ರಶ್ನೆಗಳಿಗೆ ಉತ್ತರಿಸುವ ವ್ಯವಸ್ಥೆ
- ತಾರಾಲಯದ ವಿಡಿಯೋ ವಾಲ್‌ನಲ್ಲಿ ಚಂದ್ರ ಗ್ರಹಣದ ಕುರಿತು ಪ್ರದರ್ಶನ



### 4. ಗ್ಲೋಬಲ್ ವಿ ಪ್ರಾಜೆಕ್ಟ್

ಬೆಂಗಳೂರಿನ ವಿಜ್ಞಾನ ಗ್ಯಾಲರಿಯು 2022 ರ ನವೆಂಬರ್ 9 ರಂದು ನಮ್ಮ ಆವರಣದಲ್ಲಿ "ಗ್ಲೋಬಲ್ ವಿ ಪ್ರಾಜೆಕ್ಟ್" ಎಂಬ ಪೋರ್ಟಲ್ ಅನ್ನು ಸ್ಥಾಪಿಸಿದೆ.

### 5. ತಾರಾಲಯದಲ್ಲಿ ರಾತ್ರಿ ಆಕಾಶ ವೀಕ್ಷಣೆ

ತಾರಾಲಯವು ಪ್ರತಿ ವರ್ಷ ನವೆಂಬರ್ ನಿಂದ ಫೆಬ್ರುವರಿ ವರೆಗೂ ರಾತ್ರಿಯ ಆಕಾಶ ವೀಕ್ಷಣಾ ಕಾರ್ಯಕ್ರಮಗಳನ್ನು ಆಯೋಜಿಸಲು ಪ್ರಾರಂಭಿಸಿದೆ. ಮೊದಲ ತಂಡವನ್ನು 2022 ರ ನವೆಂಬರ್ 17 ರಂದು ಸಂಜೆ 10 ರಿಂದ ಬೆಳಿಗ್ಗೆ 4.30 ರವರೆಗೆ ನಡೆಸಲಾಯಿತು. ಲಿಯೊನಿಡ್ ಮೀಟಿಯೊರ್ ಶವರ್ ವೀಕ್ಷಿಸುವುದು, ರಾತ್ರಿ ಆಕಾಶದ ಪರಿಚಯ ಮತ್ತು ಬರಿಗಣ್ಣಿನ ವೀಕ್ಷಣೆಗಳು, ಆಕಾಶ ಮಂದಿರದಲ್ಲಿ ಉಪನ್ಯಾಸಗಳನ್ನು ಕಾರ್ಯಕ್ರಮವು ಒಳಗೊಂಡಿತ್ತು. ಸಾರ್ವಜನಿಕರಿಂದ ದೊರೆತ ಉತ್ತಮ ಪ್ರತಿಕ್ರಿಯೆಯೊಂದಿಗೆ,

ಮತ್ತೊಂದು ತಂಡವನ್ನು 2022ರ ಡಿಸೆಂಬರ್ 13ರಂದು ಜೆಮಿನಿಡ್ಸ್ ಉಲ್ಕಾ ವೃಷ್ಟಿಯನ್ನು ವೀಕ್ಷಿಸಲು ನಡೆಸಲಾಯಿತು.



## 6. ವಿಜ್ಞಾನ ಪ್ರದರ್ಶನಗಳು

ಈ ಕೆಳಕಂಡ ಕಾರ್ಯಕ್ರಮಗಳಲ್ಲಿ ವಿಜ್ಞಾನ ಭಿತ್ತಿಚಿತ್ರಗಳು ಮತ್ತು ಮಾದರಿಗಳನ್ನು ಪ್ರದರ್ಶಿಸಲಾಯಿತು:

- 2022 ರ ಡಿಸೆಂಬರ್ 21 ರಿಂದ 27 ರವರೆಗೆ ಮೂಡುಬಿದಿರೆಯಲ್ಲಿ ನಡೆದ 'ವಿಜ್ಞಾನ ಮೇಳ'
- 2023 ರ ಜನವರಿ 18 ರಿಂದ 23 ರವರೆಗೆ ಮೈಸೂರಿನ ಶ್ರೀ ಕ್ಷೇತ್ರ ಸುತ್ತೂರು ಜಾತ್ರಾ ಮಹೋತ್ಸವ
- 2023 ರ ಜನವರಿ 27 ಮತ್ತು 28 ರಂದು ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯು ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ "ಸೈನ್ಸ್ ಎಕ್ಸ್ಪೋ – 2023"


**ಸಂಪರ್ಕ:**

ಆಡಳಿತಾಧಿಕಾರಿ
ಜವಾಹರಲಾಲ್ ನೆಹರು ತಾರಾಲಯ
ಶ್ರೀ ಟಿ. ಚೌಡಯ್ಯ ರಸ್ತೆ, ಹೈಗ್ರೌಂಡ್ಸ್, ಬೆಂಗಳೂರು-560001
ದೂರವಾಣಿ: 080-22379725,
ಇಮೇಲ್: taralaya89@gmail.com / info@taralaya.org

# ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ

ಮೂಡುಶೆಡ್ಡೆ, ವಾಮಂಜೂರು ಅಂಚೆ, ಮಂಗಳೂರು- 575028, ದಕ್ಷಿಣ ಕನ್ನಡ ಜಿಲ್ಲೆ

---

**ಪರಿಚಯ:**

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 08 ಶಾಸನ 2018 ದಿ:9.3.2018 ರಲ್ಲಿ ಹಿಂದಿನ ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಮತ್ತು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಎಂಬ 2 ಸೊಸೈಟಿಗಳನ್ನು ಒಟ್ಟುಗೂಡಿಸಿ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ರಚನೆ. ದಿನಾಂಕ 1.4.2021 ರಿಂದ ಕಾರ್ಯಾರಂಭಗೊಂಡಿದೆ. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಎಸ್‌ಟಿ 157 ಎಸ್‌ಟಿಎಸ್ 2017(ಪಿ) ದಿ:27.12.2019 ರಲ್ಲಿ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ನಿಯಮಗಳು 2019 ಹೊರಡಿಸಲಾಗಿದೆ. ಸರಕಾರವು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದಡಿ ಸಾಮಾನ್ಯ ಆಡಳಿತಾತ್ಮಕ ನಿಯಂತ್ರಣ ಮತ್ತು ಪರಿವೀಕ್ಷಣೆಯನ್ನು ಹೊರಡಿಸಿದೆ. ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ನೋಡಲ್ ಇಲಾಖೆಯಾಗಿದೆ.

**ಈ ಕೆಳಕಂಡ ಉದ್ದೇಶಗಳಿಗಾಗಿ ಸರ್ಕಾರದಿಂದ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ರಚನೆಯಾಗಿದೆ :**

1) ಪಶ್ಚಿಮ ಘಟ್ಟಗಳ ಮತ್ತು ಕರ್ನಾಟಕ ಕರಾವಳಿಯ ಜೀವವೈವಿಧ್ಯತೆ, ಪರಂಪರೆ ಮತ್ತು ಸಂಸ್ಕೃತಿಯ ಸಂರಕ್ಷಣೆ, ಜನಸಾಮಾನ್ಯರತ್ತ ವಿಜ್ಞಾನವನ್ನು ಕೊಂಡೊಯ್ಯುವುದು ಹಾಗೂ ಮೂಢನಂಬಿಕೆಗಳನ್ನು ನಿವಾರಿಸುವುದು. ಇದಕ್ಕಾಗಿ ಯೋಜನೆಗಳನ್ನು ಕೈಗೊಳ್ಳುವುದು.
೨) ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಬೆಳವಣಿಗೆಗಳನ್ನು ಯುವ ಜನಾಂಗಕ್ಕೆ ತಿಳಿಯಪಡಿಸುವುದು.
೩) ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ಸೃಜನಾತ್ಮಕ ಚಟುವಟಿಕೆಗಳನ್ನು ನಡೆಸುವುದು. ಇದಕ್ಕಾಗಿ ಬೇಕಾಗುವ ಎಲ್ಲಅನುಕೂಲತೆಗಳನ್ನು ಕಲ್ಪಿಸುವುದು.
೪) ಶೈಕ್ಷಣಿಕ ಕೇಂದ್ರವಾಗಿ ವಿಜ್ಞಾನ ಕೇಂದ್ರವನ್ನು ಬೆಳೆಸುವುದು ಮತ್ತು ರಾಷ್ಟ್ರೀಯ, ಅಂತರಾಷ್ಟ್ರೀಯ ಕೇಂದ್ರಗಳ ಸಂಪರ್ಕದಿಂದ ಸಮಾನಾಸ್ತಕರ ತಂಡ ರೂಪಿಸುವುದು.
೫) ವೈಜ್ಞಾನಿಕ ಮನೋಭಾವ ರೂಪಿಸುವ ವಾತಾವರಣ ಸೃಷ್ಟಿಸಲು ಮತ್ತು ವೈಜ್ಞಾನಿಕ ಸಾಕ್ಷರತೆಗೆ ಪ್ರೋತ್ಸಾಹ ನೀಡಲು ಸಂಪನ್ಮೂಲ ಕೇಂದ್ರವಾಗಿ ಬೆಳೆಸುವುದು.

**1) ಪಿಲಿಕುಳ ಜೈವಿಕ ಉದ್ಯಾನವನ:**

ಪಿಲಿಕುಳದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ಜೈವಿಕ ಉದ್ಯಾನವನ್ನು ೧೫೦ ಎಕ್ರೆ ಜಾಗದಲ್ಲಿ ಸ್ಥಾಪಿಸಲಾಗಿದೆ. ಕೇಂದ್ರ ಮೃಗಾಲಯ ಪ್ರಾಧಿಕಾರವು ಪಿಲಿಕುಳ ಜೈವಿಕ ಉದ್ಯಾನವನ್ನು ಬೃಹತ್ ಮೃಗಾಲಯವೆಂದು ಗುರುತಿಸಿದೆ. ಇಲ್ಲಿ ಪ್ರಾಣಿಗಳ ಆವರಣವನ್ನು ನೈಸರ್ಗಿಕ ಆವಾಸ ಸ್ಥಾನಗಳ ರೀತಿಯಲ್ಲಿ ಸ್ಥಾಪಿಸುವುದರ ಮೂಲಕ ಪ್ರವಾಸಿಗರಿಗೆ ವಿಶಿಷ್ಟ ಅನುಭವವನ್ನು ನೀಡಲಾಗುತ್ತಿದೆ. ಈ ಉದ್ಯಾನವು 120 ಪ್ರಭೇದಗಳಿಗೆ ಸೇರಿದ 1200ಕ್ಕೂ ಮಿಕ್ಕಿದ ವಿವಿಧ ಪ್ರಾಣಿ ಪಕ್ಷಿಗಳ ಆಶ್ರಯ ತಾಣವಾಗಿದೆ. ಸುಮಾರು 1200 ಕ್ಕೂ ಹೆಚ್ಚಿನ 120 ಪ್ರಭೇದದ ಪ್ರಾಣಿ, ಪಕ್ಷಿ, ಉರಗಗಳಿವೆ.

**2) ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ:**

ಕರ್ನಾಟಕ ಸರ್ಕಾರವು ವಿದ್ಯಾರ್ಥಿಗಳು, ಅಧ್ಯಾಪಕರು ಹಾಗೂ ಜನಸಾಮಾನ್ಯರಲ್ಲಿ ವೈಜ್ಞಾನಿಕ ಮನೋಭಾವವನ್ನು ಉತ್ತೇಜಿಸುವ ದೃಷ್ಟಿಯಿಂದ ಮತ್ತು ವಿಜ್ಞಾನ,

ತಂತ್ರಜ್ಞಾನದಲ್ಲಿ ಅರಿವು ಮೂಡಿಸಲು ಹಲವು ಕಾರ್ಯಕ್ರಮಗಳನ್ನು ಕೈಗೊಂಡಿದೆ. ಇದರ ಅಂಗವಾಗಿ ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯದ ಸಹಭಾಗಿತ್ವದೊಂದಿಗೆ ಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪನೆಗೊಂಡಿವೆ. ಮಂಗಳೂರಿನ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವೆಚ್ಚದ ಸಮಪಾಲು ನೀಡಿದ್ದು ವಿಜ್ಞಾನ ಕೇಂದ್ರವು ಅಕ್ಟೋಬರ್ 01, 2014ರಂದು ಉದ್ಘಾಟನೆಗೊಂಡು ಕಾರ್ಯಾಚರಿಸುತ್ತಿದೆ. ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು, ಕೇಂದ್ರದ ನಿರ್ವಹಣೆಗೆ ವಾರ್ಷಿಕ ಅನುದಾನವನ್ನು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್), ಬೆಂಗಳೂರು ಮೂಲಕ ನೀಡುತ್ತಲಿದೆ.

ಕರ್ನಾಟಕ ಸರ್ಕಾರವು ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್ ಮತ್ತು ಗಣಿತ ಕ್ಷೇತ್ರಗಳಲ್ಲಿ ಹೊಸ ಯೋಜನೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಪಿಲಿಕುಳದಲ್ಲಿ ರಾಜ್ಯದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಮೂಲಕ ರೂ.35.69 ಕೋಟಿಗಳ ವೆಚ್ಚದಲ್ಲಿ ಅತ್ಯಾಧುನಿಕ ತಾರಾಲಯವನ್ನು ನಿರ್ಮಿಸಲು ಅನುದಾನವನ್ನು ನೀಡಿದೆ. ಹಾಗೆ ಸ್ಥಾಪಿತವಾದ ಸ್ವಾಮಿ ವಿವೇಕಾನಂದ ತಾರಾಲಯದಲ್ಲಿ 18 ಮೀಟರ್ ನ್ಯಾನೋ ಸೀಮ್ ಡೋಮ್ ನ್ನು 15 ಡಿಗ್ರಿ ಕೋನದಲ್ಲಿ ಅಳವಡಿಸಲಾಗಿದ್ದು, ಪ್ರೇಕ್ಷಕರು ಥಿಯೇಟರ್ ನಲ್ಲಿ ಚಿತ್ರಗಳನ್ನು ವೀಕ್ಷಿಸುವಂತೆ ಪ್ರದರ್ಶನಗಳನ್ನು ನೋಡಬಹುದು. ದೇಶದ ಪ್ರಪ್ರಥಮ ಆಕ್ಟಿವ್ ೩ಡಿ, ೮ಕೆ, ಡಿಜಿಟಲ್ ಹಾಗೂ ಆಪ್ಟೋಮೆಕ್ಯಾನಿಕಲ್ (ಹೈಬ್ರಿಡ್) ಪ್ರೊಜೆಕ್ಷನ್ ಸಿಸ್ಟಂಗಳನ್ನೊಳಗೊಂಡ ಈ ತಾರಾಲಯದಲ್ಲಿ ಉತ್ಕೃಷ್ಟ ಗುಣಮಟ್ಟದ ಪ್ರದರ್ಶನಗಳನ್ನು ವೀಕ್ಷಿಸಬಹುದಾಗಿದೆ. ಸ್ಥಾಪಿತವಾದಂದಿನಿಂದ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರವು ಸಮಾನ ಮನಸ್ಕ ಸಂಸ್ಥೆಗಳ ಸಹಾಯ ಮತ್ತು ಸಹಯೋಗದೊಂದಿಗೆ ಹಲವಾರು ಕಾರ್ಯಕ್ರಮಗಳನ್ನು ಜಿಲ್ಲೆ ಹಾಗೂ ಹೊರಜಿಲ್ಲೆಗಳಲ್ಲಿ ನಡೆಸುತ್ತಾ ಬಂದಿದೆ. ವಿಜ್ಞಾನದಲ್ಲಿ ಅಭಿರುಚಿ ಮೂಡಿಸುವ ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳುವ ಸರ್ಕಾರಿ, ಸರ್ಕಾರೇತರ ಮತ್ತು ಕೈಗಾರಿಕಾ ಸಂಸ್ಥೆಗಳಿಗೆ ವಿಜ್ಞಾನ ಕೇಂದ್ರವು ಕೇಂದ್ರ ಬಿಂದುವಾಗಿದೆ.

**3) ಸಂಸ್ಕೃತಿ ಗ್ರಾಮ:**

ಅವಿಭಜಿತ ದ.ಕ. ಜಿಲ್ಲೆಯು ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿರುವ ಹಾಗೂ ಸಮೃದ್ಧ ಸಂಸ್ಕೃತಿ, ಪ್ರಾದೇಶಿಕ ವಿಶೇಷ ಸಾಂಪ್ರದಾಯಗಳನ್ನು ಹೊಂದಿದೆ. ಪಿಲಿಕುಳದಲ್ಲಿ 30 ಎಕರೆ ಸ್ಥಳವನ್ನು ಸಾಂಸ್ಕೃತಿಕ ವಲಯವನ್ನಾಗಿ ಗುರುತಿಸಿ ಸಂಸ್ಕೃತಿ, ಸಾಂಪ್ರದಾಯಗಳ ಮತ್ತು ಈ ಪ್ರದೇಶದ ವೃತ್ತಿಪರ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಿಕೊಂಡು ಬರಲಾಗುತ್ತಿದೆ.

**4) ಕುಶಲಕರ್ಮಿ ಗ್ರಾಮ :**

ದ.ಕ. ಜಿಲ್ಲೆಯು ಹಲವಾರು ಕರಕುಶಲ ಮತ್ತು ವೃತ್ತಿ ಕೌಶಲ್ಯದ ತವರೂರು. ಈ ವೃತ್ತಿಯನ್ನು ತಲತಲಾಂತರದಿಂದ ಸಂರಕ್ಷಿಸಿಕೊಂಡು ಬರಲಾಗಿದೆ. ಆದರೆ, ಬದಲಾದ ಸನ್ನಿವೇಶದಲ್ಲಿ ಹಲವಾರು ಕುಶಲಕರ್ಮಿಗಳು ಹಾಗೂ ವೃತ್ತಿ ಕೌಶಲ್ಯಗಾರರು ತಮ್ಮ ವೃತ್ತಿಯನ್ನು ಅನಿವಾರ್ಯವಾಗಿ ಬದಲಾಯಿಸಿದ್ದಾರೆ. ಇಂತಹ ಅಪಾಯಕಾರಿ ಬದಲಾವಣೆಯನ್ನು ತಡೆಯುವುದಕ್ಕೋಸ್ಕರ ಹಾಗೂ ಈ ಕರಕುಶಲ ವೃತ್ತಿಕೌಶಲ್ಯವನ್ನು ಸಜೀವವಾಗಿರಿಸಲು ಮಾದರಿ ಕರಕುಶಲ ಹಾಗೂ ವೃತ್ತಿಕೌಶಲ್ಯ ಗ್ರಾಮವನ್ನು ಸ್ಥಾಪಿಸಿ

ಅನೇಕ ಉತ್ಪನ್ನಗಳನ್ನು ಇದರಿಂದ ತಯಾರಿಸಿ ಮಾರಾಟ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ.

5) **ಪಿಲಿಕುಳ ಕೆರೆ ಮತ್ತು ಹೂದೋಟಗಳು**
ಪಿಲಿಕುಳದಲ್ಲಿ ನೈಸರ್ಗಿಕವಾಗಿರುವ ಕೆರೆಯನ್ನು 6 ಎಕ್ರೆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಇದು ಪ್ರವಾಸಿಗರನ್ನು ತನ್ನತ್ತ ಸೆಳೆಯಲು ಆಕರ್ಷಿತವಾಗಿದೆ. ಇದರಿಂದ ಸುತ್ತುಮುತ್ತಲಿನ ಪ್ರದೇಶದಲ್ಲಿ ಜಲಮರುಪೂರಣವಾಗಿದೆ. ಈ ಕೆರೆಯ ದಂಡೆಗಳನ್ನು ಅಭಿವೃದ್ಧಿಪಡಿಸಿ ಹೂದೋಟ ನಿರ್ಮಿಸಿ ದೋಣಿವಿಹಾರದ ವ್ಯವಸ್ಥೆಯನ್ನು ಮಾಡಲಾಗಿದೆ.

6) **ಪಶ್ಚಿಮ ಘಟ್ಟದ ಮೀನುಗಳ ಅಕ್ವೇರಿಯಂ**
ಕೇಂದ್ರ ಸರ್ಕಾರದ ಅನುದಾನದಿಂದ ಪಶ್ಚಿಮ ಘಟ್ಟದ ಮೀನುಗಳ ಅಕ್ವೇರಿಯನ್ನು ಸ್ಥಾಪಿಸಲಾಗಿದೆ. ಅದರಲ್ಲೂ ಅಳಿವಿನಂಚಿನಲ್ಲಿರುವ ಮೀನುಗಳ 27 ಪ್ರಬೇಧಗಳ ಮೀನುಗಳ ಸಂಕುಲದ ಅಕ್ವೇರಿಯಂನ್ನು ಸ್ಥಾಪಿಸಲಾಗಿದೆ.

7) **ಆರ್ಬೋರೇಟಂ/ಬೊಟಾನಿಕಲ್ ಮ್ಯೂಸಿಯಂ:**
ಪಿಲಿಕುಳದಲ್ಲಿ ಅಳಿವಿನಿಂಚಿನ ಸಸ್ಯಗಳ ಸಂರಕ್ಷಣೆಯ ಉದ್ದೇಶದಿಂದ ಆರ್ಬೋರೇಟಂ ನ್ನು ಸ್ಥಾಪಿಸಲಾಗಿದೆ. ಆರ್ಬೋರೇಟಂ ಸುಮಾರು 80 ಎಕರೆ ವಿಸ್ತಾರ ಪ್ರದೇಶದಲ್ಲಿ 236 ಪ್ರಬೇಧಗಳ 60,000 ಗಿಡಗಳನ್ನು ಬೆಳೆಸಲಾಗಿದೆ. ಔಷಧಿ ವನವು 10 ಎಕರೆ ಪ್ರದೇಶದಲ್ಲಿ ಸ್ಥಾಪಿಸಲಾಗಿದೆ. 350 ಪ್ರಬೇಧಗಳ ಔಷಧೀಯ ಸಸ್ಯಗಳನ್ನು ಬೇರೆ ಬೇರೆ ಯೋಜನೆಗಳಲ್ಲಿ ಬೆಳೆಸಲಾಗಿದೆ. ಕರ್ನಾಟಕ ಜೀವವೈವಿಧ್ಯ ಮಂಡಳಿಯ ಪ್ರಾಯೋಜಕತ್ವದಲ್ಲಿ ಬೊಟಾನಿಕಲ್ ಮ್ಯೂಸಿಯಂ ಮತ್ತು ಆರ್ಬೋರೇಟಂ ನ್ನು ಸೃಷ್ಟಿಸಲಾಗಿದೆ.

8) **ರೂರಲ್ ಹಾಥ್ ಮತ್ತು ಅರ್ಬನ್ ಹಾಥ್**
ಭಾರತ ದೇಶವು ಸಮೃದ್ಧ ಸಾಂಪ್ರದಾಯಿಕ ಕಲೆ, ಸಂಸ್ಕೃತಿ ಕರಕುಶಲ ವಸ್ತುಗಳ ತವರೂರು. ಅದನ್ನು ಸಂರಕ್ಷಿಸಲು ಹಾಗೂ ವೃತ್ತಿ ಕೆಲಸಗಾರರಿಗೆ ಪ್ರೋತ್ಸಾಹ ನೀಡಲು ಅರ್ಬನ್ ಹಾಥ್ ಯೋಜನೆಯಲ್ಲಿ ದೇಶದ ವಿವಿಧ ಭಾಗದಲ್ಲಿರುವ ಕರಕುಶಲಕರ್ಮಿಗಳನ್ನು ಆಹ್ವಾನಿಸಿ ಅವರ ಕರಕುಶಲ ವಸ್ತುಗಳನ್ನು ಪಿಲಿಕುಳದಲ್ಲಿ ಮಾರಾಟ ಮಾಡಿ ಉತ್ತಮ ದರ ದೊರಕಿಸಿಕೊಡುವ ಯೋಜನೆಯಾಗಿರುತ್ತದೆ. ಆ ಪ್ರಯುಕ್ತ ವಿವಿಧ ಮಳಿಗೆಗಳನ್ನು ಕರಕುಶಲ ವಸ್ತುಗಳು, ತಿಂಡಿ ತಿನಿಸುಗಳು ಮಾರಾಟಕ್ಕೆ ಲಭ್ಯವಾಗುವಂತೆ ಆಯೋಜಿಸಲಾಗಿದೆ.

**2022-23 ನೇ ಸಾಲಿನ ಕಾರ್ಯಕ್ರಮಗಳು:**

1) **ಸಂಸ್ಕೃತಿ ಗ್ರಾಮ:**

| ಕ್ರ. ಸಂ | ವಿವರ | ದಿನಾಂಕ | ಸ್ಥಳ | ಸಹಕಾರ | ವೆಚ್ಚ | ಭಾಗವಹಿಸಿದವರು |
|---|---|---|---|---|---|---|
| 1. | ಆಟಿ ಕೂಟ | 13.08.2022 | ಗುತ್ತು ಮನೆ, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಬ್ಯಾಂಕ್ ಆಫ್ ಬರೋಡ, ಯೂನಿಯನ್ | 2,45,772/- | ಸಾರ್ವಜನಿಕರು |

| | | | | | | |
|---|---|---|---|---|---|---|
| | | | | ಬ್ಯಾಂಕ್ ಆಫ್ ಇಂಡಿಯಾ | | |
| 2. | ಕಂಗೀಲು ಕುಣಿತ | 26.11.2022 | ಗುತ್ತು ಮನೆ, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 21,534/- | ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಾರ್ವಜನಿಕರು |




**2) ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ:**

**1. ವಿಜ್ಞಾನ ಕೇಂದ್ರಕ್ಕೊಂದು ಪುಟ್ಟ ಪರಮಾಣು ಗ್ಯಾಲರಿ**

ನ್ಯೂಕ್ಲಿಯರ್ ಪವರ್ ಕಾರ್ಪೊರೇಶನ್ ಆಫ್ ಇಂಡಿಯಾ (ಎನ್.ಪಿ.ಸಿ.ಐ.ಎಲ್.), ಮುಂಬಯಿ ಇವರು ಪರಮಾಣು ಸ್ಥಾವರಗಳ ವಿವರಗಳು, ಕಾರ್ಯನಿರ್ವಹಿಸುವ ರೀತಿ ಇತ್ಯಾದಿಗಳನ್ನು ತಿಳಿಸುವ ಗ್ಯಾಲರಿಯನ್ನು ಕೇಂದ್ರಕ್ಕೆ ನೀಡಿದ್ದಾರೆ. ಇದರಲ್ಲಿರುವ ಪ್ರಾತ್ಯಕ್ಷಿಕೆಗಳು, ವಿವರಗಳು ಕಾರ್ಯಕ್ರಮಗಳನ್ನು ನಡೆಸಲು ಸಹಕಾರಿ.



**2. ಶೂನ್ಯ ನೆರಳಿನ ಪ್ರಾತ್ಯಕ್ಷಿಕೆ**

ದಿನಾಂಕ 24.04.2022 ರಂದು 'ಶೂನ್ಯ ನೆರಳಿನ ದಿನ'ದ ವಿದ್ಯಮಾನದ ಬಗ್ಗೆ ದೇಶದ ಇತರ ತಾರಾಲಯ ಹಾಗೂ ಕೇಂದ್ರಗಳೊಡನೆ ಜಂಟಿಯಾಗಿ ಪ್ರಯೋಗ ಮತ್ತು ಪ್ರಾತ್ಯಕ್ಷಿಕೆಗಳನ್ನು ಆಸಕ್ತ ಸಂದರ್ಶಕರಿಗೆ ಏರ್ಪಡಿಸಲಾಗಿತ್ತು.

**3. ವಿಶ್ವ ಪರಿಸರ ದಿನಾಚರಣೆ**

ದಿನಾಂಕ 06.06.2022ರಂದು ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಒಂದು ದಿನದ ಕಾರ್ಯಕ್ರಮದಲ್ಲಿ ಪಿ. ಎ. ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಇಂದಿರಾ ನರ್ಸಿಂಗ್ ಕಾಲೇಜು, ಮಂಗಳೂರು ಇವುಗಳ ಸುಮಾರು 150 ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಭಾಗವಹಿಸಿದ್ದರು. 'ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆ' ಬಗ್ಗೆ ಉಪನ್ಯಾಸದೊಂದಿಗೆ ಗಿಡ ನೆಡುವ ಕಾರ್ಯಕ್ರಮ ನಡೆಯಿತು.



4. **ಅಂತಾರಾಷ್ಟ್ರೀಯ 'ಕ್ಷುದ್ರಗ್ರಹ' ದಿನ**

ಜೂನ್ 30,2022ರಂದು ನಗರದ ಸರಕಾರಿ ಶಿಕ್ಷಕ ಶಿಕ್ಷಣ ಕಾಲೇಜಿನಲ್ಲಿ ದಿನದ ಇತಿಹಾಸ, ಕ್ಷುದ್ರಗ್ರಹಗಳ ರಚನೆ ಮತ್ತು ಮಹತ್ವ, ತಂದೊಡ್ಡಬಹುದಾದ ಅಪಾಯಗಳು, ಉಪಗ್ರಹಾಧಾರಿತ ಪ್ರಯೋಗಗಳ ಕುರಿತು ವಿಶೇಷ ಉಪನ್ಯಾಸವನ್ನು ಆಯೋಜಿಸಲಾಗಿತ್ತು. ಸುಮಾರು 200 ವಿದ್ಯಾರ್ಥಿ -ಶಿಕ್ಷಕರು ಅಧ್ಯಾಪಕರೊಡನೆ ಭಾಗವಹಿಸಿದ್ದರು.

5. **ಅಂತಾರಾಷ್ಟ್ರೀಯ ಚಂದ್ರ ದಿನಾಚರಣೆ**

ಪ್ರಥಮ ಅಂತಾರಾಷ್ಟ್ರೀಯ ಚಂದ್ರ ದಿನಾಚರಣೆಯು ಇಸ್ರೋ ಮತ್ತು ಜವಾಹರ್ ಲಾಲ್ ನೆಹರು ತಾರಾಲಯದ ಸಹಯೋಗದೊಂದಿಗೆ ನಡೆಯಿತು. ಕಿಟ್‌ಗಳನ್ನು ಉಪಯೋಗಿಸಿ ಚಂದ್ರನ ಬಗ್ಗೆ ವಿವರಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಯಿತು. ತಾರಾಲಯದಲ್ಲಿ 'ದ ಮೂನ್' ಎಂಬ ಪ್ರದರ್ಶನವನ್ನು ಸುಮಾರು 170 ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಿಗೆ ಏರ್ಪಡಿಸಲಾಗಿತ್ತು.



6. **ಎನ್‌ಪಿಸಿಐಎಲ್ ಡಿ.ಎ.ಇ. - ಐಕಾನಿಕ್ ವೀಕ್ ಆಚರಣೆ – 2022**

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಪರಮಾಣು ಶಕ್ತಿಯ ಬಗ್ಗೆ ಅರಿವು ಮೂಡಿಸಲು 'ನ್ಯೂಕ್ಲಿಯರ್ ಪವರ್ ಕಾರ್ಪೊರೇಶನ್ ಆಫ್ ಇಂಡಿಯಾ', ಮುಂಬಯಿ ಪ್ರಾಯೋಜಿತ ಉಪನ್ಯಾಸ ಮತ್ತು ವಿವಿಧ ಸ್ಪರ್ಧೆಗಳನ್ನು ವಿದ್ಯಾರ್ಥಿಗಳಿಗೆ ದಿನಾಂಕ 24.08.2022 ಮತ್ತು 25.08.2022ರಂದು ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಬಹುಮಾನ ವಿಜೇತರಿಗೆ ಸ್ಮರಣಿಕೆ ಮತ್ತು ಪ್ರಶಂಸಾ ಪತ್ರ ನೀಡಿ ಗೌರವಿಸಲಾಯಿತು. 25.08.2022ರಂದು ಪ್ರಥಮ ದರ್ಜೆ ಕಾಲೇಜುಗಳ ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಪರಮಾಣು ಶಕ್ತಿ ಮತ್ತು ಅಣು ವಿದ್ಯುತ್ ಸ್ಥಾವರಗಳ ಕುರಿತು ಕೈಗಾದ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಹಾಗೂ ಸ್ಪರ್ಧೆಗಳು ನಡೆದವು. ಭಾಗವಹಿಸಿದ್ದವರ ಸಂಖ್ಯೆ ಸುಮಾರು 500.



## 7. ಸ್ವಚ್ಛ ಕರಾವಳಿ-ಸುರಕ್ಷಿತ ಸಾಗರ – ವಿಶೇಷ ಜಾಗೃತಿ ಕಾರ್ಯಕ್ರಮ

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ನವದೆಹಲಿಯ 'ವಿಜ್ಞಾನ ಪ್ರಸಾರ್' ಪ್ರಾಯೋಜಕತ್ವದಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು ಹಾಗೂ ಕುತೂಹಲಿ ಸ್ಕೋಪ್, ಮೈಸೂರು ಇವರ ಸಹಯೋಗದೊಂದಿಗೆ ವಿಜ್ಞಾನ ಕೇಂದ್ರವು 'ಸ್ವಚ್ಛ ಕರಾವಳಿ-ಸುರಕ್ಷಿತ ಸಾಗರ' ಎಂಬ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಮೊದಲ ಹಂತದಲ್ಲಿ ದ. ಕ. ಹಾಗೂ ಉಡುಪಿ ಜಿಲ್ಲೆಯ ಹತ್ತು ಕೇಂದ್ರಗಳಲ್ಲಿ ಪ್ರಥಮ ದರ್ಜೆ ಕಾಲೇಜು ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ವಿಷಯದ ಬಗ್ಗೆ ತಜ್ಞರಿಂದ ಉಪನ್ಯಾಸ ಹಾಗೂ ಕಡಲತೀರ ಸ್ವಚ್ಛತಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಕೊನೆಯ ಹಂತದ ಎರಡು ದಿನದ ಕಾರ್ಯಕ್ರಮದಲ್ಲಿ ಕೇಂದ್ರ ವಿಷಯದ ಬಗ್ಗೆ ವಿದ್ಯಾರ್ಥಿಗಳಿಗೆ ಸ್ಪರ್ಧೆಗಳು ಮತ್ತು ಉಪನ್ಯಾಸಗಳನ್ನು ಹಮ್ಮಿಕೊಳ್ಳಲಾಗಿತ್ತು. ಒಟ್ಟು ಭಾಗವಹಿಸಿದವರ ಸಂಖ್ಯೆ ಸುಮಾರು 2500. ಕಾರ್ಯಕ್ರಮದ ಯಶಸ್ಸಿಗೆ ವಿವಿಧ ಸಂಘ ಸಂಸ್ಥೆಗಳು, ಕೋಸ್ಟ್ ಗಾರ್ಡ್ ಮತ್ತು ವಿಶ್ವವಿದ್ಯಾಲಯಗಳು ತಮ್ಮ ಸಹಕಾರ ನೀಡಿದರು. 'ವಿಜ್ಞಾನ ಪ್ರಸಾರ್' ಕಾರ್ಯಕ್ರಮದ ವಿನೂತನ ರೀತಿಯ ಆಯೋಜನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.





## 8. ವಿಷುವತ್ ಸಂಕ್ರಾಂತಿ - ಪ್ರಯೋಗಗಳು

ವಿಷುವತ್ ಸಂಕ್ರಾಂತಿಯ ದಿನದ ಸಂಬಂಧ ಪ್ರಯೋಗಗಳ ಮೂಲಕ ಹಲವು ಖಗೋಳ ಸಂಬಂಧಿ ವಿಷಯಗಳನ್ನು ತಿಳಿಯಲು ಸುಮಾರು 100 ಆಸಕ್ತ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಇತರ ಸಂದರ್ಶಕರು ಭಾಗವಹಿಸಿದರು. ಉಪಕರಣಗಳ ಮೂಲಕ ದತ್ತಾಂಶಗಳನ್ನು ಸಂಗ್ರಹಿಸಿ ಬೇಕಾದ ಲೆಕ್ಕಾಚಾರಗಳನ್ನು ಮಾಡಿ ವಿವರಗಳನ್ನು ತಿಳಿದುಕೊಂಡರು.

## 9. ಗುರುಗ್ರಹದ ವೀಕ್ಷಣೆ

ದಿನಾಂಕ 29.09.2022ರಂದು ಭೂಮಿಗೆ ಆಗ ಅತ್ಯಂತ ಸನಿಹದಲ್ಲಿದ್ದ ಗುರು ಗ್ರಹವನ್ನು ದೂರದರ್ಶಕಗಳ ಮೂಲಕ ವೀಕ್ಷಿಸಲು ವ್ಯವಸ್ಥೆ ಮಾಡಲಾಗಿತ್ತು. ಆಗಮಿಸಿದವರಿಗೆ ಸಂದರ್ಭದ ವಿಶೇಷತೆಯನ್ನು ವಿವರಿಸಿ ಗುರುಗ್ರಹದ ಜತೆಗೆ ಶನಿಗ್ರಹ, ಪ್ರಮುಖ ನಕ್ಷತ್ರಗಳ ಹಾಗೂ ನಕ್ಷತ್ರ ಪುಂಜಗಳ ಬಗ್ಗೆ ವಿವರಿಸಲಾಯಿತು.



**10. ಅಂತರಿಕ್ಷ ಸಪ್ತಾಹ ಆಚರಣೆ**

ಅಕ್ಟೋಬರ್ 07-08ರಂದು ಇಸ್ರೋ ಇವರ ಸಹಯೋಗದಲ್ಲಿ ಬಿ.ಎಡ್ ಮತ್ತು ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಗೆ ಇಸ್ರೋ ವಿಜ್ಞಾನಿಗಳಿಂದ ಎರಡು ದಿನಗಳ ಉಪನ್ಯಾಸಗಳು, ರಸಪ್ರಶ್ನೆ ಹಾಗೂ ತಾರಾಲಯ ಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಗಿತ್ತು.

**11. ಸೂರ್ಯ ಗ್ರಹಣ ವೀಕ್ಷಣೆ**

ದಿನಾಂಕ 25.10.2022ರಂದು (ಮಂಗಳವಾರ) ಪಾರ್ಶ್ವ ಸೂರ್ಯ ಗ್ರಹಣದ ವೀಕ್ಷಣಾ ಕಾರ್ಯಕ್ರಮವನ್ನು ಪಣಂಬೂರು ಕಡಲ ತೀರದಲ್ಲಿ ಆಯೋಜಿಸಲಾಗಿತ್ತು. ಗ್ರಹಣವನ್ನು ವೀಕ್ಷಿಸಲೆಂದೇ ತಯಾರಿಸಿದ ಸೌರ ಕನ್ನಡಕಗಳು, ಪಿನ್ ಹೋಲ್ ಪ್ರೊಜೆಕ್ಷನ್ ಮತ್ತು ಸೋಲಾರ್ ಫಿಲ್ಟರ್ ಅಳವಡಿಸಿದ ದೂರದರ್ಶಕಗಳ ಮೂಲಕ ಸೂರ್ಯಗ್ರಹಣವನ್ನು ಸುರಕ್ಷಿತವಾಗಿ ಕಣ್ತುಂಬಿಕೊಳ್ಳಲು ವ್ಯವಸ್ಥೆಯನ್ನು ಮಾಡಲಾಗಿತ್ತು. ಸುಮಾರು 800 ಆಸಕ್ತ ಸಾರ್ವಜನಿಕರು ಭಾಗವಹಿಸಿದ್ದರು.



**12. ಚಂದ್ರ ಗ್ರಹಣ ವೀಕ್ಷಣೆ**

ದಿನಾಂಕ 08.11.2022ರಂದು ಚಂದ್ರ ಗ್ರಹಣ ವೀಕ್ಷಣೆ ವ್ಯವಸ್ಥೆಗಳನ್ನು ಮಾಡಿದ್ದರೂ ಮೋಡ ಕವಿದ ವಾತಾವರಣದಿಂದ ವೀಕ್ಷಣೆ ಸಾಧ್ಯವಾಗಲಿಲ್ಲ. ಸಂದರ್ಶಕರಿಗೆ ಗುರು, ಶನಿ ಹಾಗೂ ಪೂರ್ಣ ಚಂದ್ರ ವೀಕ್ಷಣೆ ಹಾಗೂ ವಿವರಗಳನ್ನು ನೀಡಲಾಯಿತು.





### 13. ‘ಅಟಲ್ ಟಿಂಕರಿಂಗ್ ಲ್ಯಾಬ್’ ಕಾರ್ಯಾಗಾರ

ದಿನಾಂಕ 18.11.2022ರಂದು ದ. ಕ. ಜಿಲ್ಲೆಯ ‘ಅಟಲ್ ಟಿಂಕರಿಂಗ್ ಲ್ಯಾಬ್’ನ ಶಾಲೆಗಳ ಅಧ್ಯಾಪಕರಿಗೆ ಮತ್ತು ವಿದ್ಯಾರ್ಥಿಗಳಿಗೆ ‘ರಾಕೆಟ್ ಮತ್ತು ಉಪಗ್ರಹಗಳು’ ಎಂಬ ವಿಷಯದ ಮೇಲೆ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಇಸ್ರೋ ವಿಜ್ಞಾನಿಗಳಿಂದ ವಿಶೇಷ ಉಪನ್ಯಾಸ, ಪ್ರಶ್ನೋತ್ತರ ಕಾರ್ಯಕ್ರಮ ಮತ್ತು ದೂರದರ್ಶಕಗಳ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಲಾಗಿತ್ತು. ಭಾಗವಹಿಸಿದ ಸುಮಾರು 200 ವಿದ್ಯಾರ್ಥಿಗಳಿಗೆ ತಾರಾಲಯದಲ್ಲಿ ‘ದ ಮೂನ್’ ಎಂಬ ಪ್ರದರ್ಶನ ಇತ್ತು.




### 14. ಗಣಿತ ಕಾರ್ಯಾಗಾರ

ಅಕ್ಷರ ಫೌಂಡೇಶನ್‌ನ ಗಣಿತ ಕಿಟ್ ಉಪಯೋಗಿಸುವ ಬಗ್ಗೆ ಕೇಂದ್ರವು ಡಯಟ್ ಸಹಯೋಗದಲ್ಲಿ ದಿನಾಂಕ 02.12.2022 ರಂದು ಬಂಟ್ವಾಳ ವಲಯದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಕಾರ್ಯಾಗಾರ ನಡೆಸಲು ನೆರವು ನೀಡಿತು.

### 15. ವಿಶೇಷ ಉಪನ್ಯಾಸ

ದಿನಾಂಕ 13.12.2022ರಂದು ಬೀದರ್‌ನ ಬಸವತೀರ್ಥ ವಿದ್ಯಾಪೀಠ ಪ್ರೌಢ ಶಾಲೆಯಲ್ಲಿ ಸುಮಾರು 300 ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರೊಂದಿಗೆ ಖಗೋಳಶಾಸ್ತ್ರ ಕುರಿತು ಕೇಂದ್ರದ ಕ್ಯುರೇಟರ್ ಶ್ರೀ ಜಗನ್ನಾಥ್ ವಿಶೇಷ ಉಪನ್ಯಾಸ ನೀಡಿ ವಿದ್ಯಾರ್ಥಿಗಳ ಜತೆ ಸಂವಾದ ನಡೆಸಿದರು.




### 16. ಅಂತಾರಾಷ್ಟ್ರೀಯ ಜಂಬೂರಿ

ದಿನಾಂಕ 21.12.2022 ರಿಂದ 27.12.2022 ರವರೆಗೆ ನಡೆದ ಅಂತಾರಾಷ್ಟ್ರೀಯ ಜಂಬೂರಿ ಕಾರ್ಯಕ್ರಮದಲ್ಲಿ ವಿಜ್ಞಾನ ವಸ್ತುಪ್ರದರ್ಶನ ಆಯೋಜನೆಯಲ್ಲಿ ಕೇಂದ್ರದ ವತಿಯಿಂದ ಮಾರ್ಗದರ್ಶನ ಹಾಗೂ ಸಹಕಾರ ನೀಡಲಾಯಿತು ಹಾಗೂ ಭಾಗವಹಿಸಿದ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಕೇಂದ್ರದ ಸಂದರ್ಶನಕ್ಕೆ ಅನುವುಮಾಡಿಕೊಡಲಾಯಿತು.

**17. ವಿಜ್ಞಾನ ಪ್ರಾತ್ಯಕ್ಷಿಕೆ ಹಾಗೂ ರಾತ್ರಿ ಆಕಾಶ ವೀಕ್ಷಣ**

ದಿನಾಂಕ 05.01.2023 ರಂದು ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳಿಗೆ ಕೇಂದ್ರದಲ್ಲಿ ವಿಜ್ಞಾನ ಪ್ರಾತ್ಯಕ್ಷಿಕೆ ಹಾಗೂ ರಾತ್ರಿ ಆಕಾಶ ವೀಕ್ಷಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.





**3. ಜೈವಿಕ ಉದ್ಯಾನವನ:**

| ಕ್ರ. ಸಂ. | ಕಾರ್ಯಕ್ರಮ | ದಿನಾಂಕ | ಸ್ಥಳ | ಭಾಗವಹಿಸಿದವರ ಸಂಖ್ಯೆ | ಭಾಗವಹಿಸಿದವರು |
|---|---|---|---|---|---|
| 1 | ಭೂ ದಿನ | 22.04.2022 | ಪಿಲಿಕುಳ ಜೈವಿಕ ಉದ್ಯಾನವನ | 80 | ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು |
| 2 | ವಿಶ್ವ ಜೇನು ದಿನ | 20.05.2022 | ಪಿಲಿಕುಳ ಜೈವಿಕ ಉದ್ಯಾನವನ | 250 | ಸಾರ್ವಜನಿಕರು |
| 3 | ಜೈವಿಕ ವೈವಿಧ್ಯತೆಯ ಅಂತರಾಷ್ಟ್ರೀಯ ದಿನ | 22.05.2022 | ಪಿಲಿಕುಳ ಜೈವಿಕ ಉದ್ಯಾನವನ | 200 | ಸಾರ್ವಜನಿಕರು |
| 4 | ಬರ್ಡ್ ಹೌಸ್ ಮೇಕಿಂಗ್ | ಮೇ 2022 | ಪಿಲಿಕುಳ ಜೈವಿಕ ಉದ್ಯಾನವನ | 500 | ಸಾರ್ವಜನಿಕರು |
| 5 | ವಿಶ್ವ ಪರಿಸರ ದಿನ | 05.06.2022 | ಪಿಲಿಕುಳ ಜೈವಿಕ ಉದ್ಯಾನವನ | 150 | ಸಾರ್ವಜನಿಕರು |
| 6 | ಅಂತರಾಷ್ಟ್ರೀಯ ಹುಲಿ ದಿನ | 29.07.2022 | ಪಿಲಿಕುಳ ಜೈವಿಕ ಉದ್ಯಾನವನ | 150 | ವಿದ್ಯಾರ್ಥಿಗಳು |

**ಸಂಪರ್ಕ:**

ನಿರ್ದೇಶಕರು
ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ
ಮೂಡುಶಡ್ಡೆ, ವಾಮಂಜೂರು ಅಂಚೆ, ಮಂಗಳೂರು
ದೂರವಾಣಿ:9880799284
ಇಮೇಲ್:pilikula96@gmail.com

# ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ

ಕರ್ನಾಟಕ ವಿಶ್ವವಿದ್ಯಾಲಯ ಆವರಣ, ಧಾರವಾಡ

---

**ಪರಿಚಯ:**

ರಾಜ್ಯ ಸರಕಾರವು 2003 ರ ಆಯವ್ಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಸುಮಾರು 11 ಎಕರೆ ಜಾಗದಲ್ಲಿ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪನೆ ಮಾಡಲು ಘೋಷಣೆ ಮಾಡಿತು. ಈ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಕೇಂದ್ರ ಸರಕಾರದ ಸಂಸ್ಕೃತಿ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೀಯ ವಿಜ್ಞಾನ ಮತ್ತು ವಸ್ತು ಸಂಗ್ರಹಾಲಯಗಳ ಪರಿಷತ್ತು (ಎನ್.ಸಿ.ಎಸ್.ಎಂ), ಕೋಲ್ಕತ್ತಾ ಹಾಗೂ ಕರ್ನಾಟಕ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಹಯೋಗ ಹಾಗೂ ಸಮಪ್ರಮಾಣದ ಅನುದಾನದೊಂದಿಗೆ ನಿರ್ಮಿಸಲಾಗಿದೆ.

ಕೇಂದ್ರವು ದಿನಾಂಕ 27.02.2012 ರಂದು ಉದ್ಘಾಟನೆಗೊಂಡಿದ್ದು 4000 ಚದರ ಮೀಟರ್ ವಿಸ್ತೀರ್ಣದಲ್ಲಿ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಲಾಗಿದೆ. ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರವು ಪ್ರಖ್ಯಾತ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿದೆ. ಪ್ರತಿ ವರ್ಷ ಸುಮಾರು 90000 ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಕೇಂದ್ರವನ್ನು ವೀಕ್ಷಣೆ ಮಾಡುತ್ತಿದ್ದು ಈ ವಿಜ್ಞಾನ ಕೇಂದ್ರವು ಎಳೆಯ ಮಕ್ಕಳನ್ನು, ಯುವಕರನ್ನು ಮತ್ತು ವಯಸ್ಕರನ್ನು ವಿಜ್ಞಾನ ಚಟುವಟಿಕೆಗಳ ಮೂಲಕ ತನ್ನತ್ತ ಆಕರ್ಷಿಸುವ ತಾಣವಾಗಿದೆ. ಈ ವಿಜ್ಞಾನ ಕೇಂದ್ರವನ್ನು ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಾಯತ್ತ ಸಂಸ್ಥೆಯಾದ ರಾಷ್ಟ್ರೀಯ ವಿಜ್ಞಾನ ವಸ್ತು ಸಂಗ್ರಹಾಲಯಗಳ ಪರಿಷತ್ತು, ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದೆ.

1. **ಶೂನ್ಯ ನೆರಳು ದಿನಾಚರಣೆ**

   ದಿನಾಂಕ 25.04.2022 ರಂದು ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ವರ್ಷದ ಮೊದಲ 'ಶೂನ್ಯ ನೆರಳು ದಿನ'ದ ಪ್ರಾತ್ಯಕ್ಷಿಕೆ ನಡೆಯಿತು. ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಅಳವಡಿಸಿದ್ದ ಕಂಬದಲ್ಲಿ ಮಧ್ಯಾಹ್ನ 12.19ಕ್ಕೆ ನೆರಳು ಕಾಣದಾಯಿತು


ಮಾಯವಾದ ನೆರಳು: ಚಕಿತರಾದ ವಿದ್ಯಾರ್ಥಿಗಳು!



## 2. ಸೈಂಟಿಫಿಕ್ ಸ್ಪಾರ್ಕ-2022

ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಎಪ್ರಿಲ್ ಹಾಗೂ ಮೇ 2022 ತಿಂಗಳಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸಾಮಾನ್ಯ ವಿಜ್ಞಾನ (ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಗಣಿತ, ಖಗೋಳಶಾಸ್ತ್ರ) ಕುರಿತು ೧೦ ದಿನಗಳ (Hobby classes) ಪ್ರಯೋಗಾಧಾರಿತ ತರಗತಿಗಳನ್ನು ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ನಡೆಸಲಾಯಿತು.


ಧಾರವಾಡದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಪ್ರೊ. ಬಿ.ಜಿ.ಮೂಲಿಮನಿ ಮಾತನಾಡಿದರು. ಡಾ. ವೀರಣ್ಣ ಡಿ. ಬೋಳಿಶೆಟ್ಟಿ, ಪ್ರೊ. ವಿಜಯಕುಮಾರ ಗಿಡ್ನವರ ಇದ್ದಾರೆ

ಪ್ರಶ್ನೆ ಕೇಳುವ ಗುಣ ಬೆಳೆಸಿಕೊಳ್ಳಲು ಸಲಹೆ

ಪ್ರಜಾವಾಣಿ 27/04/2022

ಪ್ರಜಾವಾಣಿ ವಾರ್ತೆ

ಧಾರವಾಡ: 'ವಿಜ್ಞಾನ ಎಂದರೆ ಕೇವಲ ಪ್ರಯೋಗಗಳನ್ನು ಮಾಡುವುದಲ್ಲ, ಬದಲಿಗೆ ಯಾವುದೇ ವಿಷಯದ ಬಗ್ಗೆ ವೈಜ್ಞಾನಿಕವಾಗಿ ಅವಲೋಕಿಸಿ ಅದಕ್ಕೆ ಪರಿಹಾರ ಕಂಡುಕೊಳ್ಳುವುದಾಗಿದೆ' ಎಂದು ವಿಶ್ರಾಂತ ಕುಲಪತಿ ಡಾ. ಬಿ.ಜಿ.ಮೂಲಿಮನಿ ಹೇಳಿದರು.

ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರವು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಮಂಗಳವಾರ ಆಯೋಜಿಸಿದ್ದ ಸೈಂಟಿಫಿಕ್ ಸ್ಪಾರ್ಕ್ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ವಿದ್ಯಾರ್ಥಿಗಳು ಪ್ರಶ್ನೆ ಕೇಳುವ ಮನೋಭಾವ ಬೆಳೆಸಿಕೊಂಡಾಗ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಈ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಆಲೋಚನಾ ಮಟ್ಟ ಹೆಚ್ಚಿಸಲು ಸಹಕಾರಿಯಾಗುತ್ತದೆ. ಹೊಸ ಆವಿಷ್ಕಾರದೊಂದಿಗೆ ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು' ಎಂದರು.

ವಿಜ್ಞಾನ ಕೇಂದ್ರದ ನಿರ್ದೇಶಕ ಡಾ. ವೀರಣ್ಣ ಡಿ. ಬೋಳಿಶೆಟ್ಟಿ ಮಾತನಾಡಿ, 'ಮನೆಯಲ್ಲೇ ಸುಲಭವಾಗಿ ಮತ್ತು ಕಡಿಮೆ ವೆಚ್ಚದಲ್ಲಿ ಸಿಗುವಂತಹ ವಸ್ತುಗಳನ್ನು ಉಪಯೋಗಿಸಿ ವಿಜ್ಞಾನ ಮತ್ತು ಗಣಿತ ಪ್ರಯೋಗಗಳನ್ನು ಮಾಡಲು ಈ ಪ್ರಯೋಗಾಧಾರಿತ ತರಗತಿಗಳು ಸಹಕಾರಿಯಾಗುತ್ತದೆ' ಎಂದು ಹೇಳಿದರು.

ಪ್ರೊ. ವಿಜಯಕುಮಾರ ಗಿಡ್ನವರ, ಸಿ.ಎಫ್.ಚಂಡೂರ ಇದ್ದರು.

ಎಸ್‌ಡಿಎಂ ಕಾಲೇಜಿನಲ್ಲಿ ಸಂಜೆ ಕ್ಲಿನಿಕ್



## 3. ಡಾ.ಎಚ್.ನರಸಿಂಹಯ್ಯ ನವರ 102ನೇ ಜನ್ಮದಿನಾಚರಣೆ

ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು ಇವುಗಳ ಸಹಯೋಗದಲ್ಲಿ ದಿನಾಂಕ ೦೬.೦೬.೨೦೨೨ ರಂದು ಡಾ.ಎಚ್.ನರಸಿಂಹಯ್ಯ ನವರ ೧೦೨ನೇ ಜನ್ಮದಿನಾಚರಣೆಯ ಪ್ರಯುಕ್ತ ಉಪನ್ಯಾಸ ಮತ್ತು ವಿಜ್ಞಾನ ಪ್ರದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕೇಂದ್ರದ ಶೈಕ್ಷಣಿಕ ಸಹಾಯಕರಾದ ಶ್ರೀಮತಿ ವಿಶಾಲಾಕ್ಷಿ ಎಸ್.ಜೆ ಡಾ.ಎಚ್.ನರಸಿಂಹಯ್ಯನವರ ಕುರಿತು ಉಪನ್ಯಾಸ ನೀಡಿ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಲು ಮತ್ತು ಡಾ.ಎಚ್.ಎನ್. ಅವರ ಹೋರಾಟದ ಹಾದಿಯನ್ನು ಸ್ಫೂರ್ತಿಯಾಗಿಸಿಕೊಳ್ಳುವಂತೆ ತಿಳಿಸಿದರು. ಶ್ರೀ ಚಂದ್ರಕಾಂತ ಎಫ್ ಚಂಡೂರವರು ವಿದ್ಯಾರ್ಥಿಗಳಿಗೆ ವಿಜ್ಞಾನ ಪ್ರದರ್ಶನವನ್ನು ತೋರಿಸಿ, ಮೂಢನಂಬಿಕೆಗಳನ್ನು ಹೋಗಲಾಡಿಸುವ ಕುರಿತಾದ ಮಾಹಿತಿಯನ್ನುನೀಡಿದರು.





## 4. ಪರಿಸರ ದಿನಾಚರಣೆ 2022

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಕರ್ನಾಟಕ ಸರಕಾರ, ಬೆಂಗಳೂರು ಹಾಗೂ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸಹಯೋಗದಲ್ಲಿ

ಪ್ರೌಢಶಾಲಾ ಮಕ್ಕಳಿಗಾಗಿ ಪರಿಸರ ದಿನಾಚರಣೆ ನಿಮಿತ್ಯ ‘ಪ್ರಕೃತಿಯೊಂದಿಗೆ ಮಾನವನ ಸಾಮರಸ್ಯ ಹಾಗೂ ಸುಸ್ಥಿರ ಬದುಕು’ ವಿಷಯದ ಕುರಿತು ಚಿತ್ರಕಲೆ ಸ್ಪರ್ಧೆಯನ್ನು ಹಾಗೂ ಡಾ. ಕೆ. ಕೊಟ್ರೇಶ, ಪ್ರಾಧ್ಯಾಪಕರು ಸಸ್ಯಶಾಸ್ತ್ರ, ವಿಭಾಗ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ ಇವರಿಂದ ದಿನಾಂಕ ೦೫.೦೬.೨೦೨೨ ರಂದು ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.




**5. “ಅಂತಾರಾಷ್ಟ್ರೀಯ ಚಂದ್ರ ದಿನಾಚರಣೆ”**

ಪ್ರಪ್ರಥಮ ಬಾರಿಗೆ ಜುಲೈ ೨೦, ೨೦೨೨ ರಂದು “ಅಂತಾರಾಷ್ಟ್ರೀಯ ಚಂದ್ರ ದಿನಾಚರಣೆ” ಯನ್ನು ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. ಇದರ ಅಂಗವಾಗಿ ಧಾರವಾಡ ವಿಜ್ಞಾನ ಕೇಂದ್ರವು, ಬೆಂಗಳೂರಿನ ಜವಾಹರಲಾಲ್ ನೆಹರು ತಾರಾಲಯ ಹಾಗೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರ, ಇವರ ಸಹಯೋಗದೊಂದಿಗೆ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ‘ಚಟುವಟಿಕೆಗಳಲ್ಲಿ ಚಂದ್ರ’ ಎಂಬ ಕಮ್ಮಟವನ್ನು ಬೆಳಿಗ್ಗೆ ೧೧ ರಿಂದ ಆಯೋಜಿಸಲಾಗಿತ್ತು. ಆನ್‌ಲೈನ್ ಮೂಲಕ ಕಾರ್ಯಕ್ರಮವನ್ನು ಇಸ್ರೋದ ಮಾಜಿ ಅಧ್ಯಕ್ಷರಾದ ಡಾ.ಎ.ಎಸ್. ಕಿರಣಕುಮಾರ ಅವರು ಉದ್ಘಾಟಿಸಿ ವಿದ್ಯಾರ್ಥಿಗಳಿಗೆ ಬಾಹ್ಯಾಕಾಶದ ಸಂಶೋಧನೆಯಿಂದ ಮನುಕುಲಕ್ಕೆ ಆಗುವಂತಹ ಉಪಯೋಗಗಳ ಕುರಿತು ವಿವರಿಸಿದರು ಹಾಗೂ ವಿದ್ಯಾರ್ಥಿಗಳು ಬಾಹ್ಯಾಕಾಶದ ಅಧ್ಯಯನದ ಕಡೆ ಹೆಚ್ಚಿನ ಗಮನಹರಿಸಬೇಕೆಂದು ತಿಳಿಸಿದರು, ಅಂತರರಾಷ್ಟ್ರೀಯ ಚಂದ್ರ ದಿನವನ್ನು ಆಚರಿಸುತ್ತಿರುವ ಬಗ್ಗೆ ವಿವರಣೆಯನ್ನು ನೀಡಿದರು.




**6. ಲ್ಯಾಬ್-ಇನ್-ಎ-ಕಿಟ್ ವಿತರಣೆ ಹಾಗೂ ತರಬೇತಿ**

ಬೀದರ ಜಿಲ್ಲೆಯ ಸುಮಾರು ೪೬ ಸರಕಾರಿ ಪ್ರೌಢಶಾಲೆಗಳನ್ನು ಆಯ್ಕೆ ಮಾಡಿದ್ದು, ಆ ಶಾಲೆಗಳಿಗೆ ಲ್ಯಾಬ್-ಇನ್-ಎ-ಕಿಟ್ ವಿತರಣೆ ಹಾಗೂ ತರಬೇತಿ ಕಾರ್ಯಕ್ರಮವನ್ನು ದಿನಾಂಕ ೨೭.೦೬.೨೦೨೨ ರಂದು ಹಮ್ಮಿಕೊಳ್ಳಲಾಗಿತ್ತು.




## 7. ‘ವಿಶ್ವ ಓಜೋನ್ ದಿನಾಚರಣೆ’ 2022

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಕರ್ನಾಟಕ ಸರಕಾರ, ಬೆಂಗಳೂರು ಹಾಗೂ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸಹಯೋಗದಲ್ಲಿ ಪ್ರೌಢಶಾಲಾ ಮಕ್ಕಳಿಗಾಗಿ ‘ವಿಶ್ವ ಓಜೋನ್ ದಿನಾಚರಣೆ’ ನಿಮಿತ್ಯ ‘ಹವಾಮಾನ ವೈಪರೀತ್ಯ ಸವಾಲುಗಳು ಹಾಗೂ ಮುಂದಿನ ಪೀಳಿಗೆಗೆ ಭೂಮಿಯ ರಕ್ಷಣೆ’ ವಿಷಯದ ಕುರಿತು ಚಿತ್ರಕಲೆ ಸ್ಪರ್ಧೆ ಹಾಗೂ ಉಪನ್ಯಾಸ ಕಾರ್ಯಕ್ರಮವನ್ನು ದಿನಾಂಕ ೧೬.೦೯.೨೦೨೨ ರಂದು ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು.




## 8. ‘ಟ್ಯಾನ್‌ಗ್ರಾಮ್ ಗಣಿತ ಚಟುವಟಿಕೆ’

ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ, ಕರ್ನಾಟಕ ರಾಜ್ಯ ಗಣಿತ ಪರಿಷತ್, ಧಾರವಾಡ ಮತ್ತು ಅವ್ವ ಸೇವಾ ಟ್ರಸ್ಟ, ಹುಬ್ಬಳ್ಳಿ ಇವುಗಳ ಸಹಯೋಗದಲ್ಲಿ ದಿನಾಂಕ ೨೬.೦೭.೨೦೨೨ ರಂದು ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ‘ಟ್ಯಾನ್‌ಗ್ರಾಮ್ ಗಣಿತ ಚಟುವಟಿಕೆ’ ಕಾರ್ಯಾಗಾರ ಮತ್ತು ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು.




## 9. ಟೆಲಿಸ್ಕೋಪ್ ತಯಾರಿಕೆ ಕಾರ್ಯಾಗಾರ

ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ, ಪ್ರೊ ಎಂ.ಐ.ಸವದತ್ತಿ ಪ್ರತಿಷ್ಠಾನ, ಧಾರವಾಡ (ರಿ) ಹಾಗೂ ಜವಾಹರಲಾಲ ನೆಹರು ತಾರಾಲಯ, ಬೆಂಗಳೂರು ಇವುಗಳ ಸಹಯೋಗದಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಟೆಲಿಸ್ಕೋಪ ತಯಾರಿಕೆ ಕಾರ್ಯಾಗಾರವನ್ನು ವಿಜ್ಞಾನ ಕೇಂದ್ರದಲ್ಲಿ ದಿನಾಂಕ ೧೯.೦೯.೨೦೨೨ ರಂದು ಹಮ್ಮಿಕೊಳ್ಳಲಾಗಿತ್ತು.






## 10. ಗಣಿತ ಶಿಕ್ಷಕರಿಗೆ ಒಂದು ದಿನದ ಕಾರ್ಯಾಗಾರವನ್ನು ಮತ್ತು ವಿಶ್ವ ಹೃದಯ ಹಾಗೂ ಯೋಗ ದಿನಾಚರಣೆ ನಿಮಿತ್ಯ "ಯೋಗದ ಮೂಲಕ ಆರೋಗ್ಯವಂತ ಹೃದಯ" ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಬೆಂಗಳೂರು, ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ, ಕರ್ನಾಟಕ ರಾಜ್ಯ ಗಣಿತ ಪರಿಷತ್ (ರಿ), ಧಾರವಾಡ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ವರ್ಣಾಜ್ ಟೆಕ್ನಾಲಾಜೀಸ್ ತಾರೇ ಜಮೀನ್ ಪರ್ ಸಂಸ್ಥೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಶ್ರೀಮತಿ ಗುರಮ್ಮ ಶಿವಲಿಂಗಪ್ಪ ಹೊರಟ್ಟಿ ದತ್ತಿ ಕಾರ್ಯಕ್ರಮ ಅಂಗವಾಗಿ ಗಣಿತ ಶಿಕ್ಷಕರಿಗೆ ಒಂದು ದಿನದ ಕಾರ್ಯಾಗಾರವನ್ನು, ವಿಶ್ವ ಹೃದಯ ಹಾಗೂ ಯೋಗ ದಿನಾಚರಣೆ ನಿಮಿತ್ಯ "ಯೋಗದ ಮೂಲಕ ಆರೋಗ್ಯವಂತ ಹೃದಯ" ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮ ಹಾಗೂ ಸನ್ಮಾನ್ಯ ಶ್ರೀ ಬಸವರಾಜ ಹೊರಟ್ಟಿ ಇವರಿಂದ ತಾರೇ ಜಮೀನ್ ಪರ್ ಸಂಸ್ಥೆಯ ಮೊಬೈಲ್ ತಾರಾಲಯ ಉದ್ಘಾಟನೆಯನ್ನು ದಿನಾಂಕ ೨೯.೦೯.೨೦೨೨ ರಂದು ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು.






ವಿಶ್ವ ಹೃದಯ ದಿನ ಕಾರ್ಯಕ್ರಮದಲ್ಲಿ ಹೊರಟ್ಟಿ ಭರವಸೆ

ವಿಜ್ಞಾನ ಕೇಂದ್ರ ಬೆಳವಣಿಗೆಗೆ ಸಹಕಾರ

## 11. ಅಂತಾರಾಷ್ಟ್ರೀಯ ಬಾಹ್ಯಾಕಾಶ ಸಪ್ತಾಹ

ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರವು ಧಾರವಾಡದ ಹಿಮಾಲಯನ್ ಸ್ಪೇಸ್ ಸೆಂಟರ್ ಸಹಯೋಗದಲ್ಲಿ ಪ್ರಪ್ರಥಮ ಬಾರಿಗೆ ಅಕ್ಟೋಬರ್ ೯, ೨೦೨೨, ರವಿವಾರ ದÀ◌ಂದು ಮದ್ಯಾಹ್ನ ೨:೪೫ಕ್ಕೆ "ಅಂತಾರಾಷ್ಟ್ರೀಯ ಬಾಹ್ಯಾಕಾಶ ಸಪ್ತಾಹ" (Iಟಿಣeಡಿಟಿಚಿಣioಟಿಚಿಟ Sಠಿಚಿಛಿe Weeಞ) ನ್ನು ಕೇಂದ್ರದಲ್ಲಿ ಆಚರಿಸಲಾಯಿತು. ಇದರ ಅಂಗವಾಗಿ ಕೇಂದ್ರವು, ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಹಾಗೂ ಸಾರ್ವಜನಿಕರಿಗೆ ಒಂದು ದಿನದ ಕಾರ್ಯಾಗಾರವನ್ನು ನಡೆಸಲಾಯಿತು..




## 12. ಗ್ರಾಮೀಣ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನ ಹಾಗೂ ಗಣಿತ ವಸ್ತು ಪ್ರದರ್ಶನ

ಕೆಸ್ಟೆಪ್ಸ್ ಮತ್ತು ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ ಸಂಸ್ಥೆಗಳ ಮುಖ್ಯ ಉದ್ದೇಶವು ವಿಜ್ಞಾನವನ್ನು ಜನರೆಡೆಗೆ ಕೊಂಡೊಯ್ಯುವುದಾಗಿದೆ. ಈ ನಿಟ್ಟಿನಲ್ಲಿ ಈ ಸಂಸ್ಥೆಗಳು ಹಲವಾರು ವೈಜ್ಞಾನಿಕ ಕಾರ್ಯಕ್ರಮಗಳನ್ನು ರಾಜ್ಯಾದ್ಯಾಂತ ಹಮ್ಮಿಕೊಳ್ಳಲಾಗುತ್ತಿದೆ. ಈ ಬಾರಿ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕು ಅಜ್ಜಹಳ್ಳಿ ಗ್ರಾಮದಲ್ಲಿ ಸ್ಥಳೀಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನವನ್ನು ಹಮ್ಮಿಕೊಂಡಿದ್ದು ಈ ಸ್ಪರ್ಧೆಯ ಮೂಲಕ ಯುವ ಪೀಳಿಗೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಆಸಕ್ತಿಯನ್ನು ಉತ್ತೇಜಿಸುವುದು, ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ಸೃಜನಶೀಲತೆಯನ್ನು ಬೆಳೆಸುವುದು ಹಾಗೂ ಅವರ ಪ್ರತಿಭೆಯನ್ನು ಪರಿಚಯಿಸುವುದರ ಜೊತೆಗೆ ಹೆಮ್ಮೆಯ ಭಾವವನ್ನು ಮೂಡಿಸುವುದಾಗಿದೆ.





## 13. ಪ್ರೌಢಶಾಲಾ ಶಿಕ್ಷಕರಿಗೆ ಎರಡು ದಿನಗಳ ವಿಜ್ಞಾನ ಮತ್ತು ಗಣಿತ ಮಾದರಿ ತಯಾರಿಕೆ ಕಾರ್ಯಾಗಾರ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಬೆಂಗಳೂರು ಹಾಗೂ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ ಇವುಗಳ ಸಹಯೋಗದಲ್ಲಿ "ರಾಷ್ಟ್ರೀಯ ಗಣಿತ ದಿನ"ದ ಅಂಗವಾಗಿ ದಿನಾಂಕ ೨೨.೧೨.೨೦೨೨ ಹಾಗೂ ೨೩.೧೨.೨೦೨೨ ರಂದು ಧಾರವಾಡ ಜಿಲ್ಲೆಯ ಗಣಿತÀ ಹಾಗೂ ವಿಜ್ಞಾನ ಶಿಕ್ಷಕರಿಗೆ ಮಾದರಿ ತಯಾರಿಕೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಹಾಗೆಯೇ, ಸ್ವಾಮಿ ವಿವೇಕಾನಂದ ಯುತ್ ಮೂವಮೆಂಟ್ ಹಾಗೂ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ ಇವುಗಳ ಸಹಯೋಗದಲ್ಲಿ ದಿನಾಂಕ ೧೭.೧೧.೨೦೨೨ ಹಾಗೂ ೧೮.೧೧.೨೦೨೨ ರಂದು ಬೆಳಿಗ್ಗೆ ೧೦.೩೦ ಗಂಟೆಗೆ ಧಾರವಾಡ ತಾಲೂಕಿನ ಗಣಿತ ಹಾಗೂ

ವಿಜ್ಞಾನ ಪ್ರಾಥಮಿಕ ಶಿಕ್ಷಕರಿಗೆ ಮಾದರಿ ತಯಾರಿಕೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.




**14. ಸೂರ್ಯಗ್ರಹಣ**


ದಿನಾಂಕ 25.10.2022 ರಂದು ನಡೆದ ಆಂಶಿಕ ಸೂರ್ಯ ಗ್ರಹಣ ವೀಕ್ಷಣೆಯನ್ನು ಕ ವಿ ವಿ ಆವರಣದ ಓಂ ಆಶ್ರಮದ ಹತ್ತಿರ ವಿರುವ ಸನ್ ಸೆಟ್ ಪಾಯಿಂಟ್ ಹತ್ತಿರ ಹಮ್ಮಿಕೊಳ್ಳಲಾಗಿತ್ತು.





**15. ಚಂದ್ರ ಗ್ರಹಣ**

ದಿನಾಂಕ ೦೮.೧೧.೨೦೨೨ ರಂದು ನಡೆದ ಆಂಶಿಕ ಚಂದ್ರ ಗ್ರಹಣ ವೀಕ್ಷಣೆಯನ್ನು ಕ ವಿ ವಿ ಆವರಣದ ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.




**16. ಸರ್ಕಾರಿ ಬಾಲಕಿಯರ ಪ್ರೌಢಶಾಲೆಗಳ ಶಿಕ್ಷಕರಿಗೆ "ಲ್ಯಾಬ್-ಇನ್-ಎ-ಕಿಟ್ " ತರಬೇತಿ ಕಾರ್ಯಾಗಾರ**

೨೦೨೨-೨೩ ನೇ ಸಾಲಿನ ಆಯವ್ಯಯ ಘೋಷಣೆಯಂತೆ "ವಿದ್ಯಾರ್ಥಿಗಳು ನೋಡಿ ಕಲಿ ಮಾಡಿ ತಿಳಿ" ಪರಿಕಲ್ಪನೆಯಡಿ ವಿಜ್ಞಾನ ತತ್ವಗಳನ್ನು ಅರ್ಥೈಸಿಕೊಳ್ಳಲು ಅನುವಾಗುವಂತೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಬೆಂಗಳೂರು ಇವರ ಉದ್ದೇಶದಂತೆ ರಾಜ್ಯದ ೧೬೯ ಸರ್ಕಾರಿ ಬಾಲಕಿಯರ ಪ್ರೌಢಶಾಲೆಗಳಿಗೆ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದಿಂದ ತಯಾರಿಸಲಾದ ಲ್ಯಾಬ್-ಇನ್-ಎ-ಕಿಟ್‌ಗಳನ್ನು ವಿತರಸಲು ಸರ್ಕಾರವು ಅನುಮೋದನೆ ನೀಡಿರುತ್ತದೆ. ಸದರಿ ಯೋಜನೆಯಡಿ ಬೆಂಗಳೂರು,

ಮೈಸೂರು, ಕಲಬುರ್ಗಿ ಹಾಗೂ ಬೆಳಗಾವಿ ವಿಭಾಗದ ಫಲಾನುಭವಿ ಶಾಲೆಗಳ ಶಿಕ್ಷಕರಿಗೆ "ಲ್ಯಾಬ್ ಇನ್ ಎ ಕಿಟ್" ತರಬೇತಿ ಕಾರ್ಯಾಗಾರ.




**ಸಂಪರ್ಕ:**
ನಿರ್ದೇಶಕರು
ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ
ಪಾವಟೆ ನಗರ, ಕರ್ನಾಟಕ ವಿಶ್ವವಿದ್ಯಾಲಯದ ಆವರಣ, ಧಾರವಾಡ - 580003
ದೂರವಾಣಿ: 9448897509
ಇಮೇಲ್: dharwadsciencecentre@gmail.com

# ಬಳ್ಳಾರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ

ನಲ್ಲ ಚೆರುವು, ಜಿಲ್ಲಾ ಕ್ರೀಡಾಂಗಣ ಹತ್ತಿರ, ಬಳ್ಳಾರಿ- 583102

**ಪರಿಚಯ:**

ಬಳ್ಳಾರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರವು ತನ್ನಲ್ಲಿರುವ ವಿವಿಧ ಗ್ಯಾಲರಿಗಳು ಹಾಗು ಹೊರಾಂಗದಲ್ಲಿರುವ ವೈಜ್ಞಾನಿಕ ಪ್ರಾತ್ಯಕ್ಷಿಕೆಗಳ ಮೂಲಕ ವೀಕ್ಷಕರಿಗೆ ವಿಜ್ಞಾನವನ್ನು ತಲುಪಿಸುವುದರ ಜೊತೆಗೆ ವರ್ಷದುದ್ದಕ್ಕೂ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳನ್ನು ವಿಜ್ಞಾನ ಕೇಂದ್ರದ ಒಳಗೆ ಹಾಗು ಹೊರಗೆ ಹಮ್ಮಿಕೊಂಡು ವಿಜ್ಞಾನವನ್ನು ಜನಪ್ರಿಯಗೊಳಿಸುವುದು ಹಾಗು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸುವುದರಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿದೆ ಎಂದು ತಿಳಿಸಲು ಸಂತೋಷವೆನಿಸುತ್ತದೆ.

1. **ಶೂನ್ಯ ನೆರಳು ವೀಕ್ಷಣೆ ಚಟುವಟಿಕೆ ಹಾಗು ಉಪನ್ಯಾಸ ಕಾರ್ಯಕ್ರಮ**

   ಬಳ್ಳಾರಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ದಿನಾಂಕ: 30.04.2022 ರಂದು ಬಿ.ಇಡಿ. ಪ್ರಶಿಕ್ಷಣಾರ್ಥಿಗಳಿಗೆ ಶೂನ್ಯ ನೆರಳಿನ ಬಗ್ಗೆ ಉಪನ್ಯಾಸ ಮತ್ತು ಭೂಮಿಯ ಸುತ್ತಳತೆ ಕಂಡುಹಿಡಿಯುವ ಬಗ್ಗೆ ಪ್ರಾಯೋಗಿಕ ಚಟುವಟಿಕೆಯನ್ನು ಕೈಗೊಳ್ಳಲಾಯಿತು ಹಾಗು ದಿನಾಂಕ: 01.05.2022 ರಂದು ಸಾರ್ವಜನಿಕರಿಗೆ ನತ್ತು ವಿದ್ಯಾರ್ಥಿಗಳಿಗೆ ಶೂನ್ಯ ನೆರಳು ವೀಕ್ಷಿಸಲು ಅವಕಾಶ ಕಲ್ಪಿಸಲಾಯಿತು. ಫಲಾನುಭವಿಗಳು: 105





**2. ಅಂತರಾಷ್ಟ್ರೀಯ ಖಗೋಳ ದಿನಾಚರಣೆ**

ಬಳ್ಳಾರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರದ ವತಿಯಿಂದ ದಿನಾಂಕ: 07/05/2022 ರಂದು ನಗರದ ಕೊಟ್ಟೂರುಸ್ವಾಮಿ ಬಿ,ಇಡಿ, ಪ್ರಶಿಕ್ಷಣಾರ್ಥಿಗಳಿಗೆ ಅಂತರಾಷ್ಟ್ರೀಯ ಖಗೋಳ ದಿನಾಚರಣೆಯ ಪ್ರಯುಕ್ತ ಹವ್ಯಾಸಿ ಖಗೋಳ ವೀಕ್ಷಕರಾದ ಶ್ರೀ.ಎಚ್.ಎಸ್.ಟಿ. ಸ್ವಾಮಿ,





ಚಿತ್ರದುರ್ಗ ರವರಿಂದ ವಿಶೇಷ ಉಪನ್ಯಾಸವನ್ನು ಆಯೋಜಿಸಲಾಗಿರುತ್ತದೆ. ಫಲಾನುಭವಿಗಳು: 100 ವಿದ್ಯಾರ್ಥಿಗಳು



**3. ವಿಶ್ವ ಪರಿಸರ ದಿನಾಚರಣೆ**

ಬಳ್ಳಾರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು ಹಾಗು ಇದರ ಅಂಗವಾಗಿ ಸುಮಾರು 35 ಸಸಿಗಳನ್ನು ನೆಟ್ಟು ಮತ್ತು ಸಸಿಗೆ ನೀರು ಹಾಕುವ ಮೂಲಕ ವಿಜ್ಞಾನ ಕೇಂದ್ರದ ಕ್ಯುರೇಟರ್ ಶ್ರೀ ಜಿ.ವಿ. ಶಿವರಾಜ ಹಾಗು ಡಾ. ಭೀಮನಗೌಡ ಎನ್. ಪಾಟೀಲ್, ಸಹಾಯಕ ಪ್ರಧ್ಯಾಪಕರು, ಸಸ್ಯಶಾಸ್ತ್ರ ವಿಭಾಗ, ಶ್ರೀಮತಿ ಅಲಂ ಸುಮಂಗಳಮ್ಮ ಮಹಿಳಾ ಕಾಲೇಜು, ಬಳ್ಳಾರಿ, ಹಾಜರಿದ್ದ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು ಮತ್ತು ಡಾ. ಭೀಮನಗೌಡ ಎನ್. ಪಾಟೀಲ್ ರವರು ಪರಿಸರ ಸಂರಕ್ಷಣೆ ಕುರಿತು ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸವನ್ನು ನೀಡಿದರು. ಫಲಾನುಭವಿಗಳು: 340 ವಿದ್ಯಾರ್ಥಿಗಳು







**4. ಡಾ.ಹೆಚ್. ನರಸಿಂಹಯ್ಯ ಜನ್ಮ ದಿನಾಚರಣೆ**

ನಾಡು ಕಂಡ ಶ್ರೇಷ್ಠ ಶಿಕ್ಷಣ ತಜ್ಞ, ವಿಚಾರವಾದಿ, ಸ್ವಾತಂತ್ರ್ಯ ಹೋರಾಟಗಾರ ಮತ್ತು ಅಪ್ಪಟ ಗಾಂಧಿವಾದಿ ಡಾ.ಹೆಚ್. ನರಸಿಂಹಯ್ಯ ರವರ ಜನ್ಮ ಶತಮಾನೋತ್ಸವವನ್ನು ಸರ್ಕಾರಿ ಪ್ರೌಢ ಶಾಲೆ, ಶ್ರೀಧರಗಡ್ಡೆಯಲ್ಲಿ 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳೊಂದಿಗೆ ಆಚರಿಸಲಾಯಿತು. ಫಲಾನುಭವಿಗಳು: 162





## 5. ಅಂತರಾಷ್ಟ್ರೀಯ ಯೋಗಾ ದಿನಾಚರಣೆ

ದಿನಾಂಕ: 21.06.2022 ರಂದು ಬಳ್ಳಾರಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ವತಿಯಿಂದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆ, ಸಿರಿವಾರ ಗ್ರಮಾದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ನಿಮಿತ್ತ ವಿದ್ಯಾರ್ಥಿಗಳಿಗೆ ವಿ ಗ ು.
ಫ




## 6. ವಿಜ್ಞಾನ ಕಮ್ಮಟ- ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣಗಳ ಕುರಿತು

ದಿನಾಂಕ: 16.07.2022 ರಂದು ಬಳ್ಳಾರಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಬಳ್ಳಾರಿ ತಾಲೂಕಿನ 05 ವಿವಿಧ ಸರ್ಕಾರಿ ಪ್ರೌಢ ಶಾಲೆ 10ನೇ ತರಗತಿ ವಿದ್ಯಾರ್ಥಿಗಳಿಗೆ 01 ದಿನದ ಕಾರ್ಯಾಗಾರವನ್ನು ವಿಜ್ಞಾನ ಕೇಂದ್ರದ ಶೈಕ್ಷಣಿಕ ಸಹಾಯಕ ಶ್ರೀ. ಮುಸ್ತಫಾ.ಪಿ ರವರಿಂದ ಫಲಾನುಭವಿಗಳು: 45 ವಿದ್ಯಾರ್ಥಿಗಳು ಹಾಗೂ ಶಿಕ್ಷಕರು




**7. ಅಂತರಾಷ್ಟ್ರೀಯ ಚಂದ್ರ ದಿನಾಚರಣೆ**

ದಿನಾಂಕ: 20.07.2022 ರಂದು ಅಂತರಾಷ್ಟ್ರೀಯ ಚಂದ್ರ ದಿನಾಚರಣೆ ಅಂಗವಾಗಿ ಜವಾಹರ್ ಲಾಲ್ ನೆಹರು ತಾರಾಲಯ, ಬೆಂಗಳೂರು ಸಂಸ್ಥೆಯಿಂದ ಹೈಬ್ರಿಡ್ ಮಾದರಿಯಲ್ಲಿ ಕಮ್ಮಟ ಮತ್ತು ಉಪನ್ಯಾಸವನ್ನು ಹಮ್ಮಿಕೊಂಡಿತ್ತು. ಈ ಪ್ರಯುಕ್ತ ಬಳ್ಳಾರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರವು ನಗರದ ಸರ್ಕಾರಿ ಆದರ್ಶ ಶಾಲೆಯ ವಿದ್ಯಾರ್ಥಿಗಳಿಗೆ ಈ ಕಮ್ಮಟ ಮತ್ತು ಉಪನ್ಯಾಸವನ್ನು ಹಮ್ಮಿಕೊಂಡಿತ್ತು. ಫಲಾನುಭವಿಗಳು: 32 ವಿದ್ಯಾರ್ಥಿಗಳು





**8. ಡಾ. ... ಣೆ**

ದಿನಾ ... ಗವಾಗಿ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಶಾನವಾಸಪುರ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಹಾಗು ಡಾ. ವಿಕ್ರಮ್ ಸಾರಾಬಾಯಿ ರವರ ಜೀವನ ಸಾಧನೆ ಕುರಿತು ಉಪನ್ಯಾಸ ಹಮ್ಮಿಕೊಳ್ಳಲಾಯಿತು ಮತ್ತು ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಫಲಾನುಭವಿಗಳು: 78 ವಿದ್ಯಾರ್ಥಿಗಳು ಪರಿಣಾಮಗಳು : ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಬೆಳವಣಿಗೆಗೆ ಹಾಗು ಬಾಹ್ಯಾಕಾಶ ಬಗ್ಗೆ ಜ್ಞಾನ ಬೆಳೆಸಲು ಈ ಕಾರ್ಯಕ್ರಮವು ಯಶಸ್ವಿಯಾಯಿತು. ಯೋಜನೆಯ ವೆಚ್ಚ: 859/-





**9. ಪ್ರೌಢ ಶಾಲಾ ವಿದ್ಯಾರ್ಥಿಗಳಿಗಾಗಿ ಸರ್.ಸಿ.ವಿ. ರಾಮನ್ ಜಿಲ್ಲಾ ಮಟ್ಟದ ವಿಜ್ಞಾನ ರಸಪ್ರಶ್ನೆ ಸ್ಪರ್ಧೆ-2022**

ದಿನಾಂಕ; 20.08.2022 ರಂದು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ-ಕರ್ನಾಟಕ ಸರ್ಕಾರ, ಸರ್ವಜನಿಕ ಶಿಕ್ಷಣ ಇಲಾಖೆ, ಬಳ್ಳಾರಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ-ಬೆಂಗಳೂರು ಹಾಗು ಬಳ್ಳಾರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಳ್ಳಾರಿ ಇವರ ಸಹಯೋಗದಲ್ಲಿ ಪ್ರೌಢ ಶಾಲಾ ವಿದ್ಯಾರ್ಥಿಗಳಿಗಾಗಿ 2022 ನೇ ವರ್ಷದ ಸರ್.ಸಿ.ವಿ.ರಾಮನ್ ಜಿಲ್ಲಾ ಮಟ್ಟದ ವಿಜ್ಞಾನ ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಫಲಾನುಭವಿಗಳು: 30 ವಿದ್ಯಾರ್ಥಿಗಳು









## 10. ಆಜಾದಿ ಕಾ ಅಮೃತ ಮಹೋತ್ಸವ ಆಚರಣೆಗಳ ಅಡಿಯಲ್ಲಿ NPCIL- DAE ಐಕಾನಿಕ್ ವೀಕ್ ಸೆಲೆಬ್ರೇಷನ್

75ನೇ ವರ್ಷದ ಸ್ವಾತ್ಯಂತ್ರದ ಅಮೃತ ಮಹೋತ್ಸವದ ಅಂಗವಾಗಿ ದಿನಾಂಕ: 23.08.2022 ರಂದು ಎನ್ ಪಿ ಸಿ ಐ ಎಲ್ ಕೈಗಾ ಪರಮಾಣು ವಿದ್ಯುತ್ ಸ್ಥಾವರ ಕೇಂದ್ರದ ವತಿಯಿಂದ ಬಳ್ಳಾರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಸರ್ಕಾರಿ ಮತ್ತು ಅನುದಾನಿತ ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಪ್ರಬಂಧ ಮತ್ತು ರಸಪ್ರಶ್ನೆ ಸ್ಪರ್ಧೆ ಹಾಗೂ ಪರಮಾಣು ವಿದ್ಯುತ್ ಸ್ಥಾವರ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಎನ್ ಪಿ ಸಿ ಐ ಎಲ್ ಅಧಿಕಾರಿಗಳಾದ ಶ್ರೀನಿವಾಸ ಎನ್ ಪಂಚಮುಖಿ, ರವೀಂದ್ರ ಪಿ ಬಿಳಗಿ, ಗುರುರಾಜ್ ಮುನ್ನಲ್ಲಿ, ವಿಜ್ಞಾನ ಕೇಂದ್ರದ ಕ್ಯುರೇಟರ್ ಜಿ.ವಿ. ಶಿವರಾಜ್ ಅವರು ವಿಜ್ಞಾನ ಕೇಂದ್ರದ ಆವರಣದಲ್ಲಿ ಗಿಡವನ್ನು ನೆಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ನಗರದಲ್ಲಿ ವಿವಿಧ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಂದ ಸುಮಾರು 90 ವಿದ್ಯಾರ್ಥಿಗಳು ರಸಪ್ರಶ್ನೆ ಮತ್ತು ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದರು ಹಾಗೂ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಮತ್ತು ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಶಂಸಾ ಪತ್ರಗಳನ್ನು ವಿತರಿಸಲಾಯಿತು. ಫಲಾನುಭವಿಗಳು: 104 ವಿದ್ಯಾರ್ಥಿಗಳು ಮತ್ತು ಶಿಕ್ಷಕರು

ಪರಿಣಾಮಗಳು

1. ಪರಮಾಣು ಶಕ್ತಿಯ ಬಳಕೆಯಲ್ಲಿ ಒಳಗೊಂಡಿರುವ ಆರೋಗ್ಯದ ಅಪಾಯಗಳು ಮತ್ತು ಸುರಕ್ಷತೆಯ ಕಾಳಜಿಯನ್ನು ವಿದ್ಯಾರ್ಥಿಗಳು ಕಲಿಯುವರು.
2. ವಿದ್ಯಾರ್ಥಿಗಳು ಚಟುವಟಿಕೆಯಲ್ಲಿ ಪರಮಾಣು ಶಕ್ತಿಯ ಸಾಧಕ-ಭಾಧಕಗಳನ್ನು ಅಳೆಯಲು ನೀಡಿರುವ ಮಾಹಿತಿಯನ್ನು ಬಳಸುತ್ತಾರೆ







## 11. NPCIL- DAE ಐಕಾನಿಕ್ ವೀಕ್ ಸೆಲೆಬ್ರೇಶನ್ ಕೈಗಾ ಪವರ್ ಪ್ಲಾಂಟ್ ಕುರಿತು ವೀಡಿಯೊ ಪ್ರಸ್ತುತಿ

75ನೇ ವರ್ಷದ ಸ್ವಾತ್ಯಂತ್ರದ ಅಮೃತ ಮಹೋತ್ಸವದ ಅಂಗವಾಗಿ ದಿನಾಂಕ: 24.08.2022 ರಿಂದ 28/08/2022 ರವರೆಗೆ ಎನ್ ಪಿ ಸಿ ಐ ಎಲ್ ಕೈಗಾ ಪರಮಾಣು ವಿದ್ಯುತ್ ಸ್ಥಾವರ ಕುರಿತು ಬಳ್ಳಾರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರವು G.H.S, ರೇಡಿಯೋಪಾರ್ಕ್, G.H.S. M.A.K, ಆಜಾದ್ ಕೋಟೆ, G.H.S, ಮೋಕಾ ಮತ್ತು G.H.S, ವದ್ದಟ್ಟಿ ಸರ್ಕಾರಿ ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಕೈಗಾ ಪರಮಾಣು ವಿದ್ಯುತ್ ಸ್ಥಾವರ ಕುರಿತು 30 ನಿಮಿಷಗಳ ವಿಡಿಯೋವನ್ನು ಪ್ರೊಜೆಕ್ಟರ್ ಮೂಲಕ ಪ್ರದರ್ಶಿಸಲಾಯಿತು. **ಫಲಾನುಭವಿಗಳು:** 400 ವಿದ್ಯಾರ್ಥಿಗಳು





ಬಳ್ಳಾರಿ ಶಾಲೆಯ 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಆಧುನಿಕ ಕರ್ನಾಟಕ ನಿರ್ಮಾಣದಲ್ಲಿ ಭಾರತರತ್ನ ಸರ್ ಎಂ ವಿಶ್ವೇಶ್ವರಯ್ಯ ರವರ ಕೊಡುಗೆಗಳು ಮತ್ತು ಜೀವನ ಸಾಧನೆ ಕುರಿತು ಪಿಪಿಟಿ ಮೂಲಕ ಜನ್ಮ ದಿನವನ್ನು ಆಚರಿಸಲಾಯಿತು. ಫಲಾನುಭವಿಗಳು: 153 ವಿದ್ಯಾರ್ಥಿಗಳು




## 13. ವಿಶ್ವ ಓಜೋನ್ ದಿನಾಚರಣೆ-2022

ದಿನಾಂಕ: 16/09/2022 ರಂದು ವಿಶ್ವ ಓಜೋನ್ ದಿನಾಚರಣೆ ಅಂಗವಾಗಿ ಸರ್ಕಾರಿ ಪ್ರೌಢ ಶಾಲೆ, ಬಂಡಿಹಟ್ಟಿ ಶಾಲೆಯ 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಓಜೋನ್ ಸಂರಕ್ಷಣೆ ಕುರಿತು ಚಿತ್ರಕಲೆ ಸ್ಪರ್ಧೆ ಹಾಗು ಓಜೋನ್ ಸಂರಕ್ಷಣೆ ಕುರಿತು ಪಿಪಿಟಿ ಮೂಲಕ ಉಪನ್ಯಾಸವನ್ನು ಆಯೋಜಿಸಲಾಗಿತ್ತು. ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಲಾಯಿತು. ಫಲಾನುಭವಿಗಳು: 158 ವಿದ್ಯಾರ್ಥಿಗಳು





**14. ಬಾಹ್ಯಾಕಾಶ ವಿಜ್ಞಾನಿಗಳೊಂದಿಗೆ ಸಂವಾದ**

ದಿನಾಂಕ: 07/10/2022 ರಂದು ಜವಹಾರ್ ಲಾಲ್ ನೆಹರು ತಾರಾಲಯ, ಬೆಂಗಳೂರು ರವರು ಆಯೋಜಿಸಲಾಗಿದ್ದ ಆನ್ ಲೈನ್ ಹೈಬ್ರಿಡ್ ಮಾದರಿಯಲ್ಲಿ "ಬಾಹ್ಯಾಕಾಶ ವಿಜ್ಞಾನಿಗಳೊಂದಿಗೆ ಸಂವಾದ ಕಾರ್ಯಕ್ರಮವನ್ನು ಬಳ್ಳಾರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರವು ನಗರದ ಕೊಟ್ಟೂರುಸ್ವಾಮಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಈ ಕಾರ್ಯಕ್ರಮವನ್ನು ಜರುಗಿಸಲಾಯಿತು. ಫಲಾನುಭವಿಗಳು: 150 ವಿದ್ಯಾರ್ಥಿಗಳು




**15. ಖಗೋಳ ಜೀವಶಾಸ್ತ್ರ ಕುರಿತು ಉಪನ್ಯಾಸ**

ದಿನಾಂಕ: 08/10/2022 ರಂದು ಜವಹಾರ್ ಲಾಲ್ ನೆಹರು ತಾರಾಲಯ, ಬೆಂಗಳೂರು ರವರು ಆಯೋಜಿಸಲಾಗಿದ್ದ ಆನ್ ಲೈನ್ ಹೈಬ್ರಿಡ್ ಮಾದರಿಯಲ್ಲಿ "ಖಗೋಳ ಜೀವಶಾಸ್ತ್ರ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಬಳ್ಳಾರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರವು ನಗರದ ಕೊಟ್ಟೂರುಸ್ವಾಮಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಈ ಕಾರ್ಯಕ್ರಮವನ್ನು ಜರುಗಿಸಲಾಯಿತು. ಫಲಾನುಭವಿಗಳು: 153 ವಿದ್ಯಾರ್ಥಿಗಳು.


**16. ಅಂತರಾಷ್ಟ್ರೀಯ ಬಾಹ್ಯಾಕಾಶ ಸಪ್ತಾಹ**

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಬೆಂಗಳೂರು, ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೋ), ಬೆಂಗಳೂರು, ಜವಾಹರ್ ಲಾಲ್ ನೆಹರು ತಾರಾಲಯ, ಬೆಂಗಳೂರು ರವರ ಸಹಯೋಗದಲ್ಲಿ ಬಳ್ಳಾರಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವು ಅಂತರಾಷ್ಟ್ರೀಯ ಬಾಹ್ಯಾಕಾಶ ಸಪ್ತಾಹ ಆಚರಣೆ ಪ್ರಯುಕ್ತ ವಿವಿಧ 03 ಸರ್ಕಾರಿ ಪ್ರೌಢ ಶಾಲೆ

(ಕೋಳೂರು, ಕುಡಿತಿನಿ ಮತ್ತು ಜಾನೆಕುಂಟೆ) ದಿನಾಂಕ: 21/10/2022, 27/10/2022 ಮತ್ತು 29/10/2022 ರಂದು ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಈ ರಸಪ್ರಶ್ನೆ ಸ್ಪರ್ಧೆಯು 2 ಹಂತಗಳಲ್ಲಿ (15 ಅಂಕಗಳ ಬಹು ಆಯ್ಕೆ ಪ್ರಶ್ನೆಗಳ ಪರಿಕ್ಷೆ ಮತ್ತು ರಸಪ್ರಶ್ನೆ ಸುತ್ತುಗಳು) ಜರುಗಿಸಲಾಯಿತು. ಅವುಗಳ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ಮತ್ತು ಬಹುಮಾನಗಳನ್ನು ವಿತರಿಸಲಾಯಿತು ಜೊತೆಗೆ ಬಾಹ್ಯಾಕಾಶ ಕುರಿತು ವಿಜ್ಞಾನ ಕೇಂದ್ರದಿಂದ ಮಾಹಿತಿ ನೀಡಲಾಯಿತು. ಫಲಾನುಭವಿಗಳು: 391 ವಿದ್ಯಾರ್ಥಿಗಳು


**17. ಸೂರ್ಯಗ್ರಹಣ ವೀಕ್ಷಣೆ ಚಟುವಟಿಕೆ**

ಬಳ್ಳಾರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರದ ಆವರಣದಲ್ಲಿ ಟೆಲಿಸ್ಕೋಪ್, ಸೋಲಾರ್ ಫಿಲ್ಟರ್ ಕನ್ನಡಕಗಳೊಂದಿಗೆ ಸೂರ್ಯಗ್ರಹಣ ವೀಕ್ಷಣೆಗೆ ಸಂಜೆ 05.05 ರಿಂದ 05.54 ರವರೆಗೆ ವ್ಯವಸ್ಥೆ ಕಲ್ಪಿಸಲಾಗಿತ್ತು ಹಾಗೂ ಗ್ರಹಣ ಸಂದರ್ಭದಲ್ಲಿ ಬಿಸ್ಕೇಟ್ ಸೇವಿಸುವುದರ ಮೂಲಕ ಗ್ರಹಣದ ಮೂಡನಂಬಿಕೆಯನ್ನು ಹೋಗಲಾಡಿಸಲಾಯಿತು. ಈ ಸಂದರ್ಭದಲ್ಲಿ ವಿಜ್ಞಾನ ಕೇಂದ್ರದ ಿಲ್ಲಾ ಸಿಬ್ಬಂದಿ ವರ್ಗದವರು ಸಂವಹನ ಫಲಕಗಳೊಂದಿಗೆ ಸೂರ್ಯ ಗ್ರಹಣದ ಬಗ್ಗೆ ಜನಸಾಮಾನ್ಯರಲ್ಲಿ ಜಾಗೃತಿಯನ್ನು ಮೂಡಿಸಲಾಯಿತು. ಇದೇ ವೇಳೆಯಲ್ಲಿ ಗ್ರಹಣವೆಂಬುದು ಪ್ರಕೃತಿಯಲ್ಲಿ ನಡೆಯುವ ಸಹಜ ಪ್ರಕ್ರಿಯೆಯಾಗಿದ್ದು, ಜನರು ಗ್ರಹಣ ಸಂದರ್ಭದಲ್ಲಿ ಮೌಢ್ಯತೆ ಆಚರಿಸಬಾರದು ಎಂದು ವಿಜ್ಞಾನ ಕೇಂದ್ರದ ಕ್ಯುರೇಟರ್ ಜಿ.ವಿ. ಶಿವರಾಜ ತಿಳಿಸಿದರು. ಫಲಾನುಭವಿಗಳು: 200 ವಿದ್ಯಾರ್ಥಿಗಳು ಹಾಗೂ ಜನಸಾಮಾನ್ಯರು




**18. ಸರ್ ಸಿ.ವಿ. ರಾಮನ್ ಮತ್ತು ಮೇಡಂ ಕ್ಯೂರಿ ಜನ್ಮ ದಿನಾಚರಣೆ**

ದಿನಾಂಕ: 21/11/2022 ರಂದು ಸರ್.ಸಿ.ವಿ.ರಾಮನ್ ಮತ್ತು ಮೇಡಂ ಕ್ಯೂರಿ ಜನ್ಮ ದಿನ ಕಾರ್ಯಕ್ರಮವನ್ನು ಸರ್ಕಾರಿ ಪದವಿ ಪೂರ್ವ ಕಾಲೇಜು ನಲ್ಲಚೆರುವು, ಕೌಲ್ ಬಜಾರ್, ಬಳ್ಳಾರಿ ಕಾಲೇಜಿನ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ಆಯೋಜಿಸುವ ಮೂಲಕ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ವಿಶೇಷ ಉಪನ್ಯಾಸಕರಾಗಿ ಶ್ರೀ ಅಕ್ಕಿ ಮಲ್ಲಿಕಾರ್ಜುನ, ಭೌತಶಾಸ್ತ್ರ ಉಪನ್ಯಾಸಕರು ಸರ್ಕಾರಿ ಪದವಿ ಕಾಲೇಜು, ಬಳ್ಳಾರಿ ರವರು ಆಗಮಿಸಿದ್ದರು. ಫಲಾನುಭವಿಗಳು: 47 ವಿದ್ಯಾರ್ಥಿಗಳು




**19. ಉತ್ತಮ ಆಡಳಿತ ತಿಂಗಳು – 2022 ರ ಪ್ರಯುಕ್ತ ವಿಶ್ವ ಏಡ್ಸ್ ದಿನಾಚರಣೆ**

ದಿನಾಂಕ: 10/12/2022 ರಂದು Good Governance Month-2022 ಮತ್ತು ವಿಶ್ವ ಏಡ್ಸ್ ದಿನಾಚರಣೆ ಕಾರ್ಯಕ್ರಮವನ್ನು ಸರ್ಕಾರಿ ಪ್ರೌಢ ಶಾಲೆ, ಕೊಳಗಲ್ಲು, ಬಳ್ಳಾರಿ ವಿದ್ಯಾರ್ಥಿಗಳಿಗೆ ಉತ್ತಮ ಆಡಳಿತ ತಿಂಗಳು ಮತ್ತು ಏಡ್ಸ್ ದಿನಾಚರಣೆಯ ಮಹತ್ವ ವಿಷಯ ಕುರಿತು ಪ್ರಬಂಧ ಸ್ಪರ್ಧೆ ಆಯೋಜಿಸಲಾಯಿತು. ವಿದ್ಯಾರ್ಥಿಗಳಿಗೆ Good Governance ಬಗ್ಗೆ ಕೇಂದ್ರದ ಕ್ಯುರೇಟರ್ ಶ್ರೀ. ಜಿ.ವಿ. ಶಿವರಾಜ ತಿಳಿಸಿದರು. ಡಾ. ಯೆರ್ರಿಸ್ವಾಮಿ ಸಮುದಾಯ ಆರೋಗ್ಯ ಅಧಿಕಾರಿಗಳು, ಕೊಳಗಲ್ಲು ರವರಿಂದ ಏಡ್ಸ್ ಜಾಗೃತಿ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಜರುಗಿಸಲಾಯಿತು ಹಾಗೂ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಥಮ, ದ್ವಿತೀಯ, ತೃತೀಯ ಹಾಗೂ ಸಮಾಧಾನಕರ ಬಹುಮಾನಗಳನ್ನು ವಿತರಿಸಲಾಯಿತು. ಫಲಾನುಭವಿಗಳು: 250 ವಿದ್ಯಾರ್ಥಿಗಳು






**20. ಆಕಾಶ ವೀಕ್ಷಣೆ ಚಟುವಟಿಕೆ**

ಉತ್ತಮ ಆಡಳಿತ ತಿಂಗಳು -2022 ರ ಪ್ರಯುಕ್ತ ಬಳ್ಳಾರಿ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿರುವ ಮೊರಾಜಿ ದೇಸಾಯಿ ವಸತಿ ಶಾಲೆಗಳಲ್ಲಿ ಖಗೋಳ ವಿಜ್ಞಾನ ಉಪನ್ಯಾಸ ಮತ್ತು ಆಕಾಶ ವೀಕ್ಷಣೆ ಚಟುವಟಿಕೆಯನ್ನು ಜರುಗಿಸಲಾಯಿತು. ಖಗೋಳ ವಿಷಯದ ಕುರಿತು ವಿಜ್ಞಾನ ಕೇಂದ್ರದ ಕ್ಯುರೇಟರ್ ಶ್ರೀ. ಜಿ.ವಿ. ಶಿವರಾಜ ಹಾಗೂ ಶೈಕ್ಷಣಿಕ ಸಹಾಯಕರಾದ ಶ್ರೀ. ಮುಸ್ತಫಾ ರವರಿಂದ ಉಪನ್ಯಾಸವನ್ನು ನೆರವೇರಿಸಿದರು.

1. ದಿನಾಂಕ: 16/12/2022 ರಂದು ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬಿ.ಡಿ. ಹಳ್ಳಿ (100 ವಿದ್ಯಾರ್ಥಿಗಳು)
2. ದಿನಾಂಕ: 17/12/2022 ರಂದು ಮೊರಾರ್ಜಿ ದೇಸಾಯಿ ವಸತಿ ಶಾಲೆ, ಅಲ್ಲಿಪುರ (105 ವಿದ್ಯಾರ್ಥಿಗಳು)

3. ದಿನಾಂಕ: 24/12/2022 ರಂದು ಮೊರಾರ್ಜಿ ದೇಸಾಯಿ ವಸತಿ ಶಾಲೆ, ಯರ್ರಗುಡಿ (100 ವಿದ್ಯಾರ್ಥಿಗಳು)





## 21. ಪ್ರೌಢಶಾಲಾ ವಿಜ್ಞಾನ ಶಿಕ್ಷಕರಿಗೆ ವಿಜ್ಞಾನ ಕಾರ್ಯಗಾರ

ದಿನಾಂಕ: 20/12/2022 ರಂದು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಳ್ಳಾರಿ, ಹಾಗೂ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಬೆಂಗಳೂರು ರವರ ಸಹಯೋಗದೊಂದಿಗೆ Good Governance Month-2022 ಪ್ರಯುಕ್ತ ಬಳ್ಳಾರಿ ಜಿಲ್ಲೆಯ ಸರ್ಕಾರಿ ಮತ್ತು ಅನುದಾನಿತ ಪ್ರೌಢ ಶಾಲಾ ವಿಜ್ಞಾನ ಶಿಕ್ಷಕರಿಗೆ 01 ದಿನದ ವಿಜ್ಞಾನ ಕಾರ್ಯಗಾರವನ್ನು ಬಳ್ಳಾರಿ ಉಪ ಪ್ರದೇಶಿಕ ವಿಜ್ಞಾನ ಕೇಂದ್ರದಲ್ಲಿ ಜರುಗಿಸಲಾಯಿತು. ಈ ವಿಜ್ಞಾನ ಕಾರ್ಯಗಾರವನ್ನು ಉಪನಿರ್ದೇಶಕರು (ಆ) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಳ್ಳಾರಿ ರವರು ಕಾರ್ಯಗಾರವನ್ನು ಉದ್ಘಾಟಿಸಿದರು. ಸದರಿ ಕಾರ್ಯಗಾರದ ಸಂಪನ್ಮೂಲ ವ್ಯಕ್ತಿಗಳಾಗಿ

1. ಶ್ರೀ. ಶ್ರೀಧರ ಮಯ್ಯ ಎಂ.ಎನ್ - ವಿಜ್ಞಾನ ಶಿಕ್ಷಕರು, ಸ.ಪ್ರೌ.ಶಾ, ಗುತ್ತೂರು, ಹರಿಹರ ತಾ. ದಾವಣಗೆರೆ ಜಿಲ್ಲೆ
2. ಶ್ರೀ. ಮೊಹಮ್ಮದ್ ಗನಿಫ್ – ಇ.ಸಿ.ಒ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಹರಪ್ಪನಹಳ್ಳಿ, ವಿಜಯನಗರ ಜಿಲ್ಲೆ
3. ಶ್ರೀ. ಬಸವರಾಜ. ಎಂ. – ವಿಷಯ ಪರಿವೀಕ್ಷಕರು. ಡಿಡಿಪಿಐ ಕಚೇರಿ, ಬಳ್ಳಾರಿ ರವರು ಭಾಗವಹಿಸಿದ್ದರು.




## 22. ಚಾರ್ಲ್ಸ್ ಬ್ಯಾಬೇಜ್ ಜನ್ಮ ದಿನಾಚರಣೆ ಪ್ರಯುಕ್ತ "ಟ್ರೆಂಡಿಂಗ್ ಟೆಕ್ನಾಲಜಿಯಲ್ಲಿ ಕಂಪ್ಯೂಟರ್ ಕುರಿತು ಉಪನ್ಯಾಸ"

ಚಾರ್ಲ್ಸ್ ಬ್ಯಾಬೇಜ್ ಜನ್ಮ ದಿನಾಚರಣೆ ಪ್ರಯುಕ್ತ ಬಳ್ಳಾರಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ವತಿಯಿಂದ ದಿನಾಂಕ: 26/12/2022 ರಂದು ನಗರದ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ರೇಡಿಯೋ ಪಾರ್ಕ್, ಬಳ್ಳಾರಿ ಕಾಲೇಜಿನ ಬಿ.ಎ ಮತ್ತು ಬಿ.ಕಾಂ. ವಿದ್ಯಾರ್ಥಿಗಳಿಗೆ A Lecture on Computer in Trending Technology ವಿಷಯ ಕುರಿತು ಶ್ರೀಮತಿ

ಅರ್ಚನ, ಕಂಪ್ಯೂಟರ್ ಉಪನ್ಯಾಸಕರು ರವರಿಂದ ವಿಶೇಷ ಉಪನ್ಯಾಸವನ್ನು ಜರುಗಿಸಲಾಯಿತು. ಫಲಾನುಭವಿಗಳು: 228 ವಿದ್ಯಾರ್ಥಿಗಳು




**23. ಬಳ್ಳಾರಿ ಜಿಲ್ಲೆಯ ಸರ್ಕಾರಿ ಪ್ರೌಢಶಾಲಾ ಗಣಿತ ಶಿಕ್ಷಕರಿಗೆ ಗಣಿತ ಕಾರ್ಯಗಾರ**

ದಿನಾಂಕ: 27/12/2022 ರಂದು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಳ್ಳಾರಿ, ಹಾಗೂ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಬೆಂಗಳೂರು ರವರ ಸಹಯೋಗದೊಂದಿಗೆ Good Governance Month-2022 ಪ್ರಯುಕ್ತ ಬಳ್ಳಾರಿ ಜಿಲ್ಲೆಯ ಸರ್ಕಾರಿ ಪ್ರೌಢ ಶಾಲಾ ಗಣಿತ ಶಿಕ್ಷಕರಿಗೆ 01 ದಿನದ ಗಣಿತ ಕಾರ್ಯಗಾರವನ್ನು ಬಳ್ಳಾರಿ ಉಪ ಪ್ರದೇಶಿಕ ವಿಜ್ಞಾನ ಕೇಂದ್ರದಲ್ಲಿ ಜರುಗಿಸಲಾಯಿತು. ಈ ಗಣಿತ ಕಾರ್ಯಗಾರವನ್ನು BEO, ಉಪನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಳ್ಳಾರಿ ರವರು ಕಾರ್ಯಗಾರವನ್ನು ಉದ್ಘಾಟಿಸಿದರು. ಫಲಾನುಭವಿಗಳು: 101 ಗಣಿತ ಶಿಕ್ಷಕರು




**24. ರಾಷ್ಟ್ರೀಯ ಯುವ ದಿನಾಚರಣೆ**

ದಿನಾಂಕ: 17/01/2023 ರಂದು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಳ್ಳಾರಿ ವತಿಯಿಂದ ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮವನ್ನು ಸರ್ಕಾರಿ ಪ್ರೌಢ ಶಾಲೆ, ರೂಪನಗುಡಿ ಬಳ್ಳಾರಿ ವಿದ್ಯಾರ್ಥಿಗಳಿಗೆ ಆಶುಭಾಷಣ ಸ್ಪರ್ಧ ಆಯೋಜಿಸಲಾಯಿತು ಮತ್ತು ವಿದ್ಯಾರ್ಥಿಗಳಿಗೆ ಡಾ. ಯು. ಶ್ರೀನಿವಾಸ ಮೂರ್ತಿ, ಉಪನ್ಯಾಸಕರು, ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, ಬಳ್ಳಾರಿ ರವರಿಂದ ರಾಷ್ಟ್ರೀಯ ಯುವಕ/ಕಿ ರವರ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಜರುಗಿಸಲಾಯಿತು ಮತ್ತು ಆಶುಭಾಷಣ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಥಮ, ದ್ವಿತೀಯ, ತೃತೀಯ ಹಾಗೂ ಸಮಾಧಾನಕರ ಬಹುಮಾನಗಳನ್ನು ವಿತರಿಸಲಾಯಿತು. ಫಲಾನುಭವಿಗಳು: 178 ವಿದ್ಯಾರ್ಥಿಗಳು





## 25. ವಿಜ್ಞಾನ ವಸ್ತು ಪ್ರದರ್ಶನ

ದಿನಾಂಕ: 31/01/2023 ರಂದು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಳ್ಳಾರಿ ನಗರದ ವಿವಿಧ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಯ 8 ಮತ್ತು 9ನೇ ತರಗತಿ ವಿದ್ಯಾರ್ಥಿಗಳಿಗೆ ವಿಜ್ಞಾನ ಮಾದರಿ ತಯಾರಿಕೆ ಹಾಗು ವಿಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಸದರಿ ಸ್ಪರ್ಧೆಯಲ್ಲಿ ಒಟ್ಟು 29 ಶಾಲೆಗಳು ಭಾಗವಹಿಸಿದ್ದವು. ಒಬ್ಬರ ವೈಜ್ಞಾನಿಕ ಸಂಶೋಧನೆಗಳನ್ನು ಅಥವಾ ಅವಲೋಕನಗಳನ್ನು ಪ್ರಸ್ತುತ ಪಡಿಸುವ ಸಾಮಾರ್ಥ್ಯವನ್ನು ಇದು ನಿರ್ಮಿಸುತ್ತದೆ.





**ಸಂಪರ್ಕ:**

ಕ್ಯುರೇಟರ್
ಬಳ್ಳಾರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಳ್ಳಾರಿ
ನಲ್ಲ ಚೆರುವು ಜಿಲ್ಲಾ ಕ್ರೀಡಾಂಗಣ ಹತ್ತಿರ, ಬಳ್ಳಾರಿ-583102
ದೂರವಾಣಿ : 9606713536
ಇಮೇಲ್: drscbellary@gmail.com

# ರಾಯಚೂರು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ

ವಿಜ್ಞಾನ ಬೆಟ್ಟ, ರಾಷ್ಟ್ರಕವಿ ಕುವೆಂಪು ವನ,
ಮಂತ್ರಾಲಯ ರಸ್ತೆ, ರಾಯಚೂರು- 584103

---

**ಪರಿಚಯ:**

ರಾಯಚೂರು ವಿಜ್ಞಾನಕೇಂದ್ರವು ದಿನಾಂಕ: 12.11.1997 ರಂದು ಅಸ್ತಿತ್ವಕ್ಕೆಬಂದಿತು. ತದನಂತರ ದಿನಾಂಕ: 18.11.2015 ರಂದು ವಿಜ್ಞಾನ ಕೇಂದ್ರವು, ಉಪ್ರ ಪ್ರಾದೇಶಿಕ ವಿಜ್ಞಾನ ಕೇಂದ್ರವಾಗಿ ನವೀಕರಿಸಲಾಯಿತು. ವಿಜ್ಞಾನ ಕೇಂದ್ರದ ಕಟ್ಟಡ ಪ್ರದೇಶದ ಸುತ್ತಳತೆಯು ಸುಮಾರು 700.00 ಚ.ಮೀ. ಗಳಾಗಿದ್ದು, ಇದು ಗ್ಯಾಲರಿ, ತಾತ್ಕಾಲಿಕ ಪ್ರದರ್ಶನಾ ಸ್ಥಳ, ಚಟುವಟಿಕಾ ಸ್ಥಳ, ಸಭಾಂಗಣ, ಚಿಕ್ಕ ಅಧಿವೇಶನ ಕೋಣೆ, ಕಂಪ್ಯೂಟರ್ ಲ್ಯಾಬ್ ಹಾಗೂ ಇ-ಸೈನ್ಸ್ ಲೈಬ್ರರಿ, ಕಛೇರಿ ಕೊಠಡಿ, ಕಾರ್ಯಾಗಾರದ ಕೋಣೆ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದೆ. ಪ್ರಸ್ತುತ ಕೇಂದ್ರ ಸರ್ಕಾರದ ಸಂಸ್ಕೃತಿ ಇಲಾಖೆಯ ಸ್ಪ್ಯಾಕ್ಸ್ ಯೋಜನೆಯಂತೆ Category II ವಿಜ್ಞಾನ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ವಿಜ್ಞಾನ ಕೇಂದ್ರದ ಆವರಣದಲ್ಲಿ ಮತ್ತು ತಾರಾಲಯವನ್ನು ಸ್ಥಾಪಿಸಲಾಗುತ್ತಿದೆ. ಪ್ರಸ್ತುತ ತಾರಾಲಯದ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು, ಸದರಿ ಯೋಜನೆಯನ್ನು ಪೂರ್ಣಗೊಳಿಸಲು ಕ್ರಿಯಾಯೋಜನೆಯನ್ನು ಸಲ್ಲಿಸಲಾಗಿದೆ. ಪೂರ್ಣಪ್ರಮಾಣದ ಸುಸಜ್ಜಿತವಾದ ಹೊರಾಂಗಣ ಸೈನ್ಸ್ ಪಾರ್ಕ್ ಸ್ಥಾಪನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

**1. ಬೇಸಿಗೆ ಶಿಬಿರ:**

ರಾಯಚೂರು ಜಿಲ್ಲೆಯ ರಾಯಚೂರು ತಾಲೂಕಿನ ಅಪ್ಪನದೊಡ್ಡಿ ಗ್ರಾಮದ ಮತ್ತು ಸುತ್ತಮುತ್ತಲಿನ ಪ್ರದೇಶದ ಸುಮಾರು **55** ವಿದ್ಯಾರ್ಥಿಗಳಿಗೆ ದಿನಾಂಕ **29.04.2022** ರಂದು "ಬೇಸಿಗೆ ಶಿಬಿರ"ವನ್ನು ಹಮ್ಮಿಕೊಳ್ಳಲಾಯಿತು. ಈ ಶಿಬಿರದಲ್ಲಿ ವಿದ್ಯಾರ್ಥಿಗಳಿಗೆ





ಖಗೋಳಶಾಸ್ತ್ರ, ಸೃಜನಶೀಲತೆ, ಚಿತ್ರಕಲೆ, ನಾಯಕತ್ವ, ಮಣ್ಣಿನ ಪರೀಕ್ಷೆ, ನೀರಿನ ಸದ್ಬಳಕೆ ಹಾಗೂ ವಿಜ್ಞಾನ ಮತ್ತು ಶಿಕ್ಷಣದ ಅವಶ್ಯಕತೆಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿಕೊಡಲಾಯಿತು. ಅದರಂತೆ, ವಿಜ್ಞಾನ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಸೂರ್ಯನ ಸುತ್ತ ಭೂಮಿಯ ಚಲನೆ, ಭೂಮಿಯ ಸುತ್ತ ಚಂದ್ರನ ಸಮಕಾಲಿಕ ಚಲನೆ, ಅಮವಾಸ್ಯೆ, ಹುಣ್ಣಿಮೆ ಮತ್ತು ಚಂದ್ರಗ್ರಹಣ, ಸೂರ್ಯಗ್ರಹಣಗಳ ನಡುವಿನ ವ್ಯತ್ಯಾಸ, ಚಂದ್ರನ ಹಂತಗಳನ್ನು ಗುರುತಿಸುವ ವಿಧಾನ ಮುಂತಾದ ವಿಷಯಗಳನ್ನು ಪ್ರಾಯೋಗಿಕವಾಗಿ ಕೈಗೊಳ್ಳಲಾಯಿತು. ಈ ಕಾರ್ಯಕ್ರಮವನ್ನು ಪಿರಾಮಲ್ ಫೌಂಡೇಷನ್ ರ ಪ್ರಾಯೋಜಿತ್ವದಲ್ಲಿ ಮತ್ತು ಭಾರತ ಜ್ಞಾನ ವಿಜ್ಞಾನ ಸಮಿತಿ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಯಿತು.

## 2. ಶೂನ್ಯ ನೆರಳಿನ ದಿನಾಚರಣೆ:

ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ರಾಯಚೂರು ಹಾಗೂ ಭಾರತ ಜ್ಞಾನ ವಿಜ್ಞಾನ ಸಮಿತಿ ರಾಯಚೂರು ಇವರ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ "ಶೂನ್ಯ ನೆರಳಿನ ದಿನಾಚರಣೆ" ಯನ್ನು ರಾಯಚೂರು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ದಿನಾಂಕ 05.05.2022 ರಂದು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಸೇರಿದಂತೆ ಒಟ್ಟು 28 ಜನ ಭಾಗವಹಿಸಿದ್ದರು.





ವಿಜ್ಞಾನ ಕೇಂದ್ರದಲ್ಲಿ ಶೂನ್ಯ ನೆರಳು ದಿನ ಆಚರಣೆ

ದುಡಿಮೆ ನ್ಯೂಸ್‌ಲೈನ್

ರಾಯಚೂರು,ಮೇ.6-ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಭಾರತ ಜ್ಞಾನ ವಿಜ್ಞಾನ ಸಮಿತಿ ಸಹಯೋಗದಲ್ಲಿ ಶೂನ್ಯ ನೆರಳು ದಿನವನ್ನು ನಗರದ ವಿಜ್ಞಾನ ಕೇಂದ್ರದಲ್ಲಿ ಆಚರಿಸಲಾಯಿತು.

ಶೂನ್ಯ ನೆರಳಿನ ವಿದ್ಯಮಾನವು, ವರ್ಷಕ್ಕೆ ಎರಡು ಬಾರಿ ಸಂಭವಿಸಲಿದ್ದು, ಇದು ರಾಯಚೂರಿನಲ್ಲಿ ಪ್ರಸಕ್ತ ವರ್ಷದಲ್ಲಿ ದಿನಾಂಕ 05.05.2022 ಮತ್ತು ದಿನಾಂಕ 07.08.2022 ರಂದು ಸಂಭವಿಸಲಿದೆ. ಆದರೆ, ಆಗಸ್ಟ್ ತಿಂಗಳಲ್ಲಿ ಮೋಡ ಕವಿದ ವಾತಾವರಣ ಕಂಡುಬರುವುದರಿಂದ, ಮೇ ತಿಂಗಳಲ್ಲಿ ಇದನ್ನು ಸ್ಪಷ್ಟವಾಗಿ ಕಾಣಬಹುದಾಗಿರುತ್ತದೆ.

ಈ ಸಮಯದಲ್ಲಿ ಚಟುವಟಿಕೆಗಳ ಮುಖಾಂತರ, ಭೂಮಿಯ ಸುತ್ತಳತೆ, ಭೂಮಿಯ ಪರಿಭ್ರಮಣ, ಶೂನ್ಯ ನೆರಳಿನ ಸಮಯ ಹಾಗೂ ಸೂರ್ಯನ ಚಲನೆ ಮುಂತಾದವುಗಳನ್ನು ಅಳೆಯಬಹುದಾಗಿರುತ್ತದೆ ಎಂದು ಕೇಂದ್ರದ ಕ್ಯುರೇಟರ್ ರವರಾದ ಅಜಿತ್ ಕುಮಾರ್ ತಿಳಿಸಿದರು. ಕೇಂದ್ರದ ಶಿಕ್ಷಣ ಸಹಾಯಕರಾದ ಕು. ವಿದ್ಯಾ ರವರು, ಕಾರ್ಯಕ್ರಮದಲ್ಲಿ ನೆರೆದಿದ್ದ ವಿದ್ಯಾರ್ಥಿಗಳಿಗೆ, ಶೂನ್ಯ ನೆರಳು ವಿದ್ಯಮಾನದ ಮಾಹಿತಿಯನ್ನು ನೀಡಿ, ಚಟುವಟಿಕೆಯನ್ನು ಹಮ್ಮಿಕೊಳ್ಳುವ ವಿಧಾನವನ್ನು ವಿವರಿಸಿದರು.

ಅದರಂತೆ, ವಿದ್ಯಾರ್ಥಿ ಗಳು ಚಟುವಟಿಕೆಯನ್ನು ಯಶಸ್ವಿ ಯಾಗಿ ಪೂರ್ಣಗೊಳಿಸಿ ಶೂನ್ಯ ನೆರಳಿನ ಸಮಯವನ್ನು ಕಂಡುಕೊಂ ಡರು ಹಾಗೂ ಅದನ್ನು ಪ್ರಸ್ತುತಪಡಿ ಸಿದರು.

ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಿಂದ ವಿದ್ಯಾರ್ಥಿಗಳಿಗೆ ವಿಜ್ಞಾನ ಕ್ಷೇತ್ರದಲ್ಲಿ ಆಸಕ್ತಿಯನ್ನುಂಟು ಮಾಡಬಹುದು. ಈ ನಿಟ್ಟಿನಲ್ಲಿ ವಿಜ್ಞಾನ ಕೇಂದ್ರದ ಪ್ರಯತ್ನ ಶ್ಲಾಘನೀಯವಾಗಿದೆ ಎಂದು ಭಾರತ ಜ್ಞಾನ ವಿಜ್ಞಾನ ಸಮಿತಿ ಸಂಚಾಲಕ ಸೈಯದ್ ಹಫೀಜುಲ್ಲಾ ತಿಳಿಸಿದರು.

ಈ ಚಟುವಟಿಕೆಗಳ ಮೂಲಕ ರಾಯಚೂರಿನಲ್ಲಿ ಶೂನ್ಯ ನೆರಳಿನ ಸಮಯ ಮಧ್ಯಾಹ್ನ 12 ಗಂಟೆ 17 ನಿಮಿಷಗಳು ಎಂದು ಪ್ರಾತ್ಯಕ್ಷಿಕೆ ಮೂಲಕ ಕಂಡುಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ವಿಜ್ಞಾನ ಕೇಂದ್ರದ ಸಿಬ್ಬಂದಿಗಳು ಉಪಸ್ಥಿತರಿದ್ದರು.

## 3. ನೀತಿ ಆಯೋಗದ ಮಹತ್ವಾಕಾಂಕ್ಷಿ ಜಿಲ್ಲಾ ಕಾರ್ಯಕ್ರಮದಡಿ ವಿದ್ಯಾರ್ಥಿಗಳ ಕಲಿಕಾ ಫಲಿತಾಂಶಗಳ ವೃದ್ಧಿಗಾಘಿ ಶಾಲಾ ಮೇಲ್ವಿಚಾರಣಾಧಿಕಾರಿಗಳಿಗೆ ಪ್ರಮುಖ ಪ್ರದರ್ಶನ ಸೂಚಕಗಳ ಕಾರ್ಯಾಗಾರ:

ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ದಿನಾಂಕ 07.05.2022 ರಂದು "ನೀತಿ ಆಯೋಗದ ಮಹತ್ವಾಕಾಂಕ್ಷಿ ಜಿಲ್ಲಾ ಕಾರ್ಯಕ್ರಮದಡಿ ವಿದ್ಯಾರ್ಥಿಗಳ ಕಲಿಕಾ ಫಲಿತಾಂಶಗಳ ವೃದ್ಧಿಗಾಗಿ ಶಾಲಾ ಮೇಲ್ವಿಚಾರಣಾಧಿಕಾರಿಗಳಿಗೆ ಪ್ರಮುಖ ಪ್ರದರ್ಶನ ಸೂಚಕಗಳ ಕಾರ್ಯಾಗಾರ"ವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಾಗಾರದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳು ಮತ್ತು ಶಿಕ್ಷಣ ಇಲಾಖೆಯ

ವ್ಯವಸ್ಥಾಪಕರುಗಳು ಮತ್ತು ಇತರೆ ಅಧಿಕಾರಿಗಳು ಸೇರಿದಂತೆ ಒಟ್ಟು 21 ಜನ ಭಾಗವಹಿಸಿದ್ದರು. ಉಪನಿರ್ದೇಶಕರು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇವರು ಕಲಿಕಾ ಫಲಿತಾಂಶಗಳ ಸೂಚಕಗಳ ಕುರಿತು ಅಧಿವೇಶನ ಕೈಗೊಂಡರು.



**4. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನ ಚಟುವಟಿಕೆಗಳು:**

ದಿನಾಂಕ 21.05.2022 ರಂದು ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಅವರ ಪಠ್ಯಕ್ಕೆ ಪೂರಕವಾಗುವಂತೆ ವಿಜ್ಞಾನ ಚಟುವಟಿಕೆಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 33 ಜನ ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬೆಳಕು, ಪ್ರತಿಫಲನ, ವಕ್ರೀಭವನ ಮತ್ತು ಸಂಪೂರ್ಣ ಆಂತರಿಕ ಪ್ರತಿಫಲನ, ನ್ಯೂಟನ್ನಿನ ಚಲನೆಯ ನಿಯಮಗಳು, ಕಾಂತೀಯ ಮತ್ತು ವಿದ್ಯುತ್ಕಾಂತೀಯ ಪರಿಣಾಮಗಳು, ಗುರುತ್ವಬಲ, ಶಕ್ತಿ ಸಂರಕ್ಷಣೆ, ಅನಾಟಮಿ ಮುಂತಾದವುಗಳ ಕುರಿತು ಚಟುವಟಿಕೆಗಳನ್ನು ಕೈಗೊಳ್ಳಲಾಯಿತು. ಈ ಕಾರ್ಯಕ್ರಮವನ್ನು ಜಿಲ್ಲೆಯ ಚಾಲುಕ್ಯ ಕರಿಯರ್ ಅಕಾಡೆಮಿ ರವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದೆ.






**5. ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ನೈರ್ಮಲ್ಯ ಜಾಗೃತಿ ಕಾರ್ಯಕ್ರಮ**;

ದಿನಾಂಕ 29.05.2022 ರಂದು ರಾಯಚೂರು ಜಿಲ್ಲೆಯ ರಾಯಚೂರು ತಾಲೂಕಿನ ಸರ್ಕಾರಿ ಪ್ರೌಢಶಾಲೆ ಇಡಪನೂರಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ಮುಟ್ಟಿನ ನೈರ್ಮಲ್ಯದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 80 ಜನ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಈ ಕಾರ್ಯಕ್ರಮಲದಲಿ ಋತುಚಕ್ರದ ಸಮಯದಲ್ಲಿ ಅನುಸರಿಸಬೇಕಾದ ನೈರ್ಮಲ್ಯದ ವಿಧಾನಗಳು, ಸೇವಿಸಬೇಕಾದ ಆಹಾರದ

ಕುರಿತು ತಿಳಿಸಲಾಯಿತು. ಈ ಕಾರ್ಯಕ್ರಮವನ್ನು ಪಿರಾಮಲ್ ಫೌಂಡೇಷನ್ ರವರ ಪ್ರಾಯೋಜಿತ್ವದಲ್ಲಿ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಭಾರತ ಜ್ಞಾನ ವಿಜ್ಞಾನ ಸಮಿತಿ, ಇವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಯಿತು.

### 6. ಪದ್ಮಭೂಷಣ ಶ್ರೀ ಡಾ.ಹೆಚ್. ನರಸಿಂಹಯ್ಯ ರವರ ಜನ್ಮದಿನೋತ್ಸವದ ಅಂಗವಾಗಿ ವಿದ್ಯಾರ್ಥಿಗಳಿಗೆ ವಿಜ್ಞಾನ ಸ್ಪರ್ಧೆಗಳ ಕಾರ್ಯಕ್ರಮ:

ದಿನಾಂಕ 07.06.2022 ರಂದು ಸರಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆ ದೇವನಪಲ್ಲಿಯಲ್ಲಿ ಪದ್ಮಭೂಷಣ ಶ್ರೀ ಡಾ. ಹೆಚ್. ನರಸಿಂಹಯ್ಯ ರವರ ಜನ್ಮದಿನೋತ್ಸವದ ಅಂಗವಾಗಿ ರಾಯಚೂರು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ವತಿಯಿಂದ ವಿದ್ಯಾರ್ಥಿಗಳಿಗೆ ವಿಜ್ಞಾನ ಸ್ಪರ್ಧೆಗಳ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಆರು ಮತ್ತು ಏಳನೇ ತರಗತಿ ವಿದ್ಯಾರ್ಥಿಗಳು ಸೇರಿದಂತೆ, ಒಟ್ಟು 59 ಜನ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ವಿಜ್ಞಾನ ಕ್ಷೇತ್ರದಲ್ಲಿ ಹೆಸರಾದ ಪದ್ಮಭೂಷಣ ಶ್ರೀ ಡಾ. ಹೆಚ್. ನರಸಿಂಹಯ್ಯ ರವರ ಯಶೋಗಾಥೆಯನ್ನು ವಿವರಿಸಲಾಯಿತು ಮತ್ತು ವಿಜ್ಞಾನ ರಸಪ್ರಶ್ನೆ, ವಿಜ್ಞಾನ ಪ್ರಬಂಧ ಮುಂತಾದ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮವು ಕೆಸ್ಟೆಪ್ಸ್ ಪ್ರಾಯೋಜಿತ್ವದಲ್ಲಿ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇವರ ಸಹಯೋಗದಲ್ಲಿ ಆಯೋಜಿಸಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ರೂ. 1,795/- ಗಳನ್ನು ವ್ಯಯಿಸಲಾಗಿದೆ





**ಸ.ಪ್ರೌಢ ಶಾಲೆ : ನೈರ್ಮಲ್ಯ ಜಾಗೃತಿ**

ರಾಯಚೂರು.ಮೇ.29–ತಾಲ್ಲೂಕಿನ ಇಡಪನೂರು ಸ.ಪ್ರೌಢ ಶಾಲೆಯಲ್ಲಿ ಮುಟ್ಟಿನ ನೈರ್ಮಲ್ಯದ ಜಾಗೃತಿ ದಿನದಂದು, ಪಿರಾಮಲ್ ಫೌಂಡೇಶನ್‌ನಿಂದ ಪ್ರೀತಿ(ಗಾಂಧಿ ಫೆಲೋ) ಭಾರತ ಜ್ಞಾನ ವಿಜ್ಞಾನ ಸಮಿತಿ ಉಪ–ಪ್ರದೇಶ ವಿಜ್ಞಾನ ಕೇಂದ್ರ, ರಾಯಚೂರು ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಹದಿಹರೆಯದವರಿಗೆ ಮುಟ್ಟಿನ ನೈರ್ಮಲ್ಯದ ಕುರಿತು ಒಂದು ದಿನದ ಅಧಿವೇಶನವನ್ನು ನಡೆಸಿದರು. ಸರ್ಕಾರಿ ಪ್ರೌಢಶಾಲೆ, ಇಡಪನೂರಿನ ಬಾಲಕಿಯರು. ಹದಿಹರೆಯದ ಹೆಣ್ಣುಮಕ್ಕಳಿಗೆ ಋತುಚಕ್ರದ ಸಮಯದಲ್ಲಿ ಅನುಸರಿಸಬೇಕಾದ ಪೌಷ್ಟಿಕಾಂಶದ ಸೇವನೆ ಮತ್ತು ಮುಟ್ಟಿನ ನೈರ್ಮಲ್ಯ ತಂತ್ರಗಳ ಬಗ್ಗೆ ಅರಿವು ನೀಡುವಲ್ಲಿ ಅಧಿವೇಶನವು ಕೇಂದ್ರೀಕೃತವಾಗಿತ್ತು. ಮುಟ್ಟಿನ ಸಮಯದಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳನ್ನು ಅರ್ಥಮಾಡಿಕೊಳ್ಳಲು ಮಕ್ಕಳು ತುಂಬಾ ಆಸಕ್ತಿ ವಹಿಸಿದರು.


### 7. ವಿದ್ಯಾರ್ಥಿಗಳಿಗೆ ವಜ್ಞಾನ ಸ್ಪರ್ಧೆಗಳ ಕಾರ್ಯಕ್ರಮ:

ದಿನಾಂಕ 07.06.2022 ರಂದು ಸರಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆ ದೇವನಪಲ್ಲಿಯಲ್ಲಿ ಪದ್ಮಭೂಷಣ ಶ್ರೀ ಡಾ. ಹೆಚ್. ನರಸಿಂಹಯ್ಯ ರವರ ಜನ್ಮದಿನೋತ್ಸವದ ಅಂಗವಾಗಿ ರಾಯಚೂರು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ವತಿಯಿಂದ ವಿದ್ಯಾರ್ಥಿಗಳಿಗೆ ವಿಜ್ಞಾನ ಸ್ಪರ್ಧೆಗಳ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಆರು ಮತ್ತು ಏಳನೇ ತರಗತಿ ವಿದ್ಯಾರ್ಥಿಗಳು ಸೇರಿದಂತೆ, ಒಟ್ಟು 59 ಜನ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ವಿಜ್ಞಾನ ಕ್ಷೇತ್ರದಲ್ಲಿ ಹೆಸರಾದ ಪದ್ಮಭೂಷಣ ಶ್ರೀ ಡಾ. ಹೆಚ್. ನರಸಿಂಹಯ್ಯ ರವರ ಯಶೋಗಾಥೆಯನ್ನು ವಿವರಿಸಲಾಯಿತು ಮತ್ತು ವಿಜ್ಞಾನ ರಸಪ್ರಶ್ನೆ, ವಿಜ್ಞಾನ ಪ್ರಬಂಧ ಮುಂತಾದ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಯಿತು.




**8. ಅಂತರರಾಷ್ಟ್ರೀಯ ಚಂದ್ರ ದಿನಾಚರಣೆ:**

ದಿನಾಂಕ 20.07.2022 ರಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ), ಜವಾಹರ್‌ಲಾಲ್ ನೆಹರು ತಾರಾಲಯ ಬೆಂಗಳೂರು ಇವರ ಸಹಯೋಗದಲ್ಲಿ ಅಂತರರಾಷ್ಟ್ರೀಯ ಚಂದ್ರ ದಿನಾಚರಣೆಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ರಾಯಚೂರು ಮತ್ತು ದೇವದುರ್ಗ ತಾಲೂಕು ಸೇರಿದಂತೆ 19 ಶಾಲೆಗಳ ಒಟ್ಟು 24 ವಿದ್ಯಾರ್ಥಿಗಳು ಮತ್ತು ಇಬ್ಬರು ಶಿಕ್ಷಕರು ಸೇರಿದಂತೆ ಒಟ್ಟು 26 ಜನ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಉದ್ಘಾಟಿಸಿದ ಡಾ. ಎ. ಎಸ್. ಕಿರಣ್‌ಕುಮಾರ್, ಮಾಜಿ ಅಧ್ಯಕ್ಷರು, ಇಸ್ರೋ ಹಾಗೂ ಅಧ್ಯಕ್ಷರು, ಬೇಸ್ ಇವರಿಂದ ಚಂದ್ರನ ಕುರಿತಾಗಿ ವಿಶೇಷ ಉಪನ್ಯಾಸವನ್ನು ಹೈಬ್ರಿಡ್ ಮೋಡ್‌ನಲ್ಲಿ ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳಿಗೆ 'ಚಟುವಟಿಕೆಗಳಲ್ಲಿ ಚಂದ್ರ' ಎಂಬ ಪ್ರಾಯೋಗಿಕ ಅಧಿವೇಶನದಲ್ಲಿ ಚಂದ್ರನ ಬಿಂಬಾವಸ್ಥೆಗಳು, ಚಂದ್ರನ ಭ್ರಮಣೆ ಮತ್ತು ಪರಿಭ್ರಮಣೆ, ಗ್ರಹಗಳ ಭ್ರಮಣೆಯ ಅಕ್ಷಗಳ ಓರೆಕೋನಗಳು ಇತ್ಯಾದಿ ವಿಷಯಗಳ ಬಗ್ಗೆ ತಿಳಿಸಿಕೊಡಲಾಯಿತು.




**9. ವಿಶ್ವ ಪರಿಸರ ದಿನಾಚರಣೆ:**

ದಿನಾಂಕ 08.08.2022 ರಂದು ರಾಯಚೂರು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ರೇಣುಕಾದೇವಿ ಶ್ರೀ ನರಸನಗೌಡ ಪಬ್ಲಿಕ್ ಶಾಲೆಯ 32 ಜನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಶ್ರೀ ಅಜೀತ್ ಕುಮಾರ್, ಕ್ಯುರೇಟರ್, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಇವರು 'ಇರುವುದೊಂದೇ ಭೂಮಿ' ಯ ಕುರಿತು ಉಪನ್ಯಾಸ ಕೈಗೊಂಡರು. ತದನಂತರ ವಿದ್ಯಾರ್ಥಿಗಳಿಗೆ ವನ್ಯಜೀವಿಗಳ ಕುರಿತು ರಸಪ್ರಶ್ನೆ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಯಿತು. ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಸಸಿ ವಿತರಣೆಯನ್ನು ಮಾಡಲಾಯಿತು.






**10. ಉದ್ಯಮಶೀಲ ಮಹಿಳೆ(ಉನ್ನತಿ ಸಖಿ)ಯರಿಗಾಗಿ ಆಹಾರ ಕಲಬೆರಕೆಯ ಕುರಿತು ಜಾಗೃತಿ ಕಾರ್ಯಕ್ರಮ:**

ದಿನಾಂಕ 01.09.2022 ರಾಯಚೂರು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ಇವರ ಸಹಯೋಗದಲ್ಲಿ ಉದ್ಯಮಶೀಲ ಮಹಿಳೆ(ಉನ್ನತಿ ಸಖಿ)ಯರಿಗಾಗಿ ಆಹಾರ ಕಲಬೆರಕೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 23 ಜನ ಮಹಿಳೆಯರು ಭಾಗವಹಿಸಿದ್ದರು. ಕುಮಾರಿ ವಿದ್ಯಾ, ಶಿಕ್ಷಣ ಸಹಾಯಕರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ರಾಯಚೂರು ಇವರು ಅಧಿವೇಶನವನ್ನು ಕೈಗೊಂಡು, ಆಹಾರ ಕಲಬೆರಕೆಯ ವಾಖ್ಯಾನ, ಕಾರಣಗಳು, ಕಲಬೆರಕೆಯ ವಿಧಾನಗಳು ಮತ್ತು ಅದನ್ನು ಕಂಡುಹಿಡಿಯುವ ವಿಧಾನ, ತಡೆಗಟ್ಟುವ ಕ್ರಮಗಳು ಮುಂತಾದ ವಿಷಯಗಳನ್ನು ಪ್ರಸ್ತುತಪಡಿಸಿದರು. ತದನಂತರ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಹಿಳೆಯರಿಗೆಲ್ಲರಿಗೂ ವಿಜ್ಞಾನ ಕೇಂದ್ರದ ವತಿಯಿಂದ ಆಹಾರ ಕಲಬೆರಕೆ ಪುಸ್ತಕಗಳನ್ನು ವಿತರಿಸುವುದರ ಮೂಲಕ ಕಾರ್ಯಕ್ರಮವನ್ನು ಸಮಾಪ್ತಿಗೊಳಿಸಲಾಯಿತು. ಈ ಕಾರ್ಯಕ್ರಮವನ್ನು ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ಪ್ರಾಯೋಜಿತ್ವದಲ್ಲಿ ಆಯೋಜಿಸಲಾಗಿರುತ್ತದೆ.





**11. ಯುವಜನತೆಯಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಉದ್ವೇಗವನ್ನು ಅಭಿವೃದ್ಧಿಪಡಿಸಿಕೊಳ್ಳುವ ಕುರಿತು ವ್ಯಕ್ತಿತ್ವ ವಿಕಸನ ಕಾರ್ಯಕ್ರಮ:**

ದಿನಾಂಕ 02.09.2022 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಭೌತಶಾಸ್ತ್ರ ವಿಭಾಗದ ವಿಜ್ಞಾನ ಪದವಿ ಅಧ್ಯಯನ ಮಾಡುತ್ತಿರುವ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಯುವಜನತೆಯಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಉದ್ವೇಗವನ್ನು ಅಭಿವೃದ್ಧಿಪಡಿಸಿಕೊಳ್ಳುವ ಕುರಿತು ವ್ಯಕ್ತಿತ್ವ ವಿಕಸನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು ಹಾಗೂ ಕಾರ್ಯಕ್ರಮದಲ್ಲಿ 88 ಜನ ವಿದ್ಯಾಥಿಗಳು ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾದ ಡಾ. ರತನ್ ಚವ್ಹಾಣ, ಪ್ರಾಧ್ಯಾಪಕರು, ನವೋದಯ ಶಿಕ್ಷಣ ಮಹಾವಿದ್ಯಾಲಯ ರಾಯಚೂರು ರವರು ವೈಜ್ಞಾನಿಕ ಮನೋಭಾವದ ಕುರಿತು ಅಧಿವೇಶನವನ್ನು ಕೈಗೊಂಡರು.




**12. ಪಾರ್ಶ್ವ ಸೂರ್ಯಗ್ರಹಣಾ ವೀಕ್ಷಣಾ ಕಾರ್ಯಕ್ರಮ:**

ದಿನಾಂಕ 25.10.2022 ರಂದು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಪಾರ್ಶ್ವ ಸೂರ್ಯಗ್ರಹಣಾ ವೀಕ್ಷಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಒಟ್ಟು 20 ಜನ ಸಾರ್ವಜನಿಕರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಗ್ರಹಣ ಸಂಭವಿಸಲು ಕಾರಣಗಳು, ಗ್ರಹಣದ ವೈಜ್ಞಾನಿಕ ಹಿನ್ನೆಲೆಯ ಮಾಹಿತಿಯನ್ನು ನೆರೆದಿದ್ದ ಸಾರ್ವಜನಿಕರಿಗೆ ಒದಗಿಸಲಾಯಿತು. ತದನಂತರ ಸಾರ್ವಜನಿಕರು ಸನ್ ಪ್ರೊಜೆಕ್ಷನ್ ಸಿಸ್ಟಮ್ ಮತ್ತು ಸೋಲಾರ್ ಫಿಲ್ಟರ್ ಕನ್ನಡಕಗಳ ಮೂಲಕ ಪಾರ್ಶ್ವಗ್ರಹಣದ ಹಂತಗಳನ್ನು ವೀಕ್ಷಿಸಿದರು. ಈ ಕಾರ್ಯಕ್ರಮವನ್ನು ಕೆಸ್ಟೆಪ್ಸ್ ಪ್ರಾಯೋಜಿತ್ವದಲ್ಲಿ ಆಯೋಜಿಸಲಾಗಿರುತ್ತದೆ.





**13. ಡಿಜಿಟಲ್ ಲಿಟ್ರಸಿ, ಸೈಬರ್ ಸೆಕ್ಯುರಿಟಿ ಮತ್ತು ಕೈಗಾರಿಕಾ ಸುರಕ್ಷತೆ ಕುರಿತು ಜಾಗೃತಿ ಕಾರ್ಯಕ್ರಮ**

ದಿನಾಂಕ 09.11.2022 ರಂದು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ರಾಯಚೂರಿನಲ್ಲಿ ಸರ್ಕಾರಿ ಕೈಗಾರಿಕೆ ತರಬೇತಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಸಾಕ್ಷರತಾ ಕಾರ್ಯಕ್ರಮಗಳಡಿ ಡಿಜಿಟಲ್ ಲಿಟ್ರಸಿ, ಸೈಬರ್ ಸೆಕ್ಯುರಿಟಿ ಮತ್ತು ಕೈಗಾರಿಕಾ ಸುರಕ್ಷತೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಎಲೆಕ್ಟ್ರಿಷಿಯನ್, ಎಲೆಕ್ಟ್ರಾನಿಕ್, ಮೆಕ್ಯಾನಿಕ್, ಫಿಟ್ಟರ್, ಟರ್ನರ್, ಎಂ ಎಂ ವಿ, ಎಂ.ಆರ್.ಎ.ಸಿ, ಕೋಪಾ, ವೆಲ್ಡರ್ ವಿಭಾಗದ ಒಟ್ಟು 163 ಜನ ವಿದ್ಯಾಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿಗಳಿಗೆ ಸೈಬರ ಸೆಕ್ಯುರಿಟಿಯ, ಡಿಜಿಟಲ್ ಸಾಕ್ಷರತೆ, ಇಂಡಸ್ಟ್ರಿಯಲ್ ಸೇಫ್ಟಿ ಅಧಿವೇಶನವನ್ನು ಕೈಗೊಳ್ಳಲಾಯಿತು. ಈ ಕಾರ್ಯಕ್ರಮವನ್ನು ಕೆಸ್ಟೆಪ್ಸ್ ಪ್ರಾಯೋಜಿತ್ವದಲ್ಲಿ ಆಯೋಜಿಸಲಾಗಿರುತ್ತದೆ ಮತ್ತು ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ರಾಯಚೂರು ಇವರ ತಾಂತ್ರಿಕ ಸಹಕಾರ ಪಡೆಯಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ರೂ. 34909/- ಗಳನ್ನು ವ್ಯಯಿಸಲಾಗಿರುತ್ತದೆ.





## 14. ಉದ್ಯಮ ಮತ್ತು ಮಾನವಕಲ್ಯಾಣದಲ್ಲಾಗುವ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ ಮತ್ತು ಅದರ ಪ್ರಯೋಜನಗಳ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ

ದಿನಾಂಕ 10.11.2022 ರಂದು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಉದ್ಯಮ ಮತ್ತು ಮಾನವಕಲ್ಯಾಣದಲ್ಲಾಗುವ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ ಮತ್ತು ಅದರ ಪ್ರಯೋಜನಗಳ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಎಲೆಕ್ಟ್ರಿಷಿಯನ್, ಎಲೆಕ್ಟ್ರಾನಿಕ್, ಮೆಕ್ಯಾನಿಕ್, ಫಿಟ್ಟರ್, ಟರ್ನರ್, ಎಂ ಎಂ ವಿ, ಎಂ.ಆರ್.ಎ.ಸಿ, ಕೋಪಾ, ವೆಲ್ಡರ್ ವಿಭಾಗದ ಒಟ್ಟು 160 ಜನ ವಿದ್ಯಾಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಕೈಗಾರಿಕೋದ್ಯಮಗಳ ಬೆಳವಣಿಗೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರ ಮತ್ತು ಅದಕ್ಕೆ ಬೇಕಾದ





ಕೌಶಲ್ಯಗಳು, ಕೈಗಾರಿಕೆ ಸ್ಥಾಪನೆಗಾಗಿ, ಬ್ಯಾಂಕಿನಿAದ ಒದಗಿಸಲಾಗುತ್ತಿರುವ ಲೋನ್ ಗಳು ಮತ್ತು ಅವುಗಳನ್ನು ಪಡೆಯುವ ಪ್ರಕ್ರಿಯೆ, ಯುವ ಆವಿಷ್ಕಾರ, ಸ್ಕಿಲ್ ಕನೆಕ್ಟ್ ಯೋಜನೆಯ ಕುರಿತು ಉಪನ್ಯಾಸಗಳನ್ನು ಕೈಗೊಳ್ಳಲಾಯಿತು.

**15. ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳಿಗಾಗಿ ವಿಜ್ಞಾನ ಕಾರ್ಯಾಗಾರ:**

ದಿನಾಂಕ 05.12.2022 ರಂದು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಜಿಲ್ಲೆಯ ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳಿಗಾಗಿ ವಿಜ್ಞಾನ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಾಗಾರದಲ್ಲಿ ಒಟ್ಟು 161 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಭೌತಶಾಸ್ತ್ರದ ಪರಿಕಲ್ಪನೆಗಳ ಸುಲಭ ಕಲಿಕಾ ವಿಧಾನಗಳ ಕುರಿತು, ಸ್ನಿಗ್ಧತೆ ಮತ್ತು ಮೇಲ್ಮೆ ಒತ್ತಡದ ಕುರಿತು ಮತ್ತು ಪ್ರಕೃತಿಯಲ್ಲಿ ಉರಗಗಳ ಪಾತ್ರ ಮತ್ತು ಅದರ ಮಹತ್ವ ಹಾಗೂ ಹಾವುಕಡಿತದ ಸಂದರ್ಭದಲ್ಲಿ ಪ್ರಥಮಚಿಕಿತ್ಸೆಯ ಕುರಿತು ಮತ್ತು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆಗಳ ಕುರಿತು ಅಧಿವೇಶನಗಳನ್ನು ಕೈಗೊಳ್ಳಲಾಯಿತು,






**16. ಆರೋಗ್ಯ ಮತ್ತು ಶುಚಿತ್ವದ ಕುರಿತು ಉಪನ್ಯಾಸ ಕಾರ್ಯಕ್ರಮ:**

ದಿನಾಂಕ 10.12.2022 ರಂದು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗಾಗಿ ಆರೋಗ್ಯ ಮತ್ತು ಶುಚಿತ್ವದ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಸ್ಟೇಷನ್ ಬಜಾರ್ ನ ಒಟ್ಟು 103 ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿಗಳಿಗೆ ದೈಹಿಕ ಆರೋಗ್ಯ ಮತ್ತು ಹಲ್ಲುಗಳ ಸ್ವಚ್ಛತೆ ಕುರಿತು ಅಧಿವೇಶನಗಳನ್ನು ಕೈಗೊಳ್ಳಲಾಯಿತು.






**17. ವೈಯಕ್ತಿಕ ಸ್ವಚ್ಛತೆ ಮತ್ತು ಹದಿಹರೆಯದವರ ಸಮಸ್ಯೆಗಳ ಕುರಿತು ಜಾಗೃತಿ ಕಾರ್ಯಕ್ರಮ:**

ದಿನಾಂಕ 16.12.2022 ರಂದು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಪದವಿಪೂರ್ವ ವಿದ್ಯಾರ್ಥಿನಿಯರಿಗಾಗಿ ವೈಯಕ್ತಿಕ ಸ್ವಚ್ಛತೆ ಮತ್ತು ಹದಿಹರೆಯದವರ ಸಮಸ್ಯೆಗಳ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು ಮುನ್ನೂರುವಾಡಿಯ ಒಟ್ಟು 109 ಜನ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ವೈಯಕ್ತಿಕ ಸ್ವಚ್ಛತೆ ಮತ್ತು ಹದಿಹರೆಯದವರ ಸಮಸ್ಯೆಗಳ ಕುರಿತು ಅಧಿವೇಶನಗಳನ್ನು ಕೈಗೊಳ್ಳಲಾಯಿತು.







**18. ರಾಷ್ಟ್ರೀಯ ಗಣಿತ ದಿನಾಚರಣೆಯ ಅಂಗವಾಗಿ ವಿದ್ಯಾರ್ಥಿಗಳಿಗೆ ಶಾಲಾ ಹಂತದಲ್ಲಿ ಗಣಿತ ಕಾರ್ಯಾಗಾರದ ಆಯೋಜನೆಗಾಗಿ ಗಣಿತ ಶಿಕ್ಷಕರಿಗೆ ಪೂರ್ವಭಾವಿ ತಯಾರಿ ಕಾರ್ಯಕ್ರಮ:**

ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ರಾಯಚೂರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರಾಯಚೂರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ದೇವದುರ್ಗ ಇವರುಗಳ ಸಂಯುಕ್ತಾಶ್ರಯದಲ್ಲಿ ದಿನಾಂಕ 20.12.2022 ರಂದು ರಾಷ್ಟ್ರೀಯ ಗಣಿತ ದಿನಾಚರಣೆಯ ಅಂಗವಾಗಿ ವಿದ್ಯಾರ್ಥಿಗಳಿಗೆ ಶಾಲಾ ಹಂತದಲ್ಲಿ ಗಣಿತ ಕಾರ್ಯಾಗಾರದ ಆಯೋಜನೆಗಾಗಿ

ಗಣಿತ ಶಿಕ್ಷಕರಿಗೆ ಪೂರ್ವಭಾವಿ ತಯಾರಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ದೇವದುರ್ಗ ತಾಲೂಕಿನಲ್ಲಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಒಟ್ಟು 46 ಜನ ಶಿಕ್ಷಕರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಗಣಿತ ಕಲಿಕೋಪಕರಣಗಳ ತಯಾರಿಕೆ ಮತ್ತು ವಿದ್ಯಾರ್ಥಿಗಳಿಂದ ಗಣಿತ ಮಾದರಿಗಳ ತಯಾರಿಕೆ ಮತ್ತು ಅದರ ಪ್ರಸ್ತುತಿಯ ಕುರಿತು ಅಧಿವೇಶನ ಕೈಗೊಳ್ಳಲಾಯಿತು.





**19. ರಾಷ್ಟ್ರೀಯ ಗಣಿತ ದಿನಾಚರಣೆಯ ಅಂಗವಾಗಿ ವಿದ್ಯಾರ್ಥಿಗಳಿಗೆ ಶಾಲಾ ಹಂತದಲ್ಲಿ ಗಣಿತ ಕಾರ್ಯಾಗಾರ:**

ದಿನಾಂಕ 22.12.2022 ರಿಂದ 31.01.2023 ರವರೆಗೆ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ರಾಯಚೂರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರಾಯಚೂರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ದೇವದುರ್ಗ ಇವರುಗಳ ಸಂಯುಕ್ತಾಶ್ರಯದಲ್ಲಿ ದೇವದುರ್ಗ ತಾಲೂಕಿನ 50 ಆಯ್ದ ಶಾಲೆ (ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು) ಗಳಲ್ಲಿ ವಿದ್ಯಾರ್ಥಿಗಳ ಗಣಿತ ಕಲಿಕಾ ಫಲಗಳ ಸುಧಾರಣೆಗಾಗಿ ಶಾಲಾ ಹಂತದಲ್ಲಿ ಗಣಿತ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮವನ್ನು ಕೆಸ್ಟೆಪ್ಸ್ ಪ್ರಾಯೋಜಿತ್ವದಲ್ಲಿ ಆಯೋಜಿಸಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ರೂ. 49875/-ಗಳನ್ನು ವ್ಯಯಿಸಲಾಗಿರುತ್ತದೆ.




**20. ವಿಜ್ಞಾನ ಸಂವಹನ ಮತ್ತು ಪ್ರಸರಣ ಕಾರ್ಯಕ್ರಮಗಳಡಿ ವಿದ್ಯಾರ್ಥಿಗಳಿಗೆ ಶಾಲಾ ಮಟ್ಟದಲ್ಲಿ ವಿಜ್ಞಾನ ಸ್ಪರ್ಧೆ**

ದಿನಾಂಕ 28.12.2023 ರಿಂದ 31.01.2023 ರವರೆಗೆ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ರಾಯಚೂರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಶಾಲಾ ಮಟ್ಟದಲ್ಲಿ ಎಂಟು ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ವಿಜ್ಞಾನ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ.

21. **ಬೆಳಕು-ಪ್ರತಿಫಲನ ಮತ್ತು ವಕ್ರೀಭವನ**





ದಿನಾಂಕ 07.01.2023 ರಂದು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಶ್ರೀಮತಿ ರೇಣುಕಾದೇವಿ ಶ್ರೀ ನರಸನಗೌಡ ಪಬ್ಲಿಕ್ ಶಾಲೆ ಆಶಾಪೂರಿನ ಎಸ್ ಎಸ್ ಎಲ್ ಸಿ ತರಗತಿಯ ಹತ್ತು ವಿದ್ಯಾರ್ಥಿಗಳಿಗೆ ಬೆಳಕು-ಪ್ರತಿಫಲನ ಮತ್ತು ವಕ್ರೀಭವನ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ವಿದ್ಯಾರ್ಥಿಗಳಿಗೆ ಬೆಳಕು, ಪ್ರತಿಫಲನದ ನಿಯಮಗಳು, ವಕ್ರೀಭವನ ಮುಂತಾದವುಗಳ ಕುರಿತು ಚಟುವಟಿಕೆಗಳನ್ನು ಕೈಗೊಳ್ಳಲಾಯಿತು.






**ಸಂಪರ್ಕ:**

ಕ್ಯುರೇಟರ್
ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ
ವಿಜ್ಞಾನ ಬೆಟ್ಟ, ರಾಷ್ಟ್ರಕವಿ ಕುವೆಂಪು ವನ, ಮಂತ್ರಾಲಯ ರಸ್ತೆ
ರಾಯಚೂರು-584103
ದೂರವಾಣಿ : 9916124929
ಇಮೇಲ್: srsc.raichur@gmail.

# ಕಾರವಾರ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ

ಕೈಗಾ ನಿಲಯ, ಕೋಡಿಬಾಗ್, ಕಾರವಾರ-581302

---

**ಪರಿಚಯ:**

ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರವು ಜೂನ್ 1 2017 ರಿಂದ ಕಾರ್ಯನಿರ್ವಹಿಸುತ್ತಿದೆ. ಕೇಂದ್ರವು ವಿನೋದ ವಿಜ್ಞಾನ ಗ್ಯಾಲರಿ, ವರ್ಣರಂಜಿತ ಪರಮಾಣು ಗ್ಯಾಲರಿ, ಮತ್ಸಾಲಯ ಗ್ಯಾಲರಿ ಹಾಗೂ ಸಂಗ್ರಹಾಲಯದ ಸೌಲಭ್ಯಗಳನ್ನು ಹೊಂದಿರುತ್ತದೆ.

2022-23ನೇ ಸಾಲಿನ ಇಲ್ಲಿವರೆಗೂ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಜನಸಾಮಾನ್ಯರಿಗಾಗಿ ಒಟ್ಟು 28 ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ವಿಜ್ಞಾನ ಬೇಸಿಗೆ ಶಿಬಿರವನ್ನು ಮೇ 2022ರಂದು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದು ಶಿಬಿರಾರ್ಥಿಗಳಿಗೆ ವಿಜ್ಞಾನ ಮತ್ತು ಗಣಿತ ವಿಷಯಕ್ಕೆ ಸಂಬಂಧ ಪಟ್ಟ ಹಲವಾರು ಮಾದರಿ ತಯಾರಿಕೆ ಹಾಗೂ ಕೈಗಾ ಅಣು ವಿದ್ಯುತ್ ಸ್ಥಾವರಕ್ಕೆ ಭೇಟಿಯನ್ನು ನೀಡಲಾಯಿತು. ಜವಾಹರ್ ಲಾಲ್ ನೆಹರು ತಾರಾಲಯ ಬೆಂಗಳೂರು ಹಾಗೂ ಇಸ್ರೊ ಇವರ ಸಹಯೋಗದಲ್ಲಿ **"ಅಂತರಾಷ್ಟ್ರೀಯ ಚಂದ್ರ ದಿನಾಚರಣೆ"** ಯ ಪ್ರಯುಕ್ತ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಅಂತರ್ಜಾಲದ ಮುಖಾಂತರ ಚಂದ್ರ ವಿಷಯದ ಮೇಲೆ ಚಟುವಟಿಕಾ ಕಾರ್ಯಾಗಾರ ಹಾಗೂ ಉಪನ್ಯಾಸವನ್ನು ಹಮ್ಮಿಕೊಳ್ಳಲಾಯಿತು. **ಸ್ವಾತಂತ್ರ್ಯದ ಅಮೃತ ಮಹೋತ್ಸವ** ದ ಪ್ರಯುಕ್ತ ಪ್ರಬಂಧ ಸ್ಪರ್ಧೆ, ಚಿತ್ರಕಲೆ ಸ್ಪರ್ಧೆ, ರಸಪ್ರಶ್ನೆ ಮತ್ತು ಪ್ರಾಢಶಾಲಾ ಹಾಗೂ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಕೈಗಾ ಅಣುವಿದ್ಯುತ್ ಸ್ಥಾವರಕ್ಕೆ ಭೇಟಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ವಿಶೇಷವಾಗಿ ಉತ್ತರ ಕನ್ನಡ ಜಿಲ್ಲೆಯ ಜೀವವೈವಿಧ್ಯತೆಯ ಬಗ್ಗೆ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿ ಮುಂದಿನ ಭವಿಷ್ಯದಲ್ಲಿ ಅವರ ಶಿಕ್ಷಣಕ್ಕೆ ಸಹಾಯವಾಗಲು **Green Panthers of Uttara Kannada** ಎಂಬ ವಿನೂತನ ಕಾರ್ಯಕ್ರಮವನ್ನು ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಯಶಸ್ವಿಯಾಗಿ ಹಮ್ಮಿಕೊಳ್ಳಲಾಯಿತು. ದಿನಾಂಕ 25.10.2022ರಂದು **ಪಾರ್ಶ್ವ ಸೂರ್ಯ ಗ್ರಹಣ ವೀಕ್ಷಣೆ** ಹಾಗೂ ದಿನಾಂಕ 08.11.2022ರಂದು **ಪಾರ್ಶ್ವ ಚಂದ್ರ ಗ್ರಹಣ ವೀಕ್ಷಣೆ** ಕಾರ್ಯಕ್ರಮವನ್ನು, ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಹಾಗೂ ಸಾರ್ವಜನಿಕರಿಗಾಗಿ ಹಮ್ಮಿಕೊಳ್ಳಲಾಯಿತು. ಡಿಸೆಂಬರ 2022 ರಂದು **ಉತ್ತಮ ಆಡಳಿತ ಮಾಸ**ದ ಅಂಗವಾಗಿ ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗಾಗಿ ಕಾರ್ಯಾಗಾರ, ಆಕಾಶ ವೀಕ್ಷಣೆ, ವಿಜ್ಞಾನ-ಗಣಿತ ಮಾದರಿ ಪ್ರದರ್ಶನ ಸ್ಪರ್ಧೆ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

**2022-23ರ ಸಾಲಿನಲ್ಲಿ ನಡೆಸಲಾದ ಕಾರ್ಯಕ್ರಮಗಳು**

1. **ಶೂನ್ಯ ನೆರಳಿನ ದಿನ**

ದಿನಾಂಕ 30.04.2022 ಶುಕ್ರವಾರದಂದು ಕಾರವಾರದಲ್ಲಿ ಮದ್ಯಾಹ್ನ 12.31 ಕ್ಕೆ ಸೂರ್ಯನು ಶಿರೋಬಿಂದುವಿನ ಮೇಲೆ ಹಾದು ಹೋದ ಪರಿಣಾಮ ಸುಮಾರು 1 ನಿಮಿಷದ ಅವಧಿಗೆ ನೆರಳು ಕನಿಷ್ಟ ಪ್ರಮಾಣದಲ್ಲಿ ಗೋಚರಿಸಿದೆ. ಆದ್ದರಿಂದ ಇಂತಹ ದಿನವನ್ನು ಶೂನ್ಯ ನೆರಳಿನ ದಿನ ಎಂದು ಕರೆಯುತ್ತಾರೆ. ಈ ವಿದ್ಯಮಾನವನ್ನು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ಕಾರವಾರದಲ್ಲಿ ವೀಕ್ಷಿಸಲಾಯಿತು. ಈ ವಿದ್ಯಮಾನದಲ್ಲಿ ಸುಮಾರು 37 ವಿದ್ಯಾರ್ಥಿಗಳು ಭಾಗವಹಿಸಿದ್ದರು.





2. **ವಿಜ್ಞಾನ ಬೇಸಿಗೆ ಶಿಬಿರ**

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು, ಜಿಲ್ಲಾಡಳಿತ ಉತ್ತರ ಕನ್ನಡ ಹಾಗೂ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಸಂಯುಕ್ತ ಆಶ್ರಯದಲ್ಲಿ **"ವಿಜ್ಞಾನ ಬೇಸಿಗೆ ಶಿಬಿರ 2022"** ಮೇ 9 2022ರಿಂದ ಮೇ 15 2022ರವರೆಗೆ ಬೆಳಿಗ್ಗೆ 10.00 ರಿಂದ ಸಂಜೆ 5.00 ಗಂಟೆಯ ವರೆಗೆ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರದಲ್ಲಿ ಹಮ್ಮಿಕೊಳ್ಳಲಾಯಿತು. ಶಿಬಿರಾರ್ಥಿಗಳಿಗೆ ವಿಜ್ಞಾನ ಮತ್ತು ಗಣಿತ ವಿಷಯಕ್ಕೆ ಸಂಬಂಧ ಪಟ್ಟ ಹಲವಾರು ಮಾದರಿ ತಯಾರಿಕೆ ಹಾಗೂ ಕೈಗಾ ಅಣು ವಿದ್ಯುತ್ ಸ್ಥಾವರಕ್ಕೆ ಭೇಟಿಯನ್ನು ನೀಡಿದರು. ಈ ಶಿಬಿರದಲ್ಲಿ ಸುಮಾರು 48 ವಿದ್ಯಾರ್ಥಿಗಳು ಭಾಗವಹಿಸಿದ್ದರು.




3. **ಸಮುದ್ರ ತೀರ ಸ್ವಚ್ಚತೆ ಹಾಗೂ ಪರಿಸರ ಜಾಗೃತಿ ಕಾರ್ಯಕ್ರಮ**

ಕಾರವಾರ ವಲಯ, ಕೋಸ್ಟಲ್ ಮತ್ತು ಮರೈನ್ ಇಕೋಸಿಸ್ಟಮ್ ಘಟಕ ಕಾರವಾರ, ಶಿವಾಜಿ ಶಿಕ್ಷಣ ಮಹಾವಿದ್ಯಾಲಯ ಬಾಡ ಕಾರವಾರ ಹಾಗೂ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ



17.05.2022ರಂದು ಸಮುದ್ರ ತೀರ ಸ್ವಚ್ಛತಾ ಹಾಗೂ ಪರಿಸರ ಜಾಗೃತಿ ಕಾರ್ಯಕ್ರಮದ ಪ್ರಯುಕ್ತ ಶಿವಾಜಿ ಶಿಕ್ಷಣ ಮಹಾವಿದ್ಯಾಲಯ ಬಾಡ ಕಾರವಾರದ ವಿದ್ಯಾರ್ಥಿಗಳಿಗಾಗಿ **ಪರಿಸರ ಜಾಗೃತಿ ಮೂಡಿಸುವ ಉಪನ್ಯಾಸ ಕಾರ್ಯಕ್ರಮ**ವನ್ನು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರದಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸೇರಿ 49 ಜನರು ಭಾಗವಹಿಸಿದ್ದರು.



## 4. Green Panthers of Uttara Kannada (ಮೇ 2022- ಅಕ್ಟೋಬರ್ 2022)

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು, ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ ಮತ್ತು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಸಹಯೋಗದಲ್ಲಿ Green Panthers of Uttara Kannada ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಮೊದಲನೇ ಹಂತದಲ್ಲಿ ತರಬೇತಿಯನ್ನು ಪಡೆದ ವಿಜ್ಞಾನ ಶಿಕ್ಷಕರು ಉತ್ತರ ಕನ್ನಡ ಜಿಲ್ಲೆಯ ತಮ್ಮ ತಾಲೂಕಿನಿಂದ ಆಸಕ್ತ ವಿದ್ಯಾರ್ಥಿಗಳನ್ನು ತಲಾ 100 ವಿದ್ಯಾರ್ಥಿಗಳಂತೆ ಒಟ್ಟು 1100 ವಿದ್ಯಾರ್ಥಿಗಳನ್ನು ಮುಂದಿನ ಹಂತದ ಕಾರ್ಯಾಗಾರಕ್ಕೆ ಆಯ್ಕೆ ಮಾಡಿದರು. ತಾಲೂಕುವಾರು ಬಹು ಆಯ್ಕೆ ಪರೀಕ್ಷೆ ನಡೆಸಿ ತಲಾ 15(ಒಟ್ಟು 165) ವಿದ್ಯಾರ್ಥಿಗಳಿಗೆ ವಿಷಯವಾರು (ವನ್ಯಜೀವಿ, ಸಸ್ಯ ಹಾಗೂ ಸಾಗರ ಅಧ್ಯಯನ) ತರಬೇತಿ ಹಮ್ಮಿಕೊಳ್ಳಲಾಯಿತು.





## 5. ವಿಶ್ವ ಪರಿಸರ ದಿನಾಚರಣೆ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ ಉತ್ತರ ಕನ್ನಡ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಛೇರಿ ಕಾರವಾರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕಾರವಾರ, ಅರಣ್ಯ ಇಲಾಖೆ ಕಾರವಾರ ವಿಭಾಗ ಕಾರವಾರ, ಸಾರ್ವಜನಿಕ ಶಿಕ್ಷಣ ಇಲಾಖೆ ಉ.ಕ. ಕಾರವಾರ ಹಾಗೂ ಉಪ–ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಸಹಯೋಗದೊಂದಿಗೆ "**ವಿಶ್ವ ಪರಿಸರ ದಿನಾಚರಣೆ 2022**" ರ ಪ್ರಯುಕ್ತ ಕಾರವಾರ ತಾಲೂಕಿನ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಚಿತ್ರಕಲಾ ಮತ್ತು ಪ್ರಬಂಧ ಸ್ಪರ್ಧೆ ಹಾಗೂ ಉಪನ್ಯಾಸ

ಕಾರ್ಯಕ್ರಮವನ್ನು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರದಲ್ಲಿ ದಿನಾಂಕ: 05.06.2022 ರಂದು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸೇರಿ 84 ಜನರು ಭಾಗವಹಿದ್ದರು.




**6. ಅಂತರಾಷ್ಟ್ರೀಯ ಚಂದ್ರ ದಿನಾಚರಣೆ – ವಿದ್ಯಾರ್ಥಿಗಳಿಗೆ ಕಾರ್ಯಾಗಾರ ಹಾಗೂ ಉಪನ್ಯಾಸ ಕಾರ್ಯಕ್ರಮ**

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು, ಜವಾಹರ್ ಲಾಲ್ ನೆಹರು ತಾರಾಲಯ ಬೆಂಗಳೂರು, ಇಸ್ರೋ ಬೆಂಗಳೂರು ಹಾಗೂ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಸಹಯೋಗದಲ್ಲಿ **"ಅಂತರಾಷ್ಟ್ರೀಯ ಚಂದ್ರ ದಿನಾಚರಣೆ"** ಯನ್ನು ದಿನಾಂಕ 20.07.2022 ರಂದು ಅಂತರ್ಜಾಲದ ಮುಖಾಂತರ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರದಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸೇರಿ 46 ಜನರು ಭಾಗವಹಿದ್ದರು.




**7. ಜಿಲ್ಲಾ ಮಟ್ಟದ ಸರ್. ಸಿ.ವಿ.ರಾಮನ್ ವಿಜ್ಞಾನ ರಸಪ್ರಶ್ನೆ ಸ್ಪರ್ಧೆ "ಥಟ್ ಅಂತ ಹೇಳಿ"**

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರಕಾರ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಬೆಂಗಳೂರು, ಉಪನಿರ್ದೇಶಕರ ಕಾರ್ಯಾಲಯ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉತ್ತರ ಕನ್ನಡ, ಮತ್ತು ಉಪ-ಪ್ರದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಸಹಯೋಗದೊಂದಿಗೆ ಕಾರವಾರ ಶೈಕ್ಷಣಿಕ ಜಿಲ್ಲೆಯ ಪ್ರೌಢಶಾಲಾ

ವಿದ್ಯಾರ್ಥಿಗಳಿಗಾಗಿ "ಜಿಲ್ಲಾ ಮಟ್ಟದ ಸರ್. ಸಿ.ವಿ.ರಾಮನ್ ವಿಜ್ಞಾನ ರಸಪ್ರಶ್ನೆ ಸ್ಪರ್ಧೆ ಥಟ್ ಅಂತ ಹೇಳಿ" ಕಾರ್ಯಕ್ರಮವನ್ನು ಗುರುವಾರ ದಿನಾಂಕ: 20.08.2022 ರಂದು ಉಪ-ಪ್ರದೇಶಿಕ ವಿಜ್ಞಾನ ಕೇಂದ್ರ ಕಾರವಾರದಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸೇರಿ 46 ಜನರು ಭಾಗವಹಿದ್ದರು.




**8. ಸ್ವಾತಂತ್ರ್ಯದ ಅಮೃತ ಮಹೋತ್ಸವ- ಪ್ರಬಂಧ, ಚಿತ್ರಕಲಾ, ರಸಪ್ರಶ್ನೆ ಸ್ಪರ್ಧೆ, ಉಪನ್ಯಾಸ ಕಾರ್ಯಕ್ರಮ ಹಾಗೂ ಕೈಗಾ ಅಣುವಿದ್ಯುತ್ ಸ್ಥಾವರಕ್ಕೆ ಭೇಟಿ**


ಎನ್.ಪಿ.ಸಿ.ಐ.ಎಲ್ ಕೈಗಾ ಹಾಗೂ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ಕಾರವಾರ ಇವರ ಸಹಯೋಗದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಮಾಚರಣೆಯ ಪ್ರಯುಕ್ತ ಕಾರವಾರ ತಾಲೂಕಿನ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ದಿನಾಂಕ 22.08.2022 ರಿಂದ 25.08.2022ರ ವರೆಗೆ **ಪ್ರಬಂಧ ಸ್ಪರ್ಧೆ, ಚಿತ್ರಕಲೆ ಸ್ಪರ್ಧೆ, ರಸಪ್ರಶ್ನೆ ಮತ್ತು ಪ್ರಾಢಶಾಲಾ ಹಾಗೂ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಕೈಗಾ ಅಣುವಿದ್ಯುತ್ ಸ್ಥಾವರಕ್ಕೆ ಭೇಟಿ ನೀಡುವ ಕಾರ್ಯಕ್ರಮ**ವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸೇರಿ 1150 ಜನರು ಭಾಗವಹಿದ್ದರು.




**9. ರಾಷ್ಟ್ರ ಮಟ್ಟದ ಉಪನ್ಯಾಸ**

ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಸಹಯೋಗದಲ್ಲಿ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಜೀವವೈವಿಧ್ಯ ವಿಷಯದ ಮೇಲೆ ದಿನಾಂಕ 28.08.2022 ರಂದು **"ರಾಷ್ಟ್ರ ಮಟ್ಟದ ಉಪನ್ಯಾಸ** (National Level Webinar)" ವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸೇರಿ 251 ಜನರು ಭಾಗವಹಿದ್ದರು




**10. ಅಂತರಾಷ್ಟ್ರೀಯ ಕಡಲ ಸ್ವಚ್ಛತಾ ದಿನಾಚರಣೆ**

ಭೂ ವಿಜ್ಞಾನ ಸಚಿವಾಲಯ ಭಾರತ ಸರ್ಕಾರ ಹಾಗೂ ಜಿಲ್ಲಾಡಳಿತ ಉತ್ತರ ಕನ್ನಡ ಸಹಯೋಗದಲ್ಲಿ **ಅಂತರಾಷ್ಟ್ರೀಯ ಕಡಲ ಸ್ವಚ್ಛತಾ ದಿನಾಚರಣೆ** ಅಂಗವಾಗಿ ನಗರದ ರವೀಂದ್ರನಾಥ ಟ್ಯಾಗೋರ ಕಡಲತೀರದಲ್ಲಿ ಸ್ವಚ್ಛ ಸಾಗರ-ಸುರಕ್ಷಿತ ಸಾಗರ ಸ್ವಚ್ಛತಾ ಅಭಿಯಾನವನ್ನು ದಿನಾಂಕ 17.09.2022 ರಂದು ಬೆಳಿಗ್ಗೆ 7.00ರಿಂದ 10.00 ಗಂಟೆವರೆಗೆ ಹಮ್ಮಿಕೊಳ್ಳಲಾಯಿತು. ನಮ್ಮ ಕೇಂದ್ರದ ಸಿಬ್ಬಂದಿಗಳು ನಗರದ ಸೆಂಟ್ ಮೈಕೆಲ್ಸ್ ಕಾನ್ವೆಂಟ್ ಪ್ರೌಢಶಾಲೆ ಹಾಗೂ ಸಾಗರ ವಿಜ್ಞಾನ ಸ್ನಾತಕೋತ್ತರ ಕಾಲೇಜು ವಿದ್ಯಾರ್ಥಿಗಳು ಸೇರಿ ಒಟ್ಟು 150 ಭಾಗವಹಿಸಿದ್ದರು.






**11. ವಿಶ್ವ ವನ್ಯಜೀವಿ ಸಪ್ತಾಹ 2022- ಉತ್ತರ ಕನ್ನಡ ಜಿಲ್ಲೆಯ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ**

ಕರ್ನಾಟಕ ಅರಣ್ಯ ಇಲಾಖೆ, ವಲಯ ಕೋಸ್ಟಲ್ & ಮರೈನ್ ಇಕೋಸಿಸ್ಟಮ್ ಘಟಕ ಕಾರವಾರ ಹಾಗೂ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಸಹಯೋಗದಲ್ಲಿ ವಿಶ್ವ ವನ್ಯಜೀವಿ ಸಪ್ತಾಹ 2022ಆಚರಣೆಯ ಅಂಗವಾಗಿ "ವನ್ಯಜೀವಿಗಳು" ಎಂಬ ವಿಷಯದ ಮೇಲೆ ಉತ್ತರ ಕನ್ನಡ ಜಿಲ್ಲೆಯ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ **ಚಿತ್ರಕಲಾ ಸ್ಪರ್ಧೆ ಹಾಗೂ ಉಪನ್ಯಾಸ ಕಾರ್ಯಕ್ರಮ**ವನ್ನು ದಿನಾಂಕ 01.10.2022 ರಂದು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರದಲ್ಲಿ ಹಮ್ಮಿಕೊಳ್ಳಲಾಯಿತು. ಈ



ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಸೇರಿ 60 ಜನರು ಭಾಗವಹಿಸಿದ್ದರು.



**12.ಪಾರ್ಶ್ವ ಸೂರ್ಯ ಗ್ರಹಣ ವೀಕ್ಷಣೆ**

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು, ಜಿಲ್ಲಾಡಳಿತ ಉತ್ತರ ಕನ್ನಡ, ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಹಾಗೂ ಆಗಸ 360 ಶಿರಸಿ ಇವರ ಸಹಯೋಗದಲ್ಲಿ ದಿನಾಂಕ 25.10.2022 ರಂದು ಕಾಳಿ ನದಿ ಸೇತುವೆ ಸಂಗಮ ಕಾರವಾರದಲ್ಲಿ **ಪಾರ್ಶ್ವ ಸೂರ್ಯ ಗ್ರಹಣ ವೀಕ್ಷಣೆ** ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು, ವಿವಿಧ ಇಲಾಖೆಯ ಅಧಿಕಾರಿಗಳು, ಸಾರ್ವಜನಿಕರು ಸೇರಿ 100 ಜನರು ಭಾಗವಹಿಸಿದ್ದರು.





**13.ಪಾರ್ಶ್ವ ಚಂದ್ರ ಗ್ರಹಣ ವೀಕ್ಷಣೆ**

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು, ಜಿಲ್ಲಾಡಳಿತ ಉತ್ತರ ಕನ್ನಡ ಹಾಗೂ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಸಹಯೋಗದಲ್ಲಿ ದಿನಾಂಕ 08.11.2022 ರಂದು ಕಾಳಿ ನದಿ ಉದ್ಯಾನವನ ಕಾರವಾರದಲ್ಲಿ **ಪಾರ್ಶ್ವ ಚಂದ್ರ ಗ್ರಹಣ ವೀಕ್ಷಣೆ** ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು, ವಿವಿಧ ಇಲಾಖೆಯ ಅಧಿಕಾರಿಗಳು, ಸಾರ್ವಜನಿಕರು ಸೇರಿ 150 ಜನರು ಭಾಗವಹಿಸಿದ್ದರು.





**14.ವಿಜ್ಞಾನ ಶಿಕ್ಷಕರ ಕಾರ್ಯಾಗಾರ**

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ ಬೆಂಗಳೂರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು, ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ ಉತ್ತರ ಕನ್ನಡ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಶಿರಸಿ ಶೈಕ್ಷಣಿಕ ಜಿಲ್ಲೆ ಉ.ಕ., ಉಪ -ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ, ವಿಜ್ಞಾನ ಬಳಗ ಯಲ್ಲಾಪುರ ಹಾಗೂ ವಿಶ್ವದರ್ಶನ ಶಿಕ್ಷಣ ಸಂಸ್ಥೆ ಯಲ್ಲಾಪುರ ಇವರ ಸಹಯೋಗದಲ್ಲಿ **"ರಾಷ್ಟ್ರೀಯ ವಿಜ್ಞಾನ ದಿನಾಚರಣೆ 2022"** ರ ಪ್ರಯುಕ್ತ ವಿಜ್ಞಾನ ವಿಷಯದ ಪಠ್ಯಕ್ರಮದಲ್ಲಿ ಬರುವ ಕ್ಲಿಷ್ಟಕರ ವಿಷಯದ ಬಗ್ಗೆ ಯಲ್ಲಾಪುರ ಹಾಗೂ ಮುಂಡಗೋಡ ತಾಲೂಕಿನ ವಿಜ್ಞಾನ ಶಿಕ್ಷಕರಿಗೆ **"ವಿಜ್ಞಾನ ಶಿಕ್ಷಕರ ಕಾರ್ಯಾಗಾರ"** ವನ್ನು ವಿಶ್ವದರ್ಶನ ಪದವಿ ಪೂರ್ವ ಕಾಲೇಜು ಯಲ್ಲಾಪುರದಲ್ಲಿ ದಿನಾಂಕ 01.12.2022 ರಂದು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ 90 ಶಿಕ್ಷಕರು ಭಾಗವಹಿಸಿದ್ದರು.






## 15.ಗಣಿತ ಶಿಕ್ಷಕರ ಕಾರ್ಯಾಗಾರ

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ ಬೆಂಗಳೂರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು, ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ ಉತ್ತರ ಕನ್ನಡ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಶಿರಸಿ ಶೈಕ್ಷಣಿಕ ಜಿಲ್ಲೆ ಉ.ಕ., ಉಪ -ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ, ಗಣಿತ ಬಳಗ ಯಲ್ಲಾಪುರ ಹಾಗೂ ವಿಶ್ವದರ್ಶನ ಶಿಕ್ಷಣ ಸಂಸ್ಥೆ ಯಲ್ಲಾಪುರ ಇವರ ಸಹಯೋಗದಲ್ಲಿ **"ರಾಷ್ಟ್ರೀಯ ಗಣಿತ ದಿನಾಚರಣೆ 2022"** ರ ಪ್ರಯುಕ್ತ ಗಣಿತ ವಿಷಯದ ಪಠ್ಯಕ್ರಮದಲ್ಲಿ ಬರುವ ಕ್ಲಿಷ್ಟಕರ ವಿಷಯದ ಬಗ್ಗೆ ಯಲ್ಲಾಪುರ ಹಾಗೂ ಮುಂಡಗೋಡ ತಾಲೂಕಿನ ಗಣಿತ ಶಿಕ್ಷಕರಿಗೆ **"ಗಣಿತ ಶಿಕ್ಷಕರ ಕಾರ್ಯಾಗಾರ"** ವನ್ನು ವಿಶ್ವದರ್ಶನ ಪದವಿ ಪೂರ್ವ ಕಾಲೇಜು ಯಲ್ಲಾಪುರದಲ್ಲಿ ದಿನಾಂಕ 02.12.2022 ರಂದು ಹಮ್ಮಿಕೊಳ್ಳಲಾಯಿತು.  ಈ ಕಾರ್ಯಕ್ರಮದಲ್ಲಿ 90 ಶಿಕ್ಷಕರು ಭಾಗವಹಿಸಿದ್ದರು.






## 16. ಆಕಾಶ ವೀಕ್ಷಣೆ ಹಾಗೂ ನಕ್ಷತ್ರಪುಂಜಗಳ ಬಗ್ಗೆ ಚಟುವಟಿಕೆಗಳು

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು, ಜಿಲ್ಲಾಡಳಿತ ಉತ್ತರ ಕನ್ನಡ ಹಾಗೂ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಸಹಯೋಗದೊಂದಿಗೆ **Good Governance Month** ಅಂಗವಾಗಿ ದೂರದರ್ಶಕದ ಮೂಲಕ ದಿನಾಂಕ 10.12.2022 ಸ್ವಾಮಿ ವಿವೇಕಾನಂದ ಪ್ರೌಢಶಾಲೆ ಕೋಡಿಬಾಗ ಕಾರವಾರದಲ್ಲಿ ವಿದ್ಯಾರ್ಥಿಗಳಿಗೆ ರಂದು ಸಂಜೆ 5.00 ಗಂಟೆಯಿಂದ 6.00 ಗಂಟೆಯವರೆಗೆ ನಕ್ಷತ್ರ ಪುಂಜಗಳ ಬಗ್ಗೆ ಚಟುವಟಿಕೆ ನಂತರ 7.00 ಗಂಟೆಯಿಂದ 9.00 ಗಂಟೆಯವರೆಗೆ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಹಾಗೂ ಅಲ್ಲಿನ ಸಾರ್ವಜನಿಕರಿಗೆ ಚಂದ್ರ ಹಾಗೂ ಗುರು, ಶನಿ ಮತ್ತು ಮಂಗಳ ಗ್ರಹಗಳನ್ನು ವಿಕ್ಷೀಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು, ಸಾರ್ವಜನಿಕರು ಸೇರಿ 56 ಜನರು ಭಾಗವಹಿಸಿದ್ದರು.




## 17. ವಿಜ್ಞಾನ ಮಾದರಿ ತಯಾರಿಕಾ ಸ್ಪರ್ಧೆ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು, ಜಿಲ್ಲಾಡಳಿತ ಉತ್ತರ ಕನ್ನಡ ಹಾಗೂ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಸಹಯೋಗದೊಂದಿಗೆ **Good Governance Month** ಅಂಗವಾಗಿ ದಿನಾಂಕ 17.12.2022 ರಂದು ಸರಕಾರಿ ಪ್ರೌಢಶಾಲೆ ಕಾರವಾರದ ವಿದ್ಯಾರ್ಥಿಗಳಿಗಾಗಿ ವಿಜ್ಞಾನ ಮಾದರಿ ತಯಾರಿಕಾ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸೇರಿ 54 ಜನರು ಭಾಗವಹಿಸಿದ್ದರು.




18. **ಗಣಿತ ರಸಪ್ರಶ್ನೆ ಸ್ಪರ್ಧೆ**

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಬೆಂಗಳೂರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ ಉತ್ತರ ಕನ್ನಡ ಹಾಗೂ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಸಹಯೋಗದೊಂದಿಗೆ ರಾಷ್ಟ್ರೀಯ ಗಣಿತ ದಿನಾಚರಣೆ 2022ರ ಅಂಗವಾಗಿ ಕಾರವಾರ ತಾಲೂಕಿನ ಪ್ರೌಢಶಾಲೆಗಳ 8 ಹಾಗೂ 9ನೇ ತರಗತಿಯ ವಿದ್ಯಾರ್ಥಿಗಳಿಗೆ ದಿನಾಂಕ: 22.12.2022 ಗುರುವಾರದಂದು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರದಲ್ಲಿ **ಲಿಖಿತ ಗಣಿತ ರಸಪ್ರಶ್ನೆ ಸ್ಪರ್ಧೆ, ಉಪನ್ಯಾಸ ಹಾಗೂ ಬಹುಮಾನ ವಿತರಣಾ ಕಾರ್ಯಕ್ರಮ**ವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸೇರಿ 86 ಜನರು ಭಾಗವಹಿಸಿದ್ದರು.




19. **ಚಿತ್ರಕಲಾ ಸ್ಪರ್ಧೆ**

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು, ಜಿಲ್ಲಾಡಳಿತ ಉತ್ತರ ಕನ್ನಡ ಹಾಗೂ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಸಹಯೋಗದೊಂದಿಗೆ **Good Governance Month** ಅಂಗವಾಗಿ ದಿನಾಂಕ 24.12.2022 ರಂದು ಆಶಾ ನಿಕೇತನ ವಸತಿ (ಮೂಕ ಮತ್ತು ಕಿವುಡ ಮಕ್ಕಳ) ಶಾಲೆ ಕಾರವಾರದ ವಿದ್ಯಾರ್ಥಿಗಳಿಗಾಗಿ **ಚಿತ್ರಕಲಾ ಸ್ಪರ್ಧೆ**ಯನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸೇರಿ 56 ಜನರು ಭಾಗವಹಿಸಿದ್ದರು.




20. **ಸಾಗರ ಹಾಗೂ ಕಾಂಡ್ಲಾ ಸಸ್ಯಗಳ ಮೇಲೆ ಉಪನ್ಯಾಸ ಕಾರ್ಯಕ್ರಮ**

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು, ಜಿಲ್ಲಾಡಳಿತ ಉತ್ತರ ಕನ್ನಡ ಹಾಗೂ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಸಹಯೋಗದೊಂದಿಗೆ **Good Governance Month** ಅಂಗವಾಗಿ ದಿನಾಂಕ 30.12.2022 ಹಾಗೂ 31.12.2022 ರಂದು ಸಾಗರ ವಿಜ್ಞಾನ ಅಧ್ಯಯನ ಸಂಸ್ಥೆ ಕಾರವಾರದ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರದಲ್ಲಿ **ಉಪನ್ಯಾಸ ಕಾರ್ಯಕ್ರಮ**ವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸೇರಿ 80 ಜನರು ಭಾಗವಹಿಸಿದ್ದರು.





**21.30 ನೇ ಜಿಲ್ಲಾ ಮಟ್ಟದ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ 2022**

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಬೆಂಗಳೂರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉತ್ತರ ಕನ್ನಡ ಹಾಗೂ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಸಹಯೋಗದಲ್ಲಿ ದಿನಾಂಕ 10.01.2023 ರಂದು **"30 ನೇ ಜಿಲ್ಲಾ ಮಟ್ಟದ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ 2022"** ಕಾರ್ಯಕ್ರಮವನ್ನು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರದಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸೇರಿ 32 ಜನರು ಭಾಗವಹಿಸಿದ್ದರು.





**22. ಉಪನ್ಯಾಸ ಕಾರ್ಯಕ್ರಮ**

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಬೆಂಗಳೂರು, ಜಿಲ್ಲಾಡಳಿತ ಉತ್ತರ ಕನ್ನಡ ಹಾಗೂ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಸಹಯೋಗದಲ್ಲಿ ದಿನಾಂಕ 22.01.2023 ರಂದು ಸಾಗರ ವಿಷಯದ ಮೇಲೆ ಒಂದು ದಿನದ **ಉಪನ್ಯಾಸ ಕಾರ್ಯಕ್ರಮ** ವನ್ನು ಪದವಿ ವಿದ್ಯಾರ್ಥಿಗಳಿಗಾಗಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರದಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸೇರಿ 46 ಜನರು ಭಾಗವಹಿಸಿದ್ದರು.




**23.ಭವಿಷ್ಯ ನಿಧಿ ನಿಮ್ಮ ಬಳಿಗೆ ಜಿಲ್ಲಾ ಸಂಪರ್ಕ ಕಾರ್ಯಕ್ರಮ**

ಜಿಲ್ಲಾಡಳಿತ ಉತ್ತರ ಕನ್ನಡ, ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಹಾಗೂ ನೌಕರರ ಭವಿಷ್ಯ ನಿಧಿ ಸಂಸ್ಥೆ ಜಿಲ್ಲಾ ಕಛೇರಿ ಕಾರವಾರ ಇವರ ಸಹಯೋಗದಲ್ಲಿ ದಿನಾಂಕ 27.01.2023 ರಂದು ಭವಿಷ್ಯ ನಿಧಿಯ ಯೋಜನೆ ಹಾಗೂ ಪ್ರಯೋಜನೆಗಳು ಎಂಬ ವಿಷಯದ ಮೇಲೆ ಒಂದು ದಿನದ **ಭವಿಷ್ಯ ನಿಧಿ ನಿಮ್ಮ ಬಳಿಗೆ ಜಿಲ್ಲಾ ಸಂಪರ್ಕ ಕಾರ್ಯಕ್ರಮ** ವನ್ನು ಉತ್ತರ ಕನ್ನಡ ಜಿಲ್ಲೆಯ ವಿವಿಧ ಇಲಾಖೆಯ ಸಿಬ್ಬಂದಿಗಳಿಗೆ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರದಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ 44 ಜನರು ಭಾಗವಹಿಸಿದ್ದರು.




**24.ರಾಷ್ಟ್ರೀಯ ಶಿಕ್ಷಣ ನೀತಿ 2020ರ ತರಬೇತಿ ಕಾರ್ಯಾಗಾರ**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉತ್ತರ ಕನ್ನಡ, ಕ್ಷೇತ್ರಶಿಕ್ಷಣಾಧಿಕಾರಿಗಳ ಕಾರ್ಯಾಲಯಾ ಕಾರವಾರ ಹಾಗೂ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಸಹಯೋಗದಲ್ಲಿ ದಿನಾಂಕ 31.01.2023 ರಂದು ಕಾರವಾರ ತಾಲೂಕಿನ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಗಾಗಿ **ರಾಷ್ಟ್ರೀಯ ಶಿಕ್ಷಣ ನೀತಿ 2020ರ**

**ತರಬೇತಿ ಕಾರ್ಯಾಗಾರ** ವನ್ನು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರದಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಶಿಕ್ಷಕರು, ಕಾರವಾರ ತಾಲೂಕಿನ ಸಿ.ಆರ್.ಪಿಗಳು ಸೇರಿ ಸುಮಾರು 85 ಜನರು ಭಾಗವಹಿಸಿದ್ದರು.





**ಸಂಪರ್ಕ:**

ಕ್ಯುರೇಟರ್
ಕಾರವಾರ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ
ಕೈಗಾ ನಿಲಯ, ಕೋಡಿಬಾಗ್, ಕಾರವಾರ-58130,
ದೂರವಾಣಿ : 08382 225626
ಇಮೇಲ್: srsc.karwar@gmail.com

## ಬೀದರ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ

ಕಬೀರ್‌ವಾಡ, ಗದಗಿ ರಸ್ತೆ, ಬೀದರ- 585401

**ಪರಿಚಯ:**

ಬೀದರ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವು ವಿಜ್ಞಾನದ ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳಲು ವಿನೋದ ವಿಜ್ಞಾನ ಗ್ಯಾಲರಿ ಹಾಗೂ ಹೊರಾಂಗಣ ವಿಜ್ಞಾನ ಉದ್ಯಾನವನವನ್ನು ಒಳಗೊಂಡಿದ್ದು ಇದರ ಜೊತೆಗೆ ವಿವಿಧ ತತ್ವ ಆಧಾರಿತ ಪರಿಕಲ್ಪನೆಗಳನ್ನು ಒಳಗೊಂಡಿದ್ದು, ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಮುಕ್ತ ಪ್ರವೇಶವನ್ನು ಹೊಂದಿದೆ. ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಶಕರು, ವಿಜ್ಞಾನ ಕೇಂದ್ರದಲ್ಲಿನ ಪ್ರದರ್ಶಿಕೆಗಳನ್ನು ಉಪಯೋಗಿಸಿಕೊಂಡು ವಿವಿಧ ವೈಜ್ಞಾನಿಕ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಇದಲ್ಲದೆ, ವಿಜ್ಞಾನ ಕೇಂದ್ರವು ಹಲವು ವೈಜ್ಞಾನಿಕ ಚಟುವಟಿಕೆ, ಉಪನ್ಯಾಸ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಹಮ್ಮಿಕೊಳ್ಳುತ್ತಿದೆ.

**ಈ ಕೆಳಕಂಡ ಕಾರ್ಯಕ್ರಮಗಳನ್ನು 2022-23ನೇ ಸಾಲಿನಲ್ಲಿ ಆಯೋಜಿಸಲಾಯಿತು:**

**1. ವಿಶ್ವ ಆಹಾರ ದಿನ**

ವಿಶ್ವ ಆಹಾರ ದಿನವನ್ನು ವಿಜ್ಞಾನ ಕೇಂದ್ರದಲ್ಲಿ ದಿನಾಂಕ: 15.12.2022 ರಂದು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಒಟ್ಟು 63 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಆಹಾರದಲ್ಲಿನ ಪೋಷಕಾಂಶಗಳು ಹಾಗೂ ಆಹಾರ ಕಲಬೆರಕೆಯ ವಿಷಯಗಳ ಬಗ್ಗೆ ವಿದ್ಯಾರ್ಥಿಗಳು ಮಾಹಿತಿ ಪಡೆದರು.




**2. ರಾಷ್ಟ್ರೀಯ ಗಣಿತ ದಿನ**

ಬೀದರ ವಿಜ್ಞಾನ ಕೇಂದ್ರದಲ್ಲಿ ರಾಷ್ಟ್ರೀಯ ಗಣಿತ ದಿನದ ಪ್ರಯುಕ್ತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಗಣಿತದ ವಿಷಯದ ಬಗ್ಗೆ ಉಪನ್ಯಾಸ ಏರ್ಪಡಿಸಲಾಗಿತ್ತು. 71 ವಿದ್ಯಾರ್ಥಿಗಳು ಮತ್ತು 10 ಶಿಕ್ಷಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.






**3. ಭಾರತ ರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯಿ ರವರ ಜೀವನದ ಸಾಧನೆ ಮತ್ತು ವಿಜ್ಞಾನಕ್ಕೆ ನೀಡಿರುವ ಕೊಡುಗೆಯ ಬಗ್ಗೆ ವಿಶೇಷ ವಿಡಿಯೋ ಪ್ರದರ್ಶನ ಮತ್ತು ಪ್ರಬಂಧ ಸ್ಪರ್ಧೆ**

ಭಾರತ ರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರ ಹುಟ್ಟು ಹಬ್ಬದ ಪ್ರಯುಕ್ತ ಶ್ರೀ ವಾಜಪೇಯಿ ರವರ ಜೀವನ ಸಾಧನೆ ಮತ್ತು ಅವರು ವಿಜ್ಞಾನಕ್ಕೆ ನೀಡಿರುವ ಕೊಡುಗೆಗೆ ಸಂಬಂಧಿಸಿದ ವಿಡಿಯೋ ಪ್ರದರ್ಶನ ಮತ್ತು ಪ್ರಬಂಧ ಸ್ಪರ್ದೆಯನ್ನು ದಿನಾಂಕ: 29.12.2022 ರಂದು ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ 41 ವಿದ್ಯಾರ್ಥಿಗಳು ಹಾಗೂ 10 ಶಿಕ್ಷಕರು ಭಾಗವಹಿಸಿದರು.




4. **ವಿಜ್ಞಾನದ ಪಠ್ಯಕ್ರಮ ಮತ್ತು ಪ್ರಚಲಿತ ವಿಜ್ಞಾನದ ವಿದ್ಯಮಾನಗಳ ಕುರಿತ ರಸಪ್ರಶ್ನೆ ಕಾರ್ಯಕ್ರಮ**

ಬೀದರ ವಿಜ್ಞಾನ ಕೇಂದ್ರದಲ್ಲಿ ದಿನಾಂಕ: 31.12.2022 ರಂದು ವಿಜ್ಞಾನದ ಪಠ್ಯಕ್ರಮ ಮತ್ತು ಪ್ರಚಲಿತ ವಿಜ್ಞಾನದ ವಿದ್ಯಮಾನಗಳ ಕುರಿತ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಬಾಲ್ಕಿಯ ಸರ್ಕಾರಿ ಹಿರಿಯ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದರು.




ಬೀದರ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಪ್ರತಿ ದಿನ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಭೇಟಿ ನೀಡುತ್ತಿದ್ದಾರೆ. ವಿಜ್ಞಾನ ಕೇಂದ್ರದಲ್ಲಿರುವ ವೈಜ್ಞಾನಿಕ ತತ್ವ ಆಧಾರಿತ ಒಳಾಂಗಣ ಮತ್ತು ಹೊರಾಂಗಣ ಪ್ರದರ್ಶಿಕೆಗಳನ್ನು ಪ್ರಯೋಗಿಕವಾಗಿ ಎಲ್ಲಾ ವಿದ್ಯಾರ್ಥಿಗಳಿಗೂ ವಿವರಿಸಲಾಗುತ್ತಿದೆ. ಅಲ್ಲದೆ, ಕೇಂದ್ರಕ್ಕೆ ಭೇಟಿ ನೀಡಿದ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ವಿಶೇಷ ಪ್ರಯೋಗಾಧಾರಿತವಾಗಿ ವಿಜ್ಞಾನದ ಪರಿಕಲ್ಪನೆಗಳನ್ನು ಅರ್ಥ ಮಾಡಿಸಲು ಉಪನ್ಯಾಸವನ್ನು ಆಯೋಜಿಸಲಾಗುತ್ತಿದೆ. ಬೀದರ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಏಪ್ರಿಲ್ 2022 ರಿಂದ ಜನವರಿ 2023 ರವರೆಗೆ 7500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭೇಟಿ ನೀಡಿದ್ದಾರೆ.

## Govt. High School, Gadgi
Dt: 019/08/22



No of Students:- 29 No. of Teacher:- 01

## Morarji Desai School & College, Kamthana
Dt: 02/09/22




No of Students:- 95 No. of Teacher:- 07

## Govt. Urdu Med. High School, Kamathana
Dt: 02/09/22




No of Students:- 35 No. of Teacher:- 03

## Govt. High School Ghotal Basavakalyan
Dt:- 02/09/22



No of Students:- 90 No. of Teacher:- 06


**ಸಂಪರ್ಕ:**

ಕ್ಯುರೇಟರ್
ಬೀದರ್ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ
ಕಬೀರ್‌ವಾಡ, ಗದಗಿ ರಸ್ತೆ, ಬೀದರ- 585401
ದೂರವಾಣಿ : 8123255604
ಇಮೇಲ್: srscbidar@gmail.com

**ಪರಿಚಯ :**

ಡಾ. ಎಚ್. ನರಸಿಂಹಯ್ಯ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವು ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕೆಸ್ಟೆಪ್ಸ್ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾಡಳಿತದ ಸಹಯೋಗದೊಂದಿಗೆ ಸ್ಥಾಪಿಸಲಾಗಿದೆ. ಹಿರಿಯ ಚೇತನ, ವಿದ್ವಾಂಸ, ಪದ್ಮಭೂಷಣ ಡಾ. ಎಚ್ ನರಸಿಂಹಯ್ಯ ನವರ ಸ್ಮರಣಾರ್ಥ ಅವರ ಹುಟ್ಟೂರಾದ ಹೊಸೂರಿನ ಸಮೀಪ ಒಂದು ಸುಸಜ್ಜಿತ ಉಪಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಲಾಗಿರುತ್ತದೆ.

ಈ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಮೂಲ ಉದ್ದೇಶ ಜನಸಾಮಾನ್ಯರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆ, ವಿಜ್ಞಾನ ಮತ್ತು ತಂತ್ರಜ್ಞಾನ ಬೆಳವಣಿಗೆಯ ಬಗ್ಗೆ ಆಸಕ್ತಿ, ಕ್ರಿಯಾಶೀಲತೆ ಮತ್ತು ಕುತೂಹಲವನ್ನು ಕೆರಳಿಸುವ ಹಾಗೂ ವಿದ್ಯಾರ್ಥಿಗಳಿಗೆ ತಿಳುವಳಿಕೆ, ನವೀನ ಚಿಂತನೆಯನ್ನು ಮೂಡಿಸುವ ಆಶಯವನ್ನು ಹೊಂದಿರುತ್ತದೆ. ವಿಜ್ಞಾನ ಕೇಂದ್ರವನ್ನು ಪೂರ್ಣ ಪ್ರಮಾಣದಲ್ಲಿ 2022 ರ ಪೆಬ್ರುವರಿ 28 ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಲೋಕಾರ್ಪಾಣೆಗೊಳಿಸಲಾಗಿರುತ್ತದೆ.

2022-23ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಹಾಗೂ ಸಾರ್ವಜನಿಕರಿಗೆ ವಿವಿಧ ಕಾರ್ಯಾಗರಗಳನ್ನು ವಿಜ್ಞಾನ ಕೇಂದ್ರದ ವತಿಯಿಂದ ಹಮ್ಮಿಕೊಳ್ಳಲಾಗಿರುತ್ತದೆ. ಈ ಮೂಲಕ ವೈಜ್ಞಾನಿಕ ಮನೋಭಾವನೆ ವಿಜ್ಞಾಣ ಮತ್ತು ತಂತ್ರಜ್ಞಾನ ಬೆಳವಣಿಗೆಯ ಬಗ್ಗೆ ಆಸಕ್ತಿ ಕ್ರಿಯಾಶೀಲತೆ ಮತ್ತು ಕುತೂಹಲವನ್ನು ಕೆರಳಿಸುವ ಕಾರ್ಯವನ್ನು ಮಾಡಲಾಗುತ್ತಿದೆ.

1) **ಮಕ್ಕಳ ವಿಜ್ಞಾನ ಶಿಬಿರ:**

ಡಾ. ಎಚ್ ನರಸಿಂಹಯ್ಯ ಉಪಪ್ರಾದೇಶಿಕ ವಿಜ್ಞಾನ ಕೇಂದ್ರದ ವತಿಯಿಂದ ಮಕ್ಕಳ ವಿಜ್ಞಾನ ಶಿಬಿರವನ್ನು ದಿನಾಂಕ : 28-06-2022 ರಿಂದ 02-07-2022ರ 05 ದಿನಗಳ ಅವದಿಗೆ ಆದರ್ಶ ವಿದ್ಯಾಲಯ ಗೌರಿಬಿದನೂರು ಇಲ್ಲಿ ಆಯೋಜಿಸಲಾಗಿತ್ತು. ಮಕ್ಕಳ ವಿಜ್ಞಾನ ಶಿಬಿರದಲ್ಲಿ ಆಕ್ಸ್.ಫರ್ಡ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ದಿನಾಂಕ: 28-06-2022ರಂದು ಉದ್ಘಾಟನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸದರಿ ಶಿಬಿರದ ಉದ್ಘಾಟನೆಯನ್ನು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ವಿಶ್ರಾಂತ ವಿಜ್ಞಾನಿ ಪ್ರೋ: ಕೆ.ಪಿ.ಜೆ ರೆಡ್ಡಿ ರವರಿಂದ ನೆರವೇರಿಸಲಾಯಿತು.




2) **ಸೂರ್ಯಗ್ರಹಣ ವೀಕ್ಷಣೆ ಕಾರ್ಯಕ್ರಮ:**

ಡಾ. ಎಚ್ ನರಸಿಂಹಯ್ಯ ಉಪಪ್ರಾದೇಶಿಕ ವಿಜ್ಞಾನ ಕೇಂದ್ರದ ವತಿಯಿಂದ ದಿನಾಂಕ 25-10-2022 ರಂದು ಸಂಭವಿಸಿದ ಸೂರ್ಯಗ್ರಹಣವನ್ನು ವೀಕ್ಷಿಸಲು ಸಾರ್ವಜನಿಕರಿಗೆ ಹಾಗೂ ಶಾಲಾ ವಿದ್ಯಾರ್ಥಿಗಳಿಗೆ ಅನುವು ಮಾಡಲಾಗಿತ್ತು. ಸೂರ್ಯಗ್ರಹಣ ವೀಕ್ಷಣೆಗೆ ಟೆಲಿಸ್ಕೋಪ್ ಹಾಗೂ ಸೋಲಾರ್ ಫಿಲ್ಟರ್ ವ್ಯವಸ್ಥೆ ಮಾಡಲಾಗಿತ್ತು. ಈ ಕಾರ್ಯಕ್ರಮದಲ್ಲಿ 275 ಜನರು ಪಾಲ್ಗೊಂಡಿದ್ದರು.




**3) ಗಣಿತ ಸಂವೇದನೆ ಕಾರ್ಯಕ್ರಮ:**

2022-23ನೇ ಸಾಲಿನಲ್ಲಿ ಸರ್ಕಾರಿ ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಗೆ ದಿನಾಂಕ 29-10-2022 ರಂದು ಗಣಿತ ಸಂವೇದನಾ ಕಾರ್ಯಾಗಾರವನ್ನು ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ವಿಜ್ಞಾನ ಸಂವಾಹಕರಾದ ಶ್ರೀ ವಿ.ಶಿವಶಂಕರ ಶಾಸ್ತ್ರೀ ಕೋಲಾರ ರವರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ 50 ವಿದ್ಯಾರ್ಥಿಗಳು ವಿವಿಧ ಶಾಲೆಗಳಿಂದ ಭಾಗವಹಿಸಿದ್ದರು.





**4) ವಿಜ್ಞಾನ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಅವಕಾಶಗಳ ಬಗ್ಗೆ ಕಾರ್ಯಾಗಾರ:**

2022-23ನೇ ಸಾಲಿನಲ್ಲಿ ಪದವಿ ವಿಜ್ಞಾನ ವಿದ್ಯಾರ್ಥಿಗಳಿಗೆ ವಿಜ್ಞಾನ ಕೇಂದ್ರದಲ್ಲಿ ದಿನಾಂಕ 28-10-2022 ರಂದು ಉನ್ನತ ಶಿಕ್ಷಣದ ಅವಕಾಶಗಳು ಎಂಬ ವಿಷಯದ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಕ್ಸ್ ಫರ್ಡ್ ವಿಶ್ವ ವಿದ್ಯಾಲಯದ ಹಳೆಯ ವಿದ್ಯಾರ್ಥಿ ಲಿಯಾನ್ ರೋಮಾನೋ ಬ್ರಾಂಡ್ಟ್ ರವರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ 50 ವಿದ್ಯಾರ್ಥಿಗಳು ವಿವಿಧ ಪದವಿ ಕಾಲೇಜುಗಳಿಂದ ಭಾಗವಹಿಸಿದ್ದರು.





**5) ಗಣ್ಯರು ಹಾಗೂ ಸಾರ್ವಜನಿಕರ ಭೇಟಿ :**

2022-23ನೇ ಸಾಲಿನಲ್ಲಿ ವಿಜ್ಞಾನ ಕೇಂದ್ರಕ್ಕೆ ವಿದ್ಯಾರ್ಥಿಗಳು ಸಾರ್ವಜನಿಕರು ಹಾಗೂ ಅನೇಕ ಗಣ್ಯರು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿ, ವಿಜ್ಞಾನ ಕೇಂದ್ರದಲ್ಲಿರುವ ವಿಜ್ಞಾನ ಮಾದರಿಗಳು ಮತ್ತು ಪ್ರದರ್ಶಿಕೆಗಳ ಬಗ್ಗೆ ಮಾಹಿತಿ ಪಡೆಯುತ್ತಿದ್ದಾರೆ ಹಾಗೂ ವಿಜ್ಞಾನ ಕೇಂದ್ರದಲ್ಲಿರುವ ತಾರಾಲಯ ವೀಕ್ಷಿಸಿ ಮಾಹಿತಿ ಪಡೆಯುತ್ತಿದ್ದಾರೆ. 2022-23ನೇ ಸಾಲಿನ ಒಟ್ಟು ಫಲಾನುಭವಿಗಳ ಸಂಖ್ಯೆ: 22468






**ಸಂಪರ್ಕ:**
ನೋಡಲ್ ಅಧಿಕಾರಿ
ಡಾ. ಹೆಚ್. ನರಸಿಂಹಯ್ಯ ಉಪಪ್ರಾದೇಶಿಕ ವಿಜ್ಞಾನ ಕೇಂದ್ರ
ಹೊಸೂರು, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ – 561208
ದೂರವಾಣಿ: 08155-285994
ಇಮೇಲ್: drhnschosur@gmail.com

## ಬಾಗಲಕೋಟೆ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ

ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ – 587104

**ಪರಿಚಯ :**
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿಯ ನೆರವಿನಿಂದ ಬಾಗಲಕೋಟೆಯ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವು ತೋಟಗಾರಿಕೆ ವಿಶ್ವವಿದ್ಯಾಲಯ ಆವರಣದಲ್ಲಿ ಸ್ಥಾಪಿಸಲ್ಪಟ್ಟಿದೆ. ಹಾಗೆಯೇ, ಜಿಲ್ಲೆಯ ವಿದ್ಯಾರ್ಥಿಗಳಲ್ಲಿ, ಶಿಕ್ಷಕರಲ್ಲಿ ಹಾಗೂ ಜನಸಾಮಾನ್ಯರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದ ಬೆಳವಣಿಗೆಗೆ ಮತ್ತು ವಿಜ್ಞಾನದ ಬಗ್ಗೆ ಜಾಗೃತಿಯನ್ನು ಮೂಡಿಸಲು ಹಾಗೂ ವೈಜ್ಞಾನಿಕ ಮನೋಭಾವ ಸೃಷ್ಟಿಸಲು ಈ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಉದ್ದೇಶವಾಗಿದೆ.

**ಕಾರ್ಯಾಗಾರಗಳು ಮತ್ತು ಉಪನ್ಯಾಸಗಳು:**

1. **ಕಾರ್ಯಾಗಾರ : "ಜೀವನ ಮಟ್ಟ ಸುಧಾರಿಸುವಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವ: ಕೃಷಿ ಕ್ಷೇತ್ರ" ಮತ್ತು "ಇ-ಆಡಳಿತದ ಮಹತ್ವ"**
   - **ದಿನಾಂಕ: ೨೨.೧೨.೨೦೨೨** ರಂದು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆಯ ಸಭಾಭವನದಲ್ಲಿ, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಗಲಕೋಟೆ ಇವರ ಸಂಯುಕ್ತ ಆಶ್ರಯದಲ್ಲಿ ಉತ್ತಮ ಆಡಳಿತದ ಮಾಸಾಚರಣೆಯ ಅಂಗವಾಗಿ "ಜೀವನ ಮಟ್ಟ ಸುಧಾರಿಸುವಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವ: ಕೃಷಿ ಕ್ಷೇತ್ರ" ಮತ್ತು "ಇ-ಆಡಳಿತದ ಮಹತ್ವ" ಎಂಬ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು, ಈ ಕಾರ್ಯಕ್ರಮದಲ್ಲಿ ಬಾಗಲಕೋಟೆ ಜಿಲ್ಲೆಯ ಒಟ್ಟು ೫೦ ಪ್ರೌಢಶಾಲಾ ವಿಜ್ಞಾನ ಶಿಕ್ಷಕರು ಭಾಗವಹಿಸಿದ್ದರು.
   - ಕಾರ್ಯಕ್ರಮದ ಉದ್ಘಾಟಕರಾಗಿ ಶ್ರೀ ಕೆ.ಡಿ.ಬಡಿಗೇರ, ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಗಲಕೋಟೆ ರವರು ಆಗಮಿಸಿದ್ದರು, ಅದರಂತೆ ಇತರ ಗಣ್ಯರೊಂದಿಗೆ ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.
   - ಮುಂದುವರೆದು, ಕಾರ್ಯಕ್ರಮದ ಅಧ್ಯಕ್ಷರು ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ (ವಿಷಯ: ಇ-ಆಡಳಿತದ ಮಹತ್ವ) ಆಗಮಿಸಿದ್ದ ಡಾ. ರಾಮಚಂದ್ರ ನಾಯಕ್, ಡೀನ್ ವಿದ್ಯಾರ್ಥಿ ಕಲ್ಯಾಣ, ತೋ.ವಿ.ವಿ ಹಾಗೂ ಸದಸ್ಯರು ಉ.ಪ್ರಾ.ವಿ.ಕೇಂದ್ರ ಬಾಗಲಕೋಟೆ ರವರು ಮಾತನಾಡಿ ಪ್ರಸ್ತುತ ದಿನಮಾನಗಳಲ್ಲಿ ಇ-ಆಡಳಿತವು ಯಾವ ರೀತಿಯಾಗಿ ಸಹಾಯಕವಾಗಿದೆ ಮತ್ತು ಅದರ ಉಪಯೋಗಗಳನ್ನು ಸಾರ್ವಜನಿಕರು ಯಾವ ರೀತಿಯಾಗಿ ಪಡೆದುಕೊಳ್ಳಬೇಕೆಂದು ಉದಾಹರಣೆಗಳ ಮೂಲಕ ವಿಸ್ತೃತವಾಗಿ ತಿಳಿಸಿದರು.
   - ಮುಂದುವರೆದು, ಕಾರ್ಯಾಗಾರದ ಇನ್ನೋರ್ವ ಸಂಪನ್ಮೂಲ ವ್ಯಕ್ತಿಗಳಾದಂತಹ (ವಿಷಯ: ಜೀವನ ಮಟ್ಟ ಸುಧಾರಿಸುವಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರ) ಡಾ. ರಾಮನಗೌಡ ಎಸ್.ಹೆಚ್. ಸಹಾಯಕ ಪ್ರಾಧ್ಯಾಪಕರು, ಕೀಟಶಾಸ್ತ್ರ ವಿಭಾಗ, ತೋ.ವಿ.ವಿ ಬಾಗಲಕೋಟೆ ರವರು ಮಾತನಾಡಿ, ಮಾನವನ ಜೀವನ ಶೈಲಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಯಿಂದ ಆಗುತ್ತಿರುವ ಅನುಕೂಲಗಳು ಮತ್ತು ಅನಾನುಕೂಲಗಳನ್ನು ವಿವರವಾಗಿ ತಿಳಿಸಿದರು.





2. **ಉಪನ್ಯಾಸ : "ಆಹಾರ ಪದ್ಧತಿಯಲ್ಲಿ ಸಿರಿ ಧಾನ್ಯಗಳ ಮಹತ್ವ"**

- **ದಿನಾಂಕ: ೧೨.೧೨.೨೦೨೨** ರಂದು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆಯ ಸಭಾಭವನದಲ್ಲಿ, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ಹಾಗೂ ಮುರಾರ್ಜಿ ದೇಸಾಯಿ ವಸತಿ ಪೌಢ ಶಾಲೆ, ಮುರನಾಳ (ಪು.ಕೇ.) ಇವರ ಸಂಯುಕ್ತ ಆಶ್ರಯದಲ್ಲಿ ಉತ್ತಮ ಆಡಳಿತದ ಮಾಸಾಚರಣೆಯ ಅಂಗವಾಗಿ"ಆಹಾರ ಪದ್ಧತಿಯಲ್ಲಿ ಸಿರಿ ಧಾನ್ಯಗಳ ಮಹತ್ವ" ಎಂಬ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು, ಈ ಕಾರ್ಯಕ್ರಮದಲ್ಲಿ ಮುರಾರ್ಜಿ ದೇಸಾಯಿ ವಸತಿ ಪೌಢ ಶಾಲೆ, ಮುರನಾಳ (ಪು.ಕೇ.) ಯ ಒಟ್ಟು ೭೦ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.
- ಕಾರ್ಯಕ್ರಮದ ಉದ್ಘಾಟಕರಾಗಿ ಡಾ|| ಟಿ.ಬಿ.ಅಳ್ಳೊಳ್ಳಿ , ಕುಲಸಚಿವರು ತೋ.ವಿ.ವಿ. ಬಾಗಲಕೋಟೆ, ಸದಸ್ಯ ಕಾರ್ಯದರ್ಶಿಗಳು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆ ರವರು ಆಗಮಿಸಿದ್ದರು, ಅದರಂತೆ ಇತರ ಗಣ್ಯರೊಂದಿಗೆ ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.
- ಮುಂದುವರೆದು, ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾದ ಡಾ. ಬಿ.ಆರ್. ಅಥಣಿ, ಸಿರಿ ಧಾನ್ಯ ತಜ್ಞರು ಹಾಗೂ ಸದಸ್ಯರು ಉ.ಪ್ರಾ.ವಿ.ಕೇಂದ್ರ ಬಾಗಲಕೋಟೆ ರವರು ಮಾತನಾಡಿ ಸಿರಿ ಧಾನ್ಯಗಳನ್ನು ಆಹಾರ ಪದ್ಧತಿಯಲ್ಲಿ ಉಪಯೋಗಿಸುವುದರಿಂದ ಆಗುವ ಪ್ರಯೋಜನಗಳನ್ನು ವಿದ್ಯಾರ್ಥಿಗಳಿಗೆ ವಿವರವಾಗಿ ತಿಳಿಸಿದರು ಮತ್ತು ಸಿರಿ ಧಾನ್ಯಗಳ ಸಂಸ್ಕರಿಸಿದ ಪೊಟ್ಟಣಗಳನ್ನು ವಿದ್ಯಾರ್ಥಿಗಳಿಗೆ ನೀಡುವುದರ ಮೂಲಕ, ಆಯಾ ಧಾನ್ಯಗಳ ಆರೋಗ್ಯಕರ ಮಾಹಿತಿಯನ್ನು, ವಿದ್ಯಾರ್ಥಿಗಳ ಮನ ಮುಟ್ಟುವಂತೆ ತಿಳಿಸಿದರು.





3. **ವೈಜ್ಞಾನಿಕ ಕಾರ್ಯಕ್ರಮಗಳು:**

❖ **ಸರ್ಕಾರಿ ಪೌಢ ಶಾಲೆ ಸೀಮಿಕೇರಿ, ತಾ||ಜಿ|| ಬಾಗಲಕೋಟೆ - “ವಿಜ್ಞಾನ ಪ್ರದರ್ಶಿಕೆಗಳ ಪ್ರಾತ್ಯಕ್ಷಿಕೆ”:**

- ದಿನಾಂಕ: ೦೫.೦೬.೨೦೨೨ ರಂದು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆಯಲ್ಲಿ, ಸರ್ಕಾರಿ ಪೌಢ ಶಾಲೆ ಸೀಮಿಕೇರಿ, ತಾ||ಜಿ|| ಬಾಗಲಕೋಟೆ ಯ ೧೦ನೇ ತರಗತಿಯ ವಿದ್ಯಾರ್ಥಿಗಳಿಗೆ ಹೊರಾಂಗಣ ಮತ್ತು ಒಳಾಂಗಣ ಪ್ರದರ್ಶಿಕೆಗಳ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.
- ಸದರಿ ಕಾರ್ಯಕ್ರಮದಲ್ಲಿ ಒಟ್ಟು ೮೦ ವಿದ್ಯಾರ್ಥಿಗಳು ಹಾಗೂ ಸಹ ಶಿಕ್ಷಕರು ಭಾಗವಹಿಸಿ ವಿಜ್ಞಾನ ಪ್ರದರ್ಶಿಕೆಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಂಡರು.






❖ **ತೋಟಗಾರಿಕೆ ವಿಶ್ವ ವಿದ್ಯಾಲಯ ಬಾಗಲಕೋಟೆ – “ನೇತ್ರದಾನ ಜಾಗೃತಿ ಕಾರ್ಯಕ್ರಮ”.**

➢ ದಿನಾಂಕ: ೨೩.೦೯.೨೦೨೨ ರಂದು ತೋಟಗಾರಿಕೆ ವಿಶ್ವ ವಿದ್ಯಾಲಯದ ಮುಖ್ಯ ಪ್ರೇಕ್ಷಾಗೃಹದಲ್ಲಿ, ವಿದ್ಯಾರ್ಥಿ ಕಲ್ಯಾಣ ನಿರ್ದೇಶನಾಲಯ, ತೋ.ವಿ.ವಿ. ಬಾಗಲಕೋಟೆ, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ಹಾಗೂ ಎಸ್.ಜಿ.ಎಂ. ನೇತ್ರ ಬ್ಯಾಂಕ್ ಮತ್ತು ಸಂಶೋಧನಾ ಪ್ರತಿಷ್ಠಾನ, ಎಂ.ಎ.ಜೋಷಿ ನೇತ್ರ ಸಂಸ್ಥೆ, ಹುಬ್ಬಳ್ಳಿ ಇವರ ಸಂಯುಕ್ತ ಆಶ್ರಯದಲ್ಲಿ “ನೇತ್ರದಾನ ಜಾಗೃತಿ ಕಾರ್ಯಕ್ರಮವನ್ನು” ಆಯೋಜಿಸಲಾಯಿತು, ಈ ಕಾರ್ಯಕ್ರಮದಲ್ಲಿ ತೋಟಗಾರಿಕೆ ವಿಶ್ವ ವಿದ್ಯಾಲಯದ ಒಟ್ಟು ೧೦೦ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಇತರ ಸಿಬ್ಬಂದಿಗಳು ಭಾಗವಹಿಸಿದ್ದರು.

➢ ಕಾರ್ಯಕ್ರಮದ ಅಧ್ಯಕ್ಷರಾಗಿ ಡಾ|| ಕೆ.ಎಂ.ಇಂದ್ರೇಶ, ಕುಲಪತಿಗಳು ತೋ.ವಿ.ವಿ. ಬಾಗಲಕೋಟೆ ರವರು ಆಗಮಿಸಿದ್ದರು, ಅದರಂತೆ ಮುಖ್ಯ ಅತಿಥಿಗಳಾಗಿ ಡಾ|| ಕೃಷ್ಣ ಪ್ರಸಾದ್, ಅಧ್ಯಕ್ಷರು, ಎಂ.ಎA.ಜೋಷಿ ನೇತ್ರ ಸಂಸ್ಥೆ, ಹುಬ್ಬಳ್ಳಿ ರವರು ಆಗಮಿಸಿದ್ದರು, ಗೌರವ ಅತಿಥಿಗಳಾಗಿ ಡಾ|| ರಾಮಚಂದ್ರ ನಾಯಕ್, ಡೀನ್, ವಿದ್ಯಾರ್ಥಿ ಕಲ್ಯಾಣ, ತೋ.ವಿ.ವಿ. ಬಾಗಲಕೋಟೆ ಯವರು ಉಪಸ್ಥಿತರಿದ್ದರು.






- ❖ **ಸ್ವಾಮಿ ವಿವೇಕಾನಂದ ಅಂತರಾಷ್ಟ್ರೀಯ ಶಾಲೆ, ಬೀಳಗಿ – “ವೈಜ್ಞಾನಿಕ ಚಿಂತನಾ ಕಾರ್ಯಕ್ರಮ”**

- ➢ ದಿನಾಂಕ: ೧೮.೧೧.೨೦೨೨ ರಂದು ಬಾಗಲಕೋಟೆ ಜಿಲ್ಲೆ, ಬೀಳಗಿ ತಾಲೂಕಿನ ಸ್ವಾಮಿ ವಿವೇಕಾನಂದ ಅಂತರಾಷ್ಟ್ರ¢Ãಯ ಶಾಲೆ, ಬೀಳಗಿಯಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ಹಾಗೂ ಸ್ವಾಮಿ ವಿವೇಕಾನಂದ ಅಂತರಾಷ್ಟ್ರೀಯ ಶಾಲೆ, ಬೀಳಗಿ ಇವರ ಸಂಯುಕ್ತ ಆಶ್ರಯದಲ್ಲಿ “**ವೈಜ್ಞಾನಿಕ ಚಿಂತನಾ ಕಾರ್ಯಕ್ರಮ**” ವನ್ನು ಹಮ್ಮಿಕೊಳ್ಳಲಾಯಿತು, ಈ ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದ ಅಂತರಾಷ್ಟ್ರೀಯ ಶಾಲೆ, ಬೀಳಗಿಯ ಒಟ್ಟು ೮೫ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.
- ➢ ಕಾರ್ಯಕ್ರಮದ ಉದ್ಘಾಟಕರಾಗಿ ಡಾ|| ಟಿ.ಬಿ.ಅಳ್ಳೊಳ್ಳಿ , ಕುಲಸಚಿವರು ತೋ.ವಿ.ವಿ. ಬಾಗಲಕೋಟೆ, ಸದಸ್ಯ ಕಾರ್ಯದರ್ಶಿಗಳು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆ ರವರು ಆಗಮಿಸಿದ್ದರು, ಅದರಂತೆ ಇತರ ಗಣ್ಯರೊಂದಿಗೆ ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.
- ➢ ಸದರಿ ಕಾರ್ಯಕ್ರಮದಲ್ಲಿ “ವೈಜ್ಞಾನಿಕ ಚಿಂತನಾ ಕಾರ್ಯಕ್ರಮ” ದ ಅಂಗವಾಗಿ ದಿನಾಂಕ:೧೨.೧೧.೨೦೨೨ ರಂದು ಸ್ವಾಮಿ ವಿವೇಕಾನಂದ ಅಂತರಾಷ್ಟ್ರೀಯ ಶಾಲೆ, ಬೀಳಗಿಯಲ್ಲಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ **“ನಿಬಂಧ ಸ್ಪರ್ಧೆ-ಮೂಢನಂಬಿಕೆಯ ನಿರ್ಮೂಲನೆ”** ಯ ವಿಜೇತರಿಗೆ ಉಪ ಪ್ರಾದೇಶಿಕ ವಿeಇÁನ ಕೇಂದ್ರ ಬಾಗಲಕೋಟೆ ವತಿಯಿಂದ ಬಹುಮಾನಗಳನ್ನು ವಿತರಿಸಲಾಯಿತು.





- ❖ **ಆರ್.ಬಿ.ಜಿ. ಸರ್ಕಾರಿ ಪ್ರೌಢ ಶಾಲೆ, ಲೋಕಾಪುರ – “ವೈಜ್ಞಾನಿಕ ಚಿಂತನಾ ಕಾರ್ಯಕ್ರಮ”**

- ➢ ದಿನಾಂಕ: ೦೨.೧೨.೨೦೨೨ ರಂದು ಬಾಗಲಕೋಟೆ ಜಿಲ್ಲೆ, ಮುಧೋಳ ತಾಲೂಕಿನ ಆರ್.ಬಿ.ಜಿ. ಸರ್ಕಾರಿ ಪ್ರೌಢ ಶಾಲೆ, ಲೋಕಾಪುರದಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ಹಾಗೂ ಆರ್.ಬಿ.ಜಿ. ಸರ್ಕಾರಿ ಪ್ರೌಢ ಶಾಲೆ, ಲೋಕಾಪುರ ಇವರ ಸಂಯುಕ್ತ ಆಶ್ರಯದಲ್ಲಿ “**ವೈಜ್ಞಾನಿಕ ಚಿಂತನಾ ಕಾರ್ಯಕ್ರಮ ಹಾಗೂ ಇ-ಆಡಳಿತದ ಮಾಸಾಚರಣೆ**”ಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು, ಈ ಕಾರ್ಯಕ್ರಮದಲ್ಲಿ ಆರ್.ಬಿ.ಜಿ. ಸರ್ಕಾರಿ ಪ್ರೌಢ ಶಾಲೆ, ಲೋಕಾಪುರದ ಒಟ್ಟು ೧೫೦ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.
- ➢ ಕಾರ್ಯಕ್ರಮದ ಉದ್ಘಾಟಕರಾಗಿ ಡಾ|| ಟಿ.ಬಿ.ಅಳ್ಳೊಳ್ಳಿ , ಕುಲಸಚಿವರು ತೋ.ವಿ.ವಿ. ಬಾಗಲಕೋಟೆ, ಸದಸ್ಯ ಕಾರ್ಯದರ್ಶಿಗಳು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆ ರವರು ಆಗಮಿಸಿದ್ದರು, ಅದರಂತೆ ಇತರ ಗಣ್ಯರೊಂದಿಗೆ ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

- ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ|| ಟಿ.ಬಿ.ಅಳ್ಳೊಳ್ಳಿ ರವರು, ಪ್ರಸ್ತುತ ಸಮಾಜದಲ್ಲಿ ಆಚರಣೆ ಮಾಡಲಾಗುತ್ತಿರುವ ಅಂದ ಶ್ರದ್ದೆಗಳು ಹಾಗೂ ಕಂದಾಚಾರಗಳ ಬಗ್ಗೆ ಉದಾಹರಣೆಗಳೊಂದಿಗೆ ಅರಿವು ಮೂಡಿಸುವುದರ ಮೂಲಕ ವೈಜ್ಞಾನಿಕ ಚಿಂತನಾ ಕಾರ್ಯಕ್ರಮದ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.
- ಸದರಿ ಕಾರ್ಯಕ್ರಮದಲ್ಲಿ "ವೈಜ್ಞಾನಿಕ ಚಿಂತನಾ ಕಾರ್ಯಕ್ರಮ ಹಾಗೂ ಇ-ಆಡಳಿತದ ಮಾಸಾಚರಣೆ" ಯ ಅಂಗವಾಗಿ ದಿನಾಂಕ:೨೯.೧೧.೨೦೨೨ ರಂದು ಆರ್.ಬಿ.ಜಿ. ಸರ್ಕಾರಿ ಪೌಢ ಶಾಲೆ, ಲೋಕಾಪುರದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ **"ನಿಬಂಧ ಸ್ಪರ್ಧೆ-ಇ-ಆಡಳಿತದ ಮಹತ್ವ**" ದ ವಿಜೇತರಿಗೆ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆ ವತಿಯಿಂದ ಬಹುಮಾನಗಳನ್ನು ವಿತರಿಸಲಾಯಿತು.



## 4. ವಿಜ್ಞಾನ ಪ್ರದರ್ಶನಗಳ ಪ್ರದರ್ಶನ

- **ಸರ್ಕಾರಿ ಪೌಢ ಶಾಲೆ ಬಿ.ಟಿ.ಡಿ.ಎ. ಬಾಗಲಕೋಟೆ, - "ವಿಜ್ಞಾನ ಪ್ರದರ್ಶಿಕೆಗಳ ಪ್ರಾತ್ಯಕ್ಷಿಕೆ"**

ದಿನಾಂಕ: ೨೯.೧೨.೨೦೨೨ ರಂದು ಸರ್ಕಾರಿ ಪೌಢ ಶಾಲೆ ಬಿ.ಟಿ.ಡಿ.ಎ ಬಾಗಲಕೋಟೆಯ ವಿದ್ಯಾರ್ಥಿಗಳಿಗೆ ವಿಜ್ಞಾನ ಪ್ರದರ್ಶಿಕೆಗಳ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.



❖ **ಸರ್ಕಾರಿ ಪ್ರೌಢ ಶಾಲೆ ತೋಳಮಟ್ಟಿ, ತಾ||ಬೀಳಗಿ ಜಿ|| ಬಾಗಲಕೋಟೆ - "ವಿಜ್ಞಾನ ಪ್ರದರ್ಶಿಕೆಗಳ ಪ್ರಾತ್ಯಕ್ಷಿಕೆ".**

ದಿನಾಂಕ: ೩೧.೧೨.೨೦೨೨ ರಂದು ಸರ್ಕಾರಿ ಪ್ರೌಢ ಶಾಲೆ ತೋಳಮಟ್ಟಿ, ತಾ|| ಬೀಳಗಿ ಜಿ|| ಬಾಗಲಕೋಟೆ ಯ ವಿದ್ಯಾರ್ಥಿಗಳಿಗೆ ವಿಜ್ಞಾನ ಪ್ರದರ್ಶಿಕೆಗಳ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.









**5. ಪ್ರಮುಖ ದಿನಾಚರಣೆಗಳು:**

❖ **"ವಿಶ್ವ ಪರಿಸರ ದಿನಾಚರಣೆ-೨೦೨೨":**

➢ ದಿನಾಂಕ: ೦೫-೦೬-೨೦೨೨ ರಂದು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆ, ರಾಷ್ಟ್ರೀÃಯ ಸೇವಾ ಯೋಜನೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ಹಾಲು ಉತ್ಪಾದಕರ ಸಂಸ್ಥೆ ಬಾಗಲಕೋಟೆ ಇವರ ಸಂಯುಕ್ತ ಆಶ್ರಯದಲ್ಲಿ "ವಿಶ್ವ ಪರಿಸರ ದಿನಾಚರಣೆ-೨೦೨೨" ನ್ನು ಕರ್ನಾಟಕ ಹಾಲು ಉತ್ಪಾದಕರ ಸಂಸ್ಥೆ ಬಾಗಲಕೋಟೆ (ಏಒಈ) ಇವರ ಮುಖ್ಯ ಆವರಣದಲ್ಲಿ ಆಚರಿಸಲಾಯಿತು.

➢ ಸಾರ್ವಜನಿಕರು ಪ್ಲಾಸ್ಟಿಕ್ ನಿರ್ಮೂಲನೆ ಬಗ್ಗೆ ಹೆಚ್ಚಿನ ನಿಘಾ ವಹಿಸಬೇಕು ಮತ್ತು ಜಿಲ್ಲಾಡಳಿತದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಂಡು ಪರಿಸರದ ರಕ್ಷಣೆಯನ್ನು ಮಾಡಬೇಕೆಂದು ಶ್ರೀ ಟಿ.ಬೂಬಾಲನ್, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಬಾಗಲಕೋಟೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.





- **ಡಾ|| ಹೆಚ್ ನರಸಿಂಹಯ್ಯರವರ ಜನ್ಮ ದಿನಾಚರಣೆ ಹಾಗೂ ವಿಶ್ವ ಪರಿಸರ ದಿನಾಚರಣೆ.**
  - ದಿನಾಂಕ: ೦೬.೦೬.೨೦೨೨ ರಂದು ಸರ್ಕಾರಿ ಆದರ್ಶ ವಿದ್ಯಾಲಯ, ಸೆಕ್ಟರ್ ನಂ-೪೩, ನವನಗರ, ಬಾಗಲಕೋಟೆಯಲ್ಲಿ, ಭೌತಶಾ**ಸ್ತ್ರ**ಜ್ಞ, ಶಿಕ್ಷಣ ತಜ್ಞರು ಹಾಗೂ ಮಾನವತಾವಾದಿಗಳಾದ ಡಾ|| ಹೆಚ್ ನರಸಿಂಹಯ್ಯರವರ ಜನ್ಮ ದಿನಾಚರಣೆ ಹಾಗೂ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು, ಈ ಕಾರ್ಯಕ್ರಮದಲ್ಲಿ ಒಟ್ಟು ೨೦೦ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಭಾಗವಹಿಸಿದ್ದರು.
  - ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ ಡಾ|| ಟಿ.ಬಿ.ಅಳ್ಳೊಳ್ಳಿ , ಕುಲಸಚಿವರು ತೋವಿ.ವಿ. ಬಾಗಲಕೋಟೆ, ಸದಸ್ಯ ಕಾರ್ಯದರ್ಶಿಗಳು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆರವರು ಹಾಗೂ ಗಣ್ಯರು ಸಸಿಗಳನ್ನು ನೆಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.
  - ಇಂದಿನ ಮೌಢ್ಯತೆಗಳಿಗೆ ವೈಜ್ಞಾನಿಕ ಚಿಂತನೆಗಳು ತುಂಬಾ ಅವಶ್ಯಕವಾಗಿವೆ ಡಾಂಬಿಕ ಮೂಢನಂಬಿಕೆಗಳು ಸಮಾಜವನ್ನು ಅನಾರೋಗ್ಯ ಮಾಡಿದೆ ಈ ನಿಟ್ಟಿನಲ್ಲಿ ಡಾ|| ಎಚ್ ನರಸಿಂಹಯ್ಯ ಇವುಗಳಿಗೆ ಸವಾಲಾಗಿ ನಿಂತು ಸಶಕ್ತ ಸಮಾಜಕ್ಕೆ ವಿಜ್ಞಾನ ಅವಶ್ಯಕತೆ ಎಂದು ಹೇಳಿದ್ದಾರೆಂದು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ|| ಟಿ.ಬಿ.ಅಳ್ಳೊಳ್ಳಿ ರವರು, ಅವರ ಜನ್ಮದಿನದ ಅಂಗವಾಗಿ ಸರಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಕರೆ ನೀಡಿದರು, ಅಲ್ಲದೆ ಪರಿಸರವನ್ನು ರಕ್ಷಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ವಿಶ್ವ ಪರಿಸರ ದಿನಾಚರಣೆಯಂದು ಸರ್ವರನ್ನು ಉದ್ದೇಶಿಸಿ ಮಾತನಾಡಿದರು.






- **"ಅಂತರಾಷ್ಟ್ರೀಯ ಚಂದ್ರನ ದಿನಾಚರಣೆ":**
  - ದಿನಾಂಕ: ೨೦.೦೭.೨೦೨೨ ರಂದು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆಯಲ್ಲಿ, ಜವಾಹರ್ ಲಾಲ್ ನೆಹರು ತಾರಾಲಯ ಬೆಂಗಳೂರು, ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರ , ಬೆಂಗಳೂರು ಹಾಗೂ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ಇವರ ಸಂಯುಕ್ತ ಆಶ್ರಯದಲ್ಲಿ "ಅಂತರಾಷ್ಟ್ರೀಯ ಚಂದ್ರನ ದಿನಾಚರಣೆ" ಯನ್ನು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಆನ್‌ಲೈನ್ ಹೈಬ್ರೀಡ್ ಕಮ್ಮಟ ಏರ್ಪಡಿಸುವುದರ ಮೂಲಕ ಆಚರಿಸಲಾಯಿತು, ಈ ಕಾರ್ಯಕ್ರಮದಲ್ಲಿ ಶ್ರೀ ಗುರುಬಸವ ಪಬ್ಲಿಕ್ ಸ್ಕೂಲ್, ಮುರನಾಳ (ಪು.ಕೇ.) ಯ ಒಟ್ಟು ೪೬ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.
  - ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ ಡಾ|| ಟಿ.ಬಿ.ಅಳ್ಳೊಳ್ಳಿ , ಕುಲಸಚಿವರು ತೋವಿ.ವಿ. ಬಾಗಲಕೋಟೆ, ಸದಸ್ಯ ಕಾರ್ಯದರ್ಶಿಗಳು ಉಪ ಪ್ರಾದೇಶಿಕ ವಿಜ್ಞಾನ

ಕೇಂದ್ರ ಬಾಗಲಕೋಟೆ, ಇತರ ಗಣ್ಯರು ಮತ್ತು ವಿದ್ಯಾರ್ಥಿಗಳು ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

- ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ|| ಟಿ.ಬಿ.ಅಳ್ಳೊಳ್ಳಿ ರವರು, "ಅಂತರಾಷ್ಟ್ರÃಯ ಚಂದ್ರ ದಿನಾಚರಣೆ" ಯ ಮಹತ್ವವನ್ನು ಮತ್ತು ಚಂದ್ರನ ಕೆಲ ವೈಜ್ಞಾನಿಕ ವಿಷಯಗಳನ್ನು ವಿದ್ಯಾರ್ಥಿಗಳಿಗೆ ತಿಳಿಯಪಡಿಸಿದರು, ಅದರಂತೆ ಜವಾಹರ್ ಲಾಲ್ ನೆಹರು ತಾರಾಲಯ ಬೆಂಗಳೂರು ರವರು ನಡೆಸಿಕೊಡುವ ಕಮ್ಮಟದಲ್ಲಿ ಭಾಗವಹಿಸಿ ಚಂದ್ರನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆದುಕೊಂಡು ವಿದ್ಯಾರ್ಥಿಗಳು ತಮ್ಮ ವೈಜ್ಞಾನಿಕ ಚಿಂತನೆಯನ್ನು ಬೆಳೆಸಿಕೊಳ್ಳಬೇಕೆಂದು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.








### ❖ "ಅಂತರಾಷ್ಟ್ರೀಯ ಓಝೋನ್ ದಿನಾಚರಣೆ":

ದಿನಾಂಕ: ೨೦.೦೯.೨೦೨೨ ರಂದು ಬಾಗಲಕೋಟೆ ಜಿಲ್ಲೆ, ಬಾದಾಮಿ ತಾಲೂಕಿನ ಸರ್ಕಾರಿ ಪ್ರೌಢ ಶಾಲೆ, ಕೆರೂರಿನಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ಹಾಗೂ ಸರ್ಕಾರಿ ಪ್ರೌಢ ಶಾಲೆ, ಕೆರೂರು ಇವರ ಸಂಯುಕ್ತ ಆಶ್ರಯದಲ್ಲಿ "ಅಂತರಾಷ್ಟ್ರೀಯ ಓಝೋನ್ ದಿನಾಚರಣೆ" ಯನ್ನು ಆಚರಿಸಲಾಯಿತು, ಈ ಕಾರ್ಯಕ್ರಮದಲ್ಲಿ ಸರ್ಕಾರಿ ಪ್ರೌಢ ಶಾಲೆ, ಕೆರೂರಿನ ಒಟ್ಟು ೮೦ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ ಡಾ|| ಟಿ.ಬಿ.ಅಳ್ಳೊಳ್ಳಿ , ಕುಲಸಚಿವರು ತೋ.ವಿ.ವಿ. ಬಾಗಲಕೋಟೆ, ಸದಸ್ಯ ಕಾರ್ಯದರ್ಶಿಗಳು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆ, ಇತರ ಗಣ್ಯರು ಮತ್ತು ವಿದ್ಯಾರ್ಥಿಗಳು ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸದರಿ ಕಾರ್ಯಕ್ರಮದಲ್ಲಿ "ಅಂತರಾಷ್ಟ್ರೀಯ ಓಝೋನ್ ದಿನಾಚರಣೆ" ಯ ಅಂಗವಾಗಿ ದಿನಾಂಕ:೧೭.೦೯.೨೦೨೨ ರಂದು ಸರ್ಕಾರಿ ಪ್ರೌಢ ಶಾಲೆ, ಕೆರೂರಿನ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ "ರಸ ಪ್ರಶ್ನೆ ಸ್ಪರ್ಧೆ" ಯ ವಿಜೇತರಿಗೆ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆ ವತಿಯಿಂದ ಬಹುಮಾನಗಳನ್ನು ವಿತರಿಸಲಾಯಿತು.

❖ **“ಕರ್ನಾಟಕ ರಾಜ್ಯೋತ್ಸವ-೨೦೨೨”:**

ದಿನಾಂಕ: ೦೧.೧೧.೨೦೨೨ ರಂದು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಕರ್ನಾಟಕ ರಾಜ್ಯೋತ್ಸವದ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಸದರಿ ಕಾರ್ಯಕ್ರಮದಲ್ಲಿ ಡಾ|| ಟಿ.ಬಿ.ಅಳ್ಳೊಳ್ಳಿ , ಕುಲಸಚಿವರು ತೋ.ವಿ.ವಿ. ಬಾಗಲಕೋಟೆ, ಸದಸ್ಯ ಕಾರ್ಯದರ್ಶಿಗಳು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆ, ಶ್ರೀ ಈರಣ್ಣ ಬುಳ್ಳಾ, ಕ್ಯೂರೇಟರ್, ಶ್ರೀ ಆಸೀಫ ಬಾಗವಾನ, ತಾಂತ್ರಿಕ ಸಹಾಯಕರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆ,ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸಿಬ್ಬಂದಿ ವರ್ಗದವರು ಹಾಗೂ ಸರ್ಕಾರಿ ಪ್ರೌಢ ಶಾಲೆ, ಕೇಸನೂರಿ ನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## 6. ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಉದ್ಘಾಟನಾ ಸಮಾರಂಭ:

**ದಿನಾಂಕ: ೨೯.೧೨.೨೦೨೨** ರಂದು ತೋಟಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯ ಬಾಗಲಕೋಟೆಯ ಆವರಣದಲ್ಲಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು ಇವರ ಆಶ್ರಯದಲ್ಲಿ ಸ್ಥಾಪಿಸಲಾದ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆಯ ಉದ್ಘಾಟನಾ ಸಮಾರಂಭವನ್ನು ಆಯೋಜಿಸಲಾಗಿತ್ತು.

ಸದರಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಸನ್ಮಾನ್ಯ ಶ್ರೀ ಪಿ.ಸಿ.ಗದ್ದಿಗೌಡರ, ಲೋಕಸಭಾ ಸದಸ್ಯರು, ಬಾಗಲಕೋಟೆ ರವರು ಉದ್ಘಾಟಿಸಿದರು.

ಮುಂದುವರೆದು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆಯ ಹೊರಾಂಗಣ ಪ್ರದರ್ಶಿಕೆಗಳನ್ನು ಸನ್ಮಾನ್ಯ ಶ್ರೀ ಪಿ. ಹೆಚ್. ಪೂಜಾರ, ವಿಧಾನ ಪರಿಷತ್ ಸದಸ್ಯರು,

ಬಾಗಲಕೋಟೆ ರವರು ಉದ್ಘಾಟಿಸಿದರು ಮತ್ತು ಸದರಿ ಪ್ರದರ್ಶಿಕೆಗಳ ಉಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಂಡು ವೈಜ್ಞಾನಿಕ ಚಿಂತನೆಯನ್ನು ಬೆಳೆಸಿಕೊಳ್ಳಬೇಕೆಂದು ಹೇಳಿದರು.

ಮುಂದುವರೆದು, ಡಾ.ಟಿ.ಬಿ.ಅಳ್ಳೊಳ್ಳಿ, ಕುಲಸಚಿವರು, ತೋ.ವಿ.ವಿ ಬಾಗಲಕೋಟೆ ಹಾಗೂ ಸದಸ್ಯ ಕಾರ್ಯದರ್ಶಿಗಳು ಉ.ಪ್ರಾ.ವಿ.ಕೇ. ಬಾಗಲಕೋಟೆ ರವರು ಮಾತನಾಡಿ, ವಿಜ್ಞಾನ ಕೇಂದ್ರದಲ್ಲಿ ಅಳವಡಿಸಲಾಗಿರುವ ವೈಜ್ಞಾನಿಕ ಪ್ರದರ್ಶಿಕೆಗಳ ಮಾಹಿತಿಗಳೊಂದಿಗೆ, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ವತಿಯಿಂದ ಆಯೋಜಿಸಲಾಗುವ ವೈಜ್ಞಾನಿಕ ಚಿಂತನಾ ಕಾರ್ಯಕ್ರಮಗಳ ಬಗ್ಗೆ ಹಾಗೂ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಮೂಲ ಉದ್ದೇಶಗಳನ್ನು ವಿಸ್ತಾರವಾಗಿ ತಿಳಿಸಿದರು.




**ಸಂಪರ್ಕ:**

ಕುಲಸಚಿವರು/ಸದಸ್ಯ ಕಾರ್ಯದರ್ಶಿಗಳು
ಉಪಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ
ತೋಟಗಾರಿಕ ವಿಶ್ವವಿದ್ಯಾಲಯ, ಬಾಗಲಕೋಟೆ
ದೂರವಾಣಿ: 08155-285994
ಇಮೇಲ್: drhnschosur@gmail.com

# ದಾವಣಗೆರೆ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ

ಹುಲುಪಿನಕಟ್ಟೆ ,ಆನಗೋಡು, ದಾವಣಗೆರೆ-577566

## 1. ವಿಶ್ವ ಪರಿಸರ ದಿನಾಚರಣೆ

**ಉದ್ದೇಶ**: ಪರಿಸರದ ಬಗ್ಗೆ ಸಮಾಜಗಳಲ್ಲಿ ಅರಿವು ಮೂಡಿಸುವುದು ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪರಿಸರದ ಸ್ಥಿತಿ ಗತಿ ತಿಳಿಯುವುದು, ಸ್ವಚ್ಛ ಪರಿಸರದ ಅಗತ್ಯತೆಯನ್ನು ಅರಿಯುವುದು ಹಾಗೂ ಜನರಲ್ಲಿ ಪರಿಸರ ಸಂರಕ್ಷಣೆಯ ಜಾಗೃತಿಯನ್ನು ಮೂಡಿಸುವುದು.

**ಕಾರ್ಯಕಮದ ವಿವರ**: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ದಾವಣಗೆರೆ ನಗರದ ಅರಣ್ಯ ಇಲಾಖೆ ವತಿಯಿಂದ ದಿನಾಂಕ: 06/06/2022 ರಂದು ದಾವಣಗೆರೆ ವಿಜ್ಞಾನ ಕೇಂದ್ರದಲ್ಲಿ ಗಿಡ ನೆಡುವ ಮೂಲಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಮತ್ತು ಲಭ್ಯ ವಿರುವ ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಶಾಲೆಗಳಲ್ಲಿ ಸ್ವಚ್ಛತೆ ಹಾಗೂ ಗಿಡ ಬೆಳೆಸುವ ಬಗ್ಗೆ ಮತ್ತು ಪರಿಸರದ ಬಗ್ಗೆ ಅರಿವು ಮೂಡಿಸಲಾಗಿದೆ.






## 2. ವಿಶ್ವ ಜನಸಂಖ್ಯೆ ದಿನಾಚರಣೆ

**ಉದ್ದೇಶ**: ಜನಸಂಖ್ಯೆ ನಿಯಂತ್ರಣ, ಜನಸಂಖ್ಯೆಯ ಸಮಸ್ಯೆಗಳ ಅರಿವನ್ನು ಜನಸಾಮಾನ್ಯರಲ್ಲಿ ಮೂಡಿಸುವುದು ಮತ್ತು ಲೈಂಗಿಕ ಶಿಕ್ಷಣ, ಹೆಣ್ಣು ಮಗುವಿನ ಶಿಕ್ಷಣ ಮತ್ತು ಲೈಂಗಿಕ ಸೋಂಕಿನಿಂದ ಹರಡುವ ರೋಗಗಳ ಬಗ್ಗೆ ತಿಳುವಳಿಕೆ ನೀಡುವುದು,

**ಕಾರ್ಯಕ್ರಮದ ವಿವರ**: ಪ್ರೌಢಶಾಲಾ ಮಕ್ಕಳಿಗೆ ವಿಶ್ವ ಜನಸಂಖ್ಯೆ ದಿನಾಚರಣೆಯನ್ನು ದಿನಾಂಕ: 11.06.2022 ರಂದು ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಾಗಾರ ಹಾಗೂ ಮಕ್ಕಳಿಗೆ ಪ್ರಬಂಧ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗ್ಗಿತ್ತು.






**ಜನಸಂಖ್ಯೆ ದಿನಾಚರಣೆ: ಪ್ರಬಂಧ ಸ್ಪರ್ಧೆ**

**ಮಾಯಕೊಂಡ:** ಮಾಯಕೊಂಡದ ಆನಗೋಡಿನ ಸಮೀಪದ ವಿವಿಧ ಪ್ರೌಢ ಶಾಲೆಗಳಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಪ್ರೌಢಶಾಲೆಗಳಲ್ಲಿ ಪ್ರಬಂಧ ಸ್ಪರ್ಧೆ ಏರ್ಪಡಿಸಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ದಾವಣಗೆರೆ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಹುಳುಪಿನಕಟ್ಟೆ, ಆನಗೋಡು ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಜನಸಂಖ್ಯಾ ದಿನಾಚರಣೆ ಪ್ರಯುಕ್ತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ವಿಜ್ಞಾನ ವಿಷಯ ಪರೀವೀಕ್ಷಕಿ ಹಾಗೂ ನೋಡಲ್ ಅಧಿಕಾರಿ ಆರ್.ಬಿ. ವಸಂತಕುಮಾರಿ, ವಿಜ್ಞಾನ ಕೇಂದ್ರದ ಕ್ಯೂರೇಟರ್ (ಕೇಂದ್ರದ ಸಂಚಾಲಕ) ಪಿ. ಅರುಣ್ ಸೇರಿದಂತೆ ಇತರರು ಇದ್ದರು.



## 3. ವಿಶ್ವ ಪರಿಸರ ಸಂರಕ್ಷಣಾ ದಿನ

ವಿಶ್ವ ಪರಿಸರ ಸಂರಕ್ಷಣಾ ದಿನಾಚರಣೆಯನ್ನು ದಿನಾಂಕ: 28.07.2022 ರಂದು ಮಹಿಳಾ ಸೇವಾ ಸಮಾಜ ಪ್ರೌಢಶಾಲೆ ಇಲ್ಲಿ ಹಮ್ಮಿಕೊಳ್ಳಲಾಗಿದ್ದು, ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮತ್ತು ಅರಿವು ಮೂಡಿಸುವುದು .ನಗರದ ಪ್ರೌಢಶಾಲಾ ಮಕ್ಕಳಿಗೆ ವಿಶ್ವ ಪರಿಸರ ಸಂರಕ್ಷಣಾ ದಿನಾಚರಣೆಯ ಪ್ರಯುಕ್ತ ಚಿತ್ರಕಲಾ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು. ಒಟ್ಟು 24 ಕಾಲೇಜು ವಿದ್ಯಾರ್ಥಿಗಳು ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.





## 4. ವಿಶ್ವ ಆಹಾರ ದಿನ

ವಿಶ್ವ ಆಹಾರ ದಿನವನ್ನು ದಿನಾಂಕ: 18.10.2022 ರಂದು ಎ.ವಿ.ಕಮಲಮ್ಮ ಮಹಿಳಾ ಕಾಲೇಜು, ದಾವಣಗೆರೆ ಇಲ್ಲಿ ಆಯೋಜಿಸಲಾಗಿದ್ದು, ಹಸಿವು ಮತ್ತು ಬಡತನದ ತೀವ್ರತೆಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲಾಯಿತು ಮತ್ತು ಆರೋಗ್ಯಕರ ಜೀವನ ನಡೆಸಲು ಪೌಷ್ಟಿಕಾಂಶವುಳ್ಳ ಆಹಾರ ಪ್ರತಿಯೊಬ್ಬರಿಗೂ ಅವಶ್ಯಕ ಎಂದು ತಿಳಿಸಲಾಯಿತು. ವಿಶ್ವ ಆಹಾರ ದಿನದ ಪ್ರಯುಕ್ತ ಕಾಲೇಜು ವಿದ್ಯಾರ್ಥಿಗಳಿಗೆ ಪೌಷ್ಠಿಕ ಆಹಾರ ಕುರಿತು ಉಪನ್ಯಾಸವನ್ನು ಹಮ್ಮಿಕೊಳ್ಳಲಾಗಿತ್ತು. ಒಟ್ಟು 144 ಕಾಲೇಜು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಜನತಾವಾಣಿ

ಜಗತ್ತಿನಲ್ಲೀಗ ಹೈಟೆಕ್ ರೋಗಗಳು ಬರುತ್ತಿವೆ: ಡಾ|| ಜಿ.ಶಂಕರ್ ಆತಂಕ

ಪರಿಶಿಷ್ಟ ಜಾತಿ–ಪಂಗಡದವರು ಹಕ್ಕುಗಳಿಗೆ ಸಾಂಘಿಕ ಹೋರಾಟ ನಡೆಸಬೇಕು: ಉಚ್ಚೆಂಗಪ್ಪ

## 5. ಸರ್ ಎಂ ವಿಶ್ವೇಶ್ವರಯ್ಯ ಜನ್ಮ ದಿನಾಚರಣೆ /ಇಂಜಿನಿಯರರ ದಿನ

ದೇಶ ಕಟ್ಟುವ ಇಂಜಿನಿಯರ್ ವೃತ್ತಿಗೆ ಗೌರವ ಸೂಚಿಸಲು ಹಾಗೂ ಭಾರತದ ಹೆಮ್ಮೆಯ ಇಂಜಿನಿಯರ್ ಪಿತಾಮಹಾ ಸರ್ ಎಂ ವಿಶ್ವೇಶ್ವರಯ್ಯ ನವರ ಸ್ಮರಣಾರ್ಥವಾಗಿ 5. ಸರ್ ಎಂ ವಿಶ್ವೇಶ್ವರಯ್ಯ ಜನ್ಮ ದಿನಾಚರಣೆ /ಇಂಜಿನಿಯರರ ದಿನವನ್ನು ದಿನಾಂಕ: 15.09.2022 ರಂದು ಆಚರಿಸಲಾಯಿತು. ಸದರಿ ಕಾರ್ಯಕ್ರಮದ ಉದ್ದೇಶವು ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿ ಮತ್ತು ಬೆಳವಣಿಗೆಯಲ್ಲಿ ಇಂಜಿನಿಯರರ ಪಾತ್ರದ ಬಗ್ಗೆ ಚರ್ಚಿಸುವುದು. ಇಂಜಿನಿಯರ್ ದಿನದ ಪ್ರಯುಕ್ತ ಪಾಲಿಟೆಕ್ನಿಕ್ ಕಾಲೇಜಿನ ವಿದ್ಯಾರ್ಥಿಗಳಿಗೆ,

ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಇಂಟರನೆಟ್ ಆಫ್ ತಿಂಗ್ಸ್ ವಿಷಯದ ಮೇಲೆ ಟೆಕ್ನಿಕಲ್ ಸೆಮಿನಾರ್ ಸ್ಪಧೆ ಹಮ್ಮಿಕೊಳ್ಳಲಾಗಿತ್ತು




**6. ವಿಶ್ವ ಓಜೋನ್ ದಿನ**

ವಿಶ್ವ ಓಜೋನ್ ದಿನವನ್ನು ದಿನಾಂಕ: 01.12.2022 ರಂದು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ ಇಲ್ಲಿ ಆಚರಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ ಓಜೋನ್ ಪದರ ಸವಕಳಿಯ ಅವಲೋಕನ ಮತ್ತು ಓಜೋನ್ ಪದರದ ಸವಕಳಿಯ ದುಷ್ಪರಿಣಾಮಗಳನ್ನು ಅರಿಯುವುದರ ಬಗ್ಗೆ ತಿಳಿಸಲಾಯಿತು. ವಿಶ್ವ ಓಜೋನ್ ದಿನದ ಅಂಗವಾಗಿ ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ವಿಶ್ವ ಚಿತ್ರ ಕಲೆ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು.



**7. ವಿಶ್ವ ಏಡ್ಸ್ ದಿನಾಚರಣೆ**

ವಿಶ್ವ ಏಡ್ಸ್ ದಿನಾಚರಣೆಯನ್ನು ದಿನಾಂಕ: 06.12.2022 ರಂದು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು , ದಾವಣಗೆರೆ ಇಲ್ಲಿ ಆಯೋಜಿಸಿ ಏಡ್ಸ್ ರೋಗ ಹರಡುವ ವಿಧಾನಗಳ ಬಗ್ಗೆ ಹಾಗೂ ಏಡ್ಸ್ ರೋಗದ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಏಡ್ಸ್ ರೋಗದ ಬಗ್ಗೆ ಅಗತ್ಯ ಮುನ್ನೆಚರಿಕೆ ಕ್ರಮಗಳನ್ನು ತಿಳಿಸಲಾಯಿತು. ಒಟ್ಟು 93 ವಿದ್ಯಾರ್ಥಿಗಳು ಹಾಗೂ ಶಿಕ್ಷಕರು/ಉಪನ್ಯಾಸಕರು ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಏಡ್ಸ್ ದಿನದ ನಿಮಿತ್ತ ಏಡ್ಸ್ ರೋಗದ ಜಾಗೃತಿ ಮತ್ತು ಮುನ್ನೆಚರಿಕೆ ಕ್ರಮಗಳನ್ನು ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಉಪನ್ಯಾಸವನ್ನು ಹಮ್ಮಿಕೊಳ್ಳಲಾಗಿತ್ತು ಮತ್ತು ಏಡ್ಸ್ ರೋಗ ಎಂಬುದು ಅಪಾಯಕಾರಿಯಾದ ಕಾಯಿಲೆಯಾಗಿದ್ದರೂ ಆರೋಗ್ಯಕರ ಜೀವನ ಶೈಲಿ ಪಾಲಿಸಿದರೆ ತುಂಬ ವರ್ಷಗಳ ಕಾಲ ಬದುಕಬಹುದು ಎನ್ನುವುದನ್ನು ಈ ಕಾರ್ಯಕ್ರಮವು ಪ್ರೇರೇಪಿಸಲಾಯಿತು ಹಾಗೂ

ಏಡ್ಸ್ ಕಾಯಿಲೆ ಬಗ್ಗೆ ಇರುವ ತಪ್ಪು ಕಲ್ಪನೆಗಳ ಬಗ್ಗೆ ಈ ಕಾರ್ಯಕ್ರಮದಲ್ಲಿ ಜಾಗೃತಿ ಮೂಡಿಸಲಾಯಿತು.






## 8. ಉತ್ತಮ ಆಡಳಿತ ತಿಂಗಳು

ಉತ್ತಮ ಆಡಳಿತ ತಿಂಗಳು ಕಾರ್ಯಕ್ರಮದ ಅಂಗವಾಗಿ ಕಾರ್ಯಕ್ರಮದ ವಿವರ:ಉತ್ತಮ ಆಡಳಿತ ತಿಂಗಳು ಕಾರ್ಯಕ್ರಮದ ಪ್ರಯುಕ್ತ ಜಿಲ್ಲೆಯ ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಉತ್ತಮ ಆಡಳಿತ ನಿರ್ವಹಿಸಲು ಉಪನ್ಯಾವನ್ನು ದಿನಾಂಕ: 06.01.2023 ರಂದು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು , ದಾವಣಗೆರೆ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಒಟ್ಟು 93 ವಿದ್ಯಾರ್ಥಿಗಳು ಹಾಗೂ ಶಿಕ್ಷಕರು/ಉಪನ್ಯಾಸಕರು ಭಾಗವಹಿಸಿದ್ದರು. ಉತ್ತಮ ಆಡಳಿತದ ಉಪನ್ಯಾಸದಿಂದ ವಿದ್ಯಾರ್ಥಿ ಹಾಗೂ ಶಿಕ್ಷಕರಿಗೆ ಆಡಳಿತದಲ್ಲಿ ಶಿಸ್ತುಬದ್ಧ ನಿಯಮಗಳನ್ನು ಅಳವಡಿಸಿಕೊಳ್ಳಲು ಪ್ರೇರೆಪಿಸಲಾಯಿತು





.

## 9. ವಿಜ್ಞಾನ ಶಿಕ್ಷಕರಿಗೆ ಕಾರ್ಯಾಗಾರ

ವಿಜ್ಞಾನ ಶಿಕ್ಷಕರಿಗೆ ವಿಷಯಾಂಶಗಳ ಕ್ಲಿಷ್ಟಾಂಶಗಳನ್ನು ಸರಳವಾಗಿ ಬೋಧಿಸುವ ಬಗ್ಗೆ ಎರಡು ದಿನಗಳ ತರಬೇತಿ ಕಾರ್ಯಾಗಾರವನ್ನು ದಿನಾಂಕ :07/12/2022 ಮತ್ತು 08/12/2022ರಂದು ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಾಗಾರದಲ್ಲಿ ಚಟುವಟಿಕೆಗಳ ಮೂಲಕ ಅರ್ಥಪೂರ್ಣ ಕಲಿಕೆ ಸಾಧಿಸುವುದು. ಶಿಕ್ಷಕರಲ್ಲಿ ವಿಜ್ಞಾನ ಕಲಿಕೆಯನ್ನು ಪರಿಣಾಮಕಾರಿಯಾಗಿ ಸಾಧಿಸಲಾಯಿತು. ಶಿಕ್ಷಕರ ಮೂಲಕ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ, ಧನಾತ್ಮಕ ಆಲೋಚನೆ ಮಾಡಿ ಕಲಿ ತತ್ವ ಪ್ರಾಯೋಗಿಕತೆಯನ್ನು ಬೆಳೆಸಲು ಈ ಕಾರ್ಯಕ್ರಮವು ಉತ್ತೇಜಿಸಿತ್ತು. ಸದರಿ ಕಾರ್ಯಕ್ರಮದಲ್ಲಿ ಒಟ್ಟು 111 ಶಿಕ್ಷಕರು ಭಾಗವಹಿಸಿದ್ದರು.







**ಸಂಪರ್ಕ:**

ಕ್ಯುರೇಟರ್

ದಾವಣಗೆರೆ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ

ಹುಲುಪಿನಕಟ್ಟೆ ,ಆನಗೋಡು, ದಾವಣಗೆರೆ-577566

ದೂರವಾಣಿ: 97423 13992

ಇಮೇಲ್: srscdavanagere@gmai.com